ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 10 ಮಂಗಳವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 145 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮುಡಾ ನಿವೇಶನ ಹಗರಣ: ಮುಖ್ಯಮಂತ್ರಿ ಸಿದ್ದರಾಮಯ್ಯ ಅರ್ಜಿ ವಿಚಾರಣೆ

ಸೆ.12ಕ್ಕೆ ಮುಂದೂಡಿಕೆ

- ಸರ್ಕಾರದ ಪರ ಅಡ್ವೋಕೇಟ್ ಜನರಲ್ ಶಶಿಕಿರಣ್‌ಶೆಟ್ಟಿ ಪ್ರಾಥಮಿಕ ತನಿಖೆ ವರದಿ ಸಲ್ಲಿಸದಿರುವ ಬಗ್ಗೆ ಆಕ್ಷೇಪ
- ಸಿದ್ದರಾಮಯ್ಯನವರು ಒಂದಲ್ಲಾ ಒಂದು ಅಧಿಕಾರದಲ್ಲಿದ್ದಾಗಲೇ ಸದರಿ ಭೂಮಿ ಸಂಬಂಧ ಪ್ರಕ್ರಿಯೆಗಳು ನಡೆದಿವೆ: ಸ್ನೇಹಮಯಿ ಕೃಷ್ಣ ಪರ ವಕೀಲರ ವಾದ





ಸರ್ಕಾರದ ಪರ ಅಡ್ವೋಕೇಟ್ ಜನರಲ್ ಶಶಿಕಿರಣ್‌ಶೆಟ್ಟಿ

ಸ್ನೇಹಮಯಿ ಕೃಷ್ಣ ಪರ ವಕೀಲರಾದ ಲಕ್ಷ್ಮಿ ಐಯ್ಯಂಗಾರ್



ಮುಡಾ ಕಚೇರಿ

ಬೆಂಗಳೂರು, ಸೆ.9(ಕೆಎಂಶಿ)–ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ರಾಜಭವನ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದನ್ನು ಪ್ರಶ್ನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಸೆ.12ಕ್ಕೆ ಮುಂದೂಡಿದೆ.

ಇಂದು ಮುಂದುವರೆದ ವಿಚಾರಣೆ ಸಂದರ್ಭದಲ್ಲಿ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರು, ಸೆ.12ರಂದು ಮಧ್ಯಾಹ್ನ 12 ಗಂಟೆಗೆ ವಿಚಾರಣೆ ಕೈಗೆತ್ತಿಕೊಳ್ಳುವುದಾಗಿ ತಿಳಿಸಿ, ಅಂದೇ ವಾದ–ಪ್ರತಿವಾದ ಪೂರ್ಣಗೊಳ್ಳಬೇಕು ಎಂದು ಸ್ಪಷ್ಟಪಡಿಸಿದರು. ವಾದ ಮತ್ತು ಪ್ರತಿವಾದಿ ವಕೀಲರುಗಳು ಒಬ್ಬರ ನಂತರ ಒಬ್ಬರು ವಾದ–ಪ್ರತಿವಾದ ಮಂಡಿಸುತ್ತಲೇ ಹೋದರೆ ಇದಕ್ಕೆ ಕೊನೆಯೇ ಇರುವುದಿಲ್ಲ. ಎರಡೂ ಕಡೆಯ ವಕೀಲರು ತಮ್ಮ ವಾದ ಮುಗಿಸಬೇಕು. ನಿಮ್ಮ ವಾದ ಸಂದರ್ಭದಲ್ಲೇ ಎಲ್ಲವನ್ನೂ ಮಂಡಿಸಿ ಎಂದು ತಾಕೀತು ಮಾಡಿದರು. ನಂತರ ಅರ್ಜಿದಾರರ ಪರ ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಾದ ಸುಪ್ರೀಂಕೋರ್ಟ್‌ನ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಅವರನ್ನು ಉದ್ದೇಶಿಸಿ ನ್ಯಾಯಮೂರ್ತಿಗಳು, 12ರಂದು ನ್ಯಾಯಾಲಯಕ್ಕೆ ಖುದ್ದು ಹಾಜರಾಗುವಿರಾ ಎಂದು ಪ್ರಶ್ನಿಸಿದಾಗ, ಹಾಜರಾಗುವುದಾಗಿ ಸಿಂಘ್ವಿ ಉತ್ತರಿಸಿದರು. ಈ ತಿಂಗಳ 12ರಂದು ಮಧ್ಯಾಹ್ನ 12 ಗಂಟೆಗೆ ವಿಚಾರಣೆಯನ್ನು ಕೈಗೆತ್ತಿಕೊಳುವುದಾಗಿ ಉಭಯ ಕಕ್ಷಿದಾರರ ವಕೀಲರುಗಳಿಗೆ ತಿಳಿಸಿ, ಪ್ರಕರಣವನ್ನು ಮುಂದೂಡಿದರು.

ಇದಕ್ಕೂ ಮುನ್ನ ಸರ್ಕಾರದ ಪರ ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ವಾದ ಮಂಡಿಸಿ, 17ಎ ಅಡಿ ಪ್ರಾಸಿಕ್ಯೂಷನ್‌ಗೆ ಪೊಲೀಸರು ಅನುಮತಿ ಕೇಳಬಹುದು. ಅದಕ್ಕೂ ಮೊದಲು ತನಿಖಾಧಿಕಾರಿ ಪ್ರಾಥಮಿಕ ತನಿಖೆ ನಡೆಸಿರಬೇಕು.

ಈ ತನಿಖಾ ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಬೇಕು ಎಂದು ಲಲಿತಾ ಕುಮಾರಿ ಪ್ರಕರಣವನ್ನು ಉಲ್ಲೇಖಿಸಿದರು. ಎಫ್‌ಐಆರ್ ದಾಖಲಿಸುವ ಮೊದಲು ಪ್ರಾಥಮಿಕ ತನಿಖೆಯ ಅಗತ್ಯವಿದೆ. ಆದರೆ, 17ಎ ಅಡಿ ಅನುಮತಿಗೆ ಪ್ರಾಥಮಿಕ ತನಿಖೆ ಆಗಿರಬೇಕೆಂದಿಲ್ಲ. ವಿಚಾರಣೆ ತನಿಖೆಗೂ ಮುನ್ನ 17ಎ ಅನುಮತಿ ಬೇಕಲ್ಲವೇ ಎಂದು ನ್ಯಾಯಮೂರ್ತಿಗಳು ಅಡ್ವೋಕೇಟ್ ಜನರಲ್ ಅವರನ್ನು ಪ್ರಶ್ನಿಸಿದರು. ಯಾವ ಪ್ರಕರಣದಲ್ಲಿ ಪ್ರಾಥಮಿಕ ತನಿಖೆಗೆ ಬೇಕೆಂಬುದನ್ನು ಸುಪ್ರೀಂಕೋರ್ಟ್ ಹೇಳಿದೆ. ಇದು 22 ವರ್ಷ ಹಳೆಯ ಪ್ರಕರಣ ಆಗಿರುವುದರಿಂದ ಪ್ರಾಥಮಿಕ ತನಿಖೆ ಅಗತ್ಯವಿದೆ ಎಂದು ಅಡ್ವೋಕೇಟ್ ಜನರಲ್ ತಿಳಿಸಿದರು. ಈ ಕಲಂ ಅಡಿಯಲ್ಲಿ ಕೇಂದ್ರ ಸರ್ಕಾರ ಮಾರ್ಗಸೂಚಿ ರೂಪಿಸಿದೆ. ಖಾಸಗಿ ದೂರುದಾರರನ್ನು ಪೊಲೀಸರಿಗೆ ■9ನೇ ಪುಟಕ್ಕೆ

ದರ್ಶನ್ ಅಂಡ್ ಗ್ಯಾಂಗ್ ನ್ಯಾಯಾಂಗ ಬಂಧನ ಅವಧಿ

ಸೆ.12ರವರೆಗೆ ವಿಸ್ತರಣೆ

17 ಮಂದಿಯೂ ವಿಡಿಯೋ ಕಾನ್ಫರೆನ್ಸ್ ಮೂಲಕ ಕೋರ್ಟ್‌ಗೆ ಹಾಜರು



ಪವಿತ್ರಾಗೌಡ

ಚಾರ್ಜ್‌ಶೀಟ್ ವರದಿ ಪ್ರಸಾರಕ್ಕೆ ಮಾಧ್ಯಮಗಳಿಗೆ ನಿರ್ಬಂಧ ಹೇರಿ: ನಟ ದರ್ಶನ್ ಹೈಕೋರ್ಟ್ ಮೊರೆ

ಬೆಂಗಳೂರು: ನಟ ದರ್ಶನ್ ಸೇರಿದಂತೆ 17 ಮಂದಿ ಆರೋಪಿಗಳ ವಿರುದ್ಧ ಇತ್ತೀಚೆಗೆ ತನಿಖೆಯ ಚಾರ್ಜ್‌ಶೀಟ್‌ನ್ನು ಕೋರ್ಟ್‌ಗೆ ಪೊಲೀಸರು ಸಲ್ಲಿಸಿದ್ದು ಅದಕ್ಕೆ ಸಂಬಂಧಪಟ್ಟ ಸುದ್ದಿಗಳು ಮಾಧ್ಯಮಗಳಲ್ಲಿ ಸಾಕಷ್ಟು ವರದಿಯಾಗಿವೆ. ಇದಕ್ಕೆ ನಿರ್ಬಂಧ ಹೇರುವಂತೆ ಕೋರಿ ದರ್ಶನ್ ಪರ ವಕೀಲರು ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಕೆ ಮಾಡಿದ್ದಾರೆ.

ಚಾರ್ಜ್‌ಶೀಟ್‌ನಲ್ಲಿ ದರ್ಶನ್ ಏನು ಮಾಡಿದ್ದರು ಎಂಬ ಬಗ್ಗೆ ಮಾಹಿತಿ ಇದೆ. ರೇಣುಕಾ ಸ್ವಾಮಿಗೆ ಕೊಟ್ಟ ಚಿತ್ರಹಿಂಸೆಗಳ ಬಗ್ಗೆ ವಿವರಣೆ ನೀಡಲಾಗಿದೆ. ಇವುಗಳ ಪ್ರಸಾರದ ಮೇಲೆ ನಿರ್ಬಂಧ ಹೇರಿ ಎಂದು ದರ್ಶನ್ ಕೋರಿದ್ದಾರೆ.



ನಟ ದರ್ಶನ್

ಬೆಂಗಳೂರು, ಸೆ.9(ಕೆಎಂಶಿ)–ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಎರಡನೇ ಆರೋಪಿ ಚಿತ್ರನಟ ದರ್ಶನ್ ಅವರ ನ್ಯಾಯಾಂಗ ಬಂಧನ ಅವಧಿಯನ್ನು ಸೆಪ್ಟೆಂಬರ್ 12ರವರೆಗೆ ವಿಸ್ತರಿಸಲಾಗಿದೆ.

ನ್ಯಾಯಾಂಗ ಬಂಧನ ಅವಧಿ ಇಂದು ಪೂರ್ಣಗೊಂಡ ಹಿನ್ನೆಲೆಯಲ್ಲಿ ಪ್ರಕರಣದ ಎಲ್ಲಾ 17 ಆರೋಪಿಗಳನ್ನು ಬಂಧಿಸಿಟ್ಟಿರುವ ಕಾರಾಗೃಹಗಳಿಂದಲೇ ವಿಡಿಯೊ ಕಾನ್ಫರೆನ್ಸ್ ಮೂಲಕ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು.

ನಟ ದರ್ಶನ್ ಅಲ್ಲದೆ, ಪ್ರಕರಣದ ಎಲ್ಲಾ ಆರೋಪಿಗಳ ನ್ಯಾಯಾಂಗ ಬಂಧನ ಅವಧಿಯನ್ನೂ, ಸೆಪ್ಟೆಂಬರ್ 12 ರವರೆಗೆ ವಿಸ್ತರಿಸಿ, 24ನೇ ಎಸಿಎಂಎಂ ನ್ಯಾಯಾಲಯ ಆದೇಶ ಹೊರಡಿಸಿತು.

ನಟ ದರ್ಶನ್ ಬಳ್ಳಾರಿ ಜೈಲಿನಿಂದ, ಪವಿತ್ರಾಗೌಡ ಪರಪ್ಪನ ಅಗ್ರಹಾರ ಕಾರಾಗೃಹದಿಂದ, ಮೈಸೂರು, ಬಳ್ಳಾರಿ, ಶಿವಮೊಗ್ಗ, ಧಾರವಾಡ, ಬೆಳಗಾವಿ, ಕಲಬುರುಗಿ, ವಿಜಯಪುರ ಸೇರಿದಂತೆ ಒಟ್ಟು 17 ಆರೋಪಿಗಳನ್ನು ಅವರು ಬಂಧನದಲ್ಲಿರುವ ಆಯಾ ಕಾರಾಗೃಹಗಳಿಂದ ವಿಡಿಯೊ ಕಾನ್ಫರೆನ್ಸ್ ಮೂಲಕ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಯಿತು. ಎಲ್ಲ ಆರೋಪಿಗಳ ಹಾಜರಾತಿ ನಂತರ, ಆರೋಪಿಗಳ ಪರ ವಕೀಲರಿಗೆ ವೈಯಕ್ತಿಕವಾಗಿ ದೋಷಾರೋಪ ಪಟ್ಟಿ ಪ್ರತಿಗಳನ್ನು ನೀಡಲು ಸರ್ಕಾರಿ ವಕೀಲರು ಕಾಲಾವಕಾಶ ಕೋರಿದರು. ಇದಕ್ಕೆ ನ್ಯಾಯಾಧೀಶರು ಸಮ್ಮತಿಸಿದಾಗ, ಮೊಕದ್ದಮೆಯ ಆರೋಪಿಗಳನ್ನು ಬೇರೆ ಬೇರೆಯಾಗಿ ರಾಜ್ಯದ ವಿವಿಧ ಜೈಲುಗಳಲ್ಲಿ ಇಡಲಾಗಿದೆ, ಆರೋಪಿಗಳ ಕೈಗೇ ದೋಷಾರೋಪ ಪಟ್ಟಿ ನೀಡುವುದರಿಂದ ಜಾಮೀನು ಪ್ರಕ್ರಿಯೆ ತಡವಾಗಲಿದೆ, ಎಲ್ಲಾ ಆರೋಪಿಗಳು ವಿಡಿಯೋ ಕಾನ್ಫರೆನ್ಸ್ ಮೂಲಕ ಹಾಜರಿದ್ದು, ಅವರ ಒಪ್ಪಿಗೆ ಮೇರೆಗೆ ಚಾರ್ಜ್‌ಶೀಟ್ ಪ್ರತಿಗಳನ್ನು ಅವರ ಪರ ವಕೀಲರಿಗೇ ನೀಡುವಂತೆ ಮನವಿ ಮಾಡಲಾಯಿತು. ಈ ಹಂತದಲ್ಲಿ ಪ್ರಕರಣದ ಆರೋಪಿಗಳಾದ ಪುಟ್ಟಸ್ವಾಮಿ, ನಂದೀಶ್, ರಾಘವೇಂದ್ರ, ಜಗದೀಶ್, ಪವನ್, ಅನುಕುಮಾರ್, ಧನರಾಜ್, ರವಿಶಂಕರ್, ವಿನಯ್, ಪ್ರದೂಷ್, ನಾಗರಾಜು, ಲಕ್ಷ್ಮಣ್, ದೀಪಕ್ ಕುಮಾರ್, ಕಾರ್ತಿಕ್, ಕೇಶವಮೂರ್ತಿ, ನಿಖಿಲ್ ನಾಯಕ್ ಪರ ■9ನೇ ಪುಟಕ್ಕೆ

‘ಕೈ’ ಕೊಟ್ಟ ಕಾಂಗ್ರೆಸ್ ಸದಸ್ಯರು; ಬಿಜೆಪಿ ತೆಕ್ಕೆಗೆ ಚಾ.ನಗರ ನಗರಸಭೆ

- ಅಧ್ಯಕ್ಷರಾಗಿ ಸುರೇಶ್, ಉಪಾಧ್ಯಕ್ಷರಾಗಿ ಮಮತಾ ಆಯ್ಕೆ
- ಮೂವರು ಕಾಂಗ್ರೆಸ್ ಸದಸ್ಯರು ಗೈರು
- ಬಿಜೆಪಿ– ಕಾಂಗ್ರೆಸ್‌ಗೆ ತಲಾ 1 ಅಡ್ಡ ಮತದಾನ

ಚಾಮರಾಜನಗರ ಸೆ.9– ಚಾಮರಾಜನಗರ ನಗರಸಭೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಸ್ಥಾನವನ್ನು ಬಿಜೆಪಿ ತನ್ನ ತೆಕ್ಕೆಗೆ ತೆಗೆದುಕೊಳ್ಳುವ ಮೂಲಕ ಕಮಾಲ್ ಮಾಡಿದೆ. ಅಧ್ಯಕ್ಷರಾಗಿ ಸುರೇಶ್, ಉಪಾಧ್ಯಕ್ಷರಾಗಿ ಮಮತಾ ಆಯ್ಕೆ ಆಗಿದ್ದಾರೆ. ಈ ಮೂಲಕ ಬಹುಮತವಿದ್ದ ಕಾಂಗ್ರೆಸ್ ತೀವ್ರ ಮುಖಭಂಗ ಅನುಭವಿಸಿದೆ.

ಬಿಜೆಪಿಯಿಂದ ಅಧ್ಯಕ್ಷ ಸ್ಥಾನಕ್ಕೆ 28ನೇ ವಾರ್ಡ್‌ನ ಸದಸ್ಯ ಸುರೇಶ್, ಉಪಾಧ್ಯಕ್ಷ ಸ್ಥಾನಕ್ಕೆ 22ನೇ ವಾರ್ಡ್‌ನ ಎಚ್.ಎಸ್. ಮಮತಾ ನಾಮಪತ್ರ ಸಲ್ಲಿಸಿದ್ದರು. ಕಾಂಗ್ರೆಸ್‌ನಿಂದಲೂ ಅಧ್ಯಕ್ಷ ಸ್ಥಾನಕ್ಕೆ 31ನೇ ವಾರ್ಡ್‌ನ ಆರ್.ಎಂ. ರಾಜಪ್ಪ, ಉಪಾಧ್ಯಕ್ಷ ಸ್ಥಾನಕ್ಕೆ 12ನೇ ವಾರ್ಡ್‌ನ ಎಸ್‌ಡಿಪಿಐ ಸದಸ್ಯರಾದ ಅಬ್ರರ್ ಅಹಮ್ಮದ್ ಉಮೇದುವಾರಿಕೆ ಸಲ್ಲಿಸಿದ್ದರು. 31 ಸದಸ್ಯರ ಬಲ ಹೊಂದಿದ್ದ ನಗರಸಭೆಯಲ್ಲಿ ಬಿಎಸ್‌ಪಿಯ ಪ್ರಕಾಶ್ ಸತತವಾಗಿ ಸಭೆಗಳಿಗೆ ಗೈರು ಹಾಜರಾದ್ದರಿಂದ ಸದಸ್ಯತ್ವದಿಂದ ಅವರು ಅನರ್ಹಗೊಂಡ ಕಾರಣ ಒಟ್ಟು ಸದಸ್ಯರ ಸಂಖ್ಯೆ 30ಕ್ಕೆ ಕುಸಿದಿತ್ತು. ಶಾಸಕರು ಹಾಗೂ ಸಂಸದರೂ ಸೇರಿ ಒಟ್ಟು 32 ಮಂದಿ ಮತದಾನದ ಹಕ್ಕು ಪಡೆದಿದ್ದರು. ■9ನೇ ಪುಟಕ್ಕೆ



ಚಾಮರಾಜನಗರ ನಗರಸಭೆ ಅಧ್ಯಕ್ಷ ಸುರೇಶ್ ಹಾಗೂ ಉಪಾಧ್ಯಕ್ಷೆ ಮಮತಾರೊಂದಿಗೆ ಅಭಿಮಾನಿಗಳ ವಿಜಯೋತ್ಸವ

> “ನಗರಸಭಾ ಚುನಾವಣೆಯಲ್ಲಿ ಪಕ್ಷದ ಪರವಾಗಿ ಮತ ಚಲಾಯಿಸುವಂತೆ ಎಲ್ಲಾ ಸದಸ್ಯರಿಗೆ ವ್ಹಿಪ್ ಜಾರಿಗೊಳಿಸಲಾಗಿತ್ತು. ಪಕ್ಷದ ಮೂವರು ಸದಸ್ಯರು ಗೈರಾಗುವ ಮೂಲಕ ಕಾಂಗ್ರೆಸ್‌ಗೆ ಅಧಿಕಾರ ಕೈ ತಪ್ಪಿಸಿದ್ದಾರೆ. ಅವರನ್ನು ನಗರಸಭೆ ಸದಸ್ಯತ್ವದಿಂದ ವಜಾಗೊಳಿಸುವ ಸಂಬಂಧ ಪ್ರಕ್ರಿಯೆ ಆರಂಭಿಸುತ್ತೇವೆ. ಅವರನ್ನು ಪಕ್ಷದಿಂದ ವಜಾಗೊಳಿಸಲಾಗುವುದು.
> –ಸುನೀಲ್‌ಬೋಸ್, ಸಂಸದ

ಪಂಚ ಗ್ಯಾರಂಟಿಯಂತೆ ‘ಮನೆ ಭಾಗ್ಯ’ ನೀಡಿ; ಮನೆ ಮಾತಾಗಿ

ಸಿದ್ದರಾಮಯ್ಯಗೆ ಡಿ.ಮಾದೇಗೌಡ ಸಲಹೆ



ಡಿ.ಮಾದೇಗೌಡ

ಮೈಸೂರು, ಸೆ.9(ಬಿಎಲ್‌ಯು)– ಐದು ಗ್ಯಾರಂಟಿಗಳ ಜೊತೆಗೆ ಆರನೇ ಗ್ಯಾರಂಟಿಯಾಗಿ ಬಡವರು ಹಾಗೂ ವಸತಿ ಹೀನರಿಗೆ ಮನೆ ಭಾಗ್ಯ ಅಥವಾ ವಸತಿ ಭಾಗ್ಯ ನೀಡಿ ಎಂದು ಮಾಜಿ ವಿಧಾನಪರಿಷತ್ ಸದಸ್ಯರೂ ಆದ ಸಿಐಟಿಬಿ ಮಾಜಿ ಅಧ್ಯಕ್ಷ ಡಿ.ಮಾದೇಗೌಡ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲಹೆ ನೀಡಿದ್ದಾರೆ.

ಈ ಸಂಬಂಧ ಸಿದ್ದರಾಮಯ್ಯ ಅವರಿಗೆ ಬಹಿರಂಗ ಪತ್ರ ಬರೆದಿರುವ ಮಾದೇಗೌಡರು, ಮನೆ ಭಾಗ್ಯ ಅಥವಾ ವಸತಿ ಭಾಗ್ಯ ಯೋಜನೆ ಸಾಕಾರದಿಂದ ಜನರಿಗೆ ಏನೆಲ್ಲಾ ಅನುಕೂಲವಾಗುತ್ತದೆ ಎಂಬುದನ್ನು ಸಮಗ್ರವಾಗಿ ವಿವರಿಸಿದ್ದಾರೆ. ಈಗಾಗಲೇ ಪಂಚ ಗ್ಯಾರಂಟಿ ನೀಡಿದ್ದೀರಾ. ಇದರ ಜೊತೆಗೆ ಮನೆ ಭಾಗ್ಯ ನೀಡುವುದಕ್ಕೆ ನಿಮಗೆ ಕಷ್ಟವಾಗುವುದಿಲ್ಲ. ಪಂಚ ಗ್ಯಾರಂಟಿಯಿಂದ ಸರ್ಕಾರದ ಖಜಾನೆಗೆ ನಷ್ಟವಾಗಬಹುದು. ಆದರೆ ಆರನೇ ಗ್ಯಾರಂಟಿಯಾದ ಮನೆ ಭಾಗ್ಯ ನೀಡಿದರೆ ಸರ್ಕಾರದ ಬೊಕ್ಕಸಕ್ಕೆ ಹೊರೆ ಆಗುವುದಿಲ್ಲ ಬದಲಿಗೆ ಸರ್ಕಾರದ ಖಜಾನೆಗೆ ಹಣ ಹರಿದು ಬರುತ್ತದೆ ಎಂದು ತಿಳಿಸಿದ್ದಾರೆ.

ಮುಡಾದಲ್ಲಿ ಉಳಿದಿರುವ ಸಾವಿರಾರು ನಿವೇಶನಗಳನ್ನು ಸೂರಿಲ್ಲದವರಿಗೆ ಹಂಚಿ. ಇದರಿಂದ ಹತ್ತಾರು ವರ್ಷಗಳಿಂದ ಚಾತಕ ಪಕ್ಷಿಗಳಂತೆ ■9ನೇ ಪುಟಕ್ಕೆ

ನಿವೇಶನ ಹಂಚಿಕೆಯಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರದ ಬೆನ್ನಲ್ಲೇ...

ಮುಡಾ ಆಯುಕ್ತರ ಅಧಿಕೃತ ನಿವಾಸದ ಸಿಸಿ ಕ್ಯಾಮರಾ, ಡಿವಿಆರ್ ನಾಪತ್ತೆ!

- ರಾತ್ರಿಯಿಡೀ ಕಡತಗಳ ವಿಲೇವಾರಿ ದೃಶ್ಯಾವಳಿಯ ತಾಂತ್ರಿಕ ಸಾಕ್ಷ್ಯವೇ ಇಲ್ಲದಂತಾಯ್ತು
- ಇಲ್ಲಿದ್ದಂತಹ ಬೆಲೆ ಬಾಳುವ ಪೀಠೋಪಕರಣಗಳೂ ಬಹುತೇಕ ಮಂಗಮಾಯ!
- ಈ ನಿವಾಸದಲ್ಲಿನ ಪದಾರ್ಥಗಳ ಬಗ್ಗೆ ಹೇಳುವವರು–ಕೇಳುವವರು ಯಾರೂ ಇಲ್ಲವೇ?
- ಎಲ್ಲವೂ ಅಸ್ತವ್ಯಸ್ತ; ಎಲೆಕ್ಟ್ರಿಕ್, ಸಿಸಿ ಕ್ಯಾಮರಾ ಅಳವಡಿಸಿದ್ದಲ್ಲಿ ಜೋತು ಬಿದ್ದಿರುವ ವೈಯರ್‌ಗಳು!

■ ಎಸ್.ಟಿ.ರವಿಕುಮಾರ್

ಮೈಸೂರು, ಸೆ. 9– ಕಾನೂನು ಮತ್ತು ಸರ್ಕಾರದ ಆದೇಶ ಗಾಳಿಗೆ ತೂರಿ ರಿಯಲ್ ಎಸ್ಟೇಟ್ ಮಾಫಿಯಾದೊಂದಿಗೆ ಶಾಮೀಲಾಗಿ ಸಾವಿರಾರು ನಿವೇಶನಗಳನ್ನು ಅಕ್ರಮವಾಗಿ ಪರಭಾರೆ ಮಾಡಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಅಧಿಕಾರಿಗಳು, ಕೆಲ ಕಡತಗಳನ್ನಷ್ಟೇ ನಾಶಪಡಿಸಿಲ್ಲ. ಇಡೀ ಹಗರಣದ ಕೇಂದ್ರಬಿಂದುವಾಗಿಸಿಕೊಂಡಿದ್ದರೆಂದು ಹೇಳಲಾಗುತ್ತಿರುವ ಆಯುಕ್ತರ ಅಧಿಕೃತ ನಿವಾಸ (Commissioner's Official Residence)ದಲ್ಲಿದ್ದ ಸಿಸಿ ಕ್ಯಾಮರಾ, ಫುಟೇಜಸ್ ಶೇಖರಿಸುತ್ತಿದ್ದ ಡಿವಿಆರ್ ಉಪಕರಣವೇ ನಾಪತ್ತೆಯಾಗಿವೆ ಎಂದು ಹೇಳಲಾಗುತ್ತಿದ್ದು, ಹಾಗಾಗಿ ತಾಂತ್ರಿಕ ಸಾಕ್ಷ್ಯವನ್ನೇ ■6ನೇ ಪುಟಕ್ಕೆ



ಕುವೆಂಪುನಗರದ ಅಪೊಲೋ ಆಸ್ಪತ್ರೆ ಬಳಿಯ ಮುಡಾ ಆಯುಕ್ತರ ಅಧಿಕೃತ ನಿವಾಸ.

> “ಆಯುಕ್ತರ ಅಧಿಕೃತ ನಿವಾಸದಲ್ಲಿದ್ದ ಸಿಸಿ ಕ್ಯಾಮರಾ, ಡಿವಿಆರ್ ಮತ್ತು ಕೆಲ ಪೀಠೋಪಕರಣಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿ ಪಡೆಯುತ್ತೇನೆ. ಅದನ್ನು ನಿರ್ವಹಣೆ ಮಾಡುವ ಜವಾಬ್ದಾರಿ ಬಿಲ್ಡಿಂಗ್ ವಿಭಾಗದವರದ್ದಾಗಿದ್ದು, ಸ್ಟಾಕ್ ಬುಕ್‌ನಲ್ಲಿ ನಮೂದಿಸದಿರುವ ಹಾಗೂ ಆಯುಕ್ತರು ಬದಲಾದಾಗ ಸ್ಟಾಕ್ ಪರಿಶೀಲನೆ ಮಾಡದಿರುವುದು ನನ್ನ ಗಮನಕ್ಕೆ ಬಂದಿದೆ. ಸರ್ಕಾರಿ ಕಟ್ಟಡದ ವಸ್ತುಗಳನ್ನು ನಿರ್ವಹಿಸುವುದು ನಮ್ಮ ಕರ್ತವ್ಯವೂ ಆಗಿರುವುದರಿಂದ ಈ ಬಗ್ಗೆ ಅಗತ್ಯ ಕ್ರಮ ವಹಿಸುತ್ತೇನೆ. –ಎ.ಎನ್. ರಘುನಂದನ್, ಮುಡಾ ಆಯುಕ್ತ.



ಸಿಸಿ ಟಿವಿ, ಡಿವಿಆರ್ ಉಪಕರಣ ಕಿತ್ತುಹಾಕಿದ್ದು, ವೈಯರ್‌ಗಳನ್ನು ಕಿತ್ತು ಕಿಟಕಿ ರಾಡ್‌ಗಳಿಗೆ ಬಿಗಿಯಲಾಗಿದೆ.

ಮೈಸೂರು ಮಿತ್ರ ಮಂಗಳವಾರ 10 ಸೆಪ್ಟೆಂಬರ್ 2024

ಕಲರ್ಸ್ ಕನ್ನಡದಲ್ಲಿ ಹೊಸ ಧಾರಾವಾಹಿ 'ದೃಷ್ಟಿಬೊಟ್ಟು'



ಕನ್ನಡಿಗರಿಗೆ ಸದಭಿರುಚಿಯ ಮನರಂಜನೆ ನೀಡುತ್ತಾ ಬಂದಿರುವ ಕಲರ್ಸ್ ಕನ್ನಡ ವಾಹಿನಿಯು ಈಗ ಮತ್ತೊಂದು ಹೊಸ ಧಾರಾವಾಹಿ ಆರಂಭಿಸಿದೆ. ರೂಪವೇ ಶಾಪವಾದ ಹುಡುಗಿಯೊಬ್ಬಳ ಕತೆಯನ್ನು ಮನಮುಟ್ಟುವಂತೆ ಹೇಳುವ ಈ ಹೊಸ ಧಾರಾವಾಹಿ 'ದೃಷ್ಟಿಬೊಟ್ಟು'. ಸೋಮವಾರದಿಂದ ಶನಿವಾರದವರೆಗೆ ಪ್ರತಿ ಸಂಜೆ ಆರೂವರೆಗೆ ಪ್ರಸಾರವಾಗಲಿದೆ.

ಜನಪ್ರಿಯ ಕಿರುತೆರೆ ತಾರೆ ವಿಜಯ್ ಸೂರ್ಯ ಈ ಧಾರಾವಾಹಿ ಮೂಲಕ ಕಲರ್ಸ್ ಕನ್ನಡ ವಾಹಿನಿಗೆ ಮರಳಿರುವುದು ವಿಶೇಷ. ನಾಯಕಿ ಪಾತ್ರದಲ್ಲಿ ಅರ್ಪಿತಾ ಮೋಹಿತೆ ಹೊಸ ಪ್ರತಿಭೆ. ಹಿರಿಯ ನಟಿ ಅಂಬಿಕಾ ಈ ಧಾರಾವಾಹಿ ಮೂಲಕ ಕಿರುತೆರೆಗೆ ಕಾಲಿಡುತ್ತಿದ್ದಾರೆ. ಜೊತೆಗೆ ದೀಪಶ್ರೀ, ರಾಘು ಶಿವಮೊಗ್ಗ, ಅಶೋಕ್ ಹೆಗ್ಡೆ ಸೇರಿದಂತೆ ಅನೇಕ ಕಿರಿ ಹಿರಿ ನಟನಟಿಯರು ನಿಮ್ಮ ಮನಸೂರೆಗೊಳ್ಳುವುದು ಖಾತರಿ. 'ಈ ಧಾರಾವಾಹಿಯ ಪ್ರತಿಯೊಂದು ಪಾತ್ರವೂ ವೀಕ್ಷಕರ ಮನಗೆಲ್ಲುವಂತಿದೆ' ಎನ್ನುತ್ತಾರೆ ಕಲರ್ಸ್ ಕನ್ನಡದ ಬ್ಯುಸಿನೆಸ್ ಹೆಡ್ ಪ್ರಶಾಂತ್ ನಾಯಕ್. ಅತ್ಯಾಧುನಿಕ ಕ್ಯಾಮೆರಾಗಳನ್ನು ಬಳಸಿ ಚಿತ್ರೀಕರಣ ಮಾಡಿರುವುದು 'ದೃಷ್ಟಿ ಬೊಟ್ಟು' ಧಾರಾವಾಹಿಯ ಮತ್ತೊಂದು ಹೆಗ್ಗಳಿಕೆ.

ರಾಷ್ಟ್ರೀಯ ಶಾರ್ಟ್ ಕೋರ್ಸ್ ಸ್ಪರ್ಧೆ: ಸಾನ್ವಿಗೆ 3 ಬೆಳ್ಳಿ ಪದಕ

ಮೈಸೂರು,ಸೆ.9–ದಕ್ಷಿಣ ವಲಯ ರಾಷ್ಟ್ರೀಯ ಶಾರ್ಟ್ ಕೋರ್ಸ್ ಈಜು ಚಾಂಪಿಯನ್‌ಶಿಪ್‌ನಲ್ಲಿ ಸಾನ್ವಿ ಆರ್. 3 ಬೆಳ್ಳಿ ಪದಕ ಹಾಗೂ ಕೃತಿಕ್ ವೇದೇಶ್ 1 ಬೆಳ್ಳಿ ಪದಕ ಪಡೆದಿದ್ದಾರೆ.

ಕರ್ನಾಟಕ ಸ್ವಿಮ್ಮಿಂಗ್ ಅಸೋಸಿಯೇಷನ್ ಮಂಡ್ಯದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಈಜು ಸ್ಪರ್ಧೆಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದ ಮೈಸೂರಿನ ಸಾನ್ವಿ ಹಾಗೂ ಕೃತಿಕ್ ವೇದೇಶ್ ಒಟ್ಟು 4 ಬೆಳ್ಳಿ ಪದಕ ಗಳಿಸಿದ್ದಾರೆ.

ಇವರಿಬ್ಬರೂ ಜೆ.ಪಿ.ನಗರದ ಗ್ಲೋಬಲ್ ಸ್ಪೋರ್ಟ್ಸ್ ಅಸೋಸಿಯೇಷನ್‌ನಲ್ಲಿ ತರಬೇತಿ ಪಡೆಯುತ್ತಿದ್ದು, ಇವರ ಗೆಲುವನ್ನು ಜಿಎಸ್‌ಎ ತಂಡ ಶ್ಲಾಘಿಸಿದೆ.



ಮಂಡ್ಯದಲ್ಲಿ ನಡೆದ ದಕ್ಷಿಣ ವಲಯ ರಾಷ್ಟ್ರೀಯ ಶಾರ್ಟ್ ಕೋರ್ಸ್ ಈಜು ಚಾಂಪಿಯನ್‌ಶಿಪ್‌ನಲ್ಲಿ ಪದಕ ಗಳಿಸಿದ ಸಾನ್ವಿ ಹಾಗೂ ಕೃತಿಕ್ ವೇದೇಶ್ ಜೊತೆ ತರಬೇತುದಾರ ಪವನ್‌ಕುಮಾರ್.

ಇಂದು 'ಸಹಕಾರ ಮಿತ್ರ' ಪ್ರಶಸ್ತಿ ಪ್ರದಾನ

ಮೈಸೂರು, ಸೆ.9(ಆರ್‌ಕೆ)–ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘವು ಸೆ.10ರಂದು ಮೈಸೂರಿನ ಹೋಟೆಲ್ ಪೈ ವಿಸ್ತಾ ಸಭಾಂಗಣದಲ್ಲಿ ಏರ್ಪಡಿಸಿರುವ ಸಮಾರಂಭದಲ್ಲಿ ಹಿರಿಯ ಹೋಟೆಲ್ ಉದ್ಯಮಿಗಳಿಗೆ 'ಸಹಕಾರ ಮಿತ್ರ' ಪ್ರಶಸ್ತಿ ಪ್ರದಾನ ಮಾಡಲಾಗುವುದು. ಅರ್ಕ ಫೌಂಡೇಷನ್ ಸಂಸ್ಥಾಪಕ ಶ್ರೀ ಯೋಗಿ ಶ್ರೀನಿವಾಸ್ ಅರ್ಕ ಸಾನ್ನಿಧ್ಯ ವಹಿಸಲಿದ್ದು, ಹಿರಿಯ ಹೋಟೆಲ್ ಉದ್ಯಮಿಗಳಾದ ಬಿ.ಜಿ.ರಾಘವನ್, ರಾಮಕೃಷ್ಣ ಹೆಬ್ಬಾರ್, ಆರ್.ಮುರಳೀಧರನ್ ಅವರಿಗೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ 'ಸಹಕಾರ ಮಿತ್ರ' ಪ್ರಶಸ್ತಿ ಪ್ರದಾನ ಮಾಡುವರು. ಸಂಘದ ಅಧ್ಯಕ್ಷ ನಾರಾಯಣ ವಿ.ಹೆಗಡೆ ಅಧ್ಯಕ್ಷತೆ ವಹಿಸಲಿರುವ ಕಾರ್ಯಕ್ರಮದಲ್ಲಿ ಪದಾಧಿಕಾರಿಗಳು ಹಾಗೂ ಸದಸ್ಯರು ಭಾಗವಹಿಸುವರು.

ಸೆ.14ಕ್ಕೆ ರಾಷ್ಟ್ರೀಯ ಲೋಕ ಅದಾಲತ್

ಮೈಸೂರು, ಸೆ.9(ಎಸ್‌ಪಿಎನ್)–ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ಸೆ.14ರಂದು ಮೈಸೂರು ಜಿಲ್ಲೆ ಸೇರಿದಂತೆ ರಾಜ್ಯದ ಎಲ್ಲಾ ನ್ಯಾಯಾಲಯಗಳಲ್ಲಿ ಬಾಕಿಯಿರುವ ಪ್ರಕರಣಗಳಲ್ಲಿ ರಾಷ್ಟ್ರೀಯ ಲೋಕ ಅದಾಲತ್ ಹಮ್ಮಿಕೊಳ್ಳಲಾಗಿದೆ.

ಮೈಸೂರು ನಗರ ಮತ್ತು ತಾಲೂಕು ನ್ಯಾಯಾಲಯಗಳಲ್ಲಿ ಒಟ್ಟು 1,17,013 ಪ್ರಕರಣಗಳು ವಿಚಾರಣೆಗೆ ಬಾಕಿಯಿದ್ದು, ಅವುಗಳ ಪೈಕಿ 58,030 ಸಿವಿಲ್ ಪ್ರಕರಣಗಳು ಹಾಗೂ 58,983 ಕ್ರಿಮಿನಲ್ ಪ್ರಕರಣಗಳಾಗಿವೆ. ಸದರಿ ಪ್ರಕರಣಗಳಲ್ಲಿ 30 ಸಾವಿರಕ್ಕಿಂತ ಹೆಚ್ಚಿನ ಪ್ರಕರಣಗಳು ರಾಜಿಯಾಗಬಹುದಾದ ಪ್ರಕರಣಗಳೆಂದು ಗುರುತಿಸಿರುವ ಹಿನ್ನೆಲೆಯಲ್ಲಿ ರಾಷ್ಟ್ರೀಯ ಲೋಕ ಅದಾಲತ್ ಹಮ್ಮಿಕೊಳ್ಳಲಾಗಿದೆ.

ರಾಜಿಯಾಗುವಂತಹ ಯಾವುದೇ ಪ್ರಕರಣಗಳನ್ನು ಕಕ್ಷಿದಾರರ ವಿನಂತಿಯ ಮೇರೆಗೆ ಸಂಬಂಧಪಟ್ಟ ನ್ಯಾಯಾಲಯಗಳಲ್ಲಾಗಲಿ ಅಥವಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಥವಾ ಸಂಬಂಧಪಟ್ಟ ತಾಲೂಕು ಕಾನೂನು ಸೇವಾ ಸಮಿತಿಗಳನ್ನು ಸಂಪರ್ಕಿಸಿ ಅರ್ಜಿ ಸಲ್ಲಿಸಿದ್ದಲ್ಲಿ ಅಂತಹ ಪ್ರಕರಣಗಳನ್ನು ರಾಜಿ ಸಂಧಾನಕ್ಕಾಗಿ ಕ್ರಮ ಕೈಗೊಳ್ಳಲಾಗುವುದು.

ಲೋಕ ಆದಾಲತ್‌ನ ಪ್ರಯೋಜನ: ಲೋಕ ಆದಾಲತ್‌ನಲ್ಲಿ ಆಗುವ ತೀರ್ಮಾನ ನ್ಯಾಯಾಲಯಗಳಲ್ಲಿ ನೀಡುವ ತೀರ್ಪಿಗೆ ಸಮನಾಗಿರುತ್ತವೆ. ಕಕ್ಷಿದಾರರು, ಅದಾಲತ್‌ನಲ್ಲಿ ವ್ಯಾಜ್ಯಗಳನ್ನು ಅತ್ಯಂತ ಕಡಿಮೆ ಖರ್ಚಿನಲ್ಲಿ, ಶೀಘ್ರವಾಗಿ ಇತ್ಯರ್ಥಪಡಿಸಿಕೊಳ್ಳಬಹುದು.

ಸಮಯದ ಉಳಿತಾಯ ಆಗುವುದಲ್ಲದೆ, ಕಕ್ಷಿದಾರರ ಮಧ್ಯದ ಸಂಬಂಧ ಚೆನ್ನಾಗಿ ಉಳಿಯುತ್ತದೆ ಹಾಗೂ ಕೋರ್ಟ್‌ಗೆ ಯಾವುದೇ ಶುಲ್ಕ ಪಾವತಿ ಮಾಡಬೇಕಿಲ್ಲ. ಕಕ್ಷಿದಾರರು ನೇರವಾಗಿ ಅದಾಲತ್‌ನಲ್ಲಿ ಭಾಗವಹಿಸಬಹುದು ಹಾಗೂ ಸಂಧಾನಕಾರರು ಸೂಚಿಸುವ ಪರಿಹಾರ ತೃಪ್ತಿಯಾದಲ್ಲಿ ಮಾತ್ರ ರಾಜಿ ಮಾಡಿಕೊಳ್ಳಬಹುದು. ಸಿವಿಲ್ ಪ್ರಕರಣಗಳು ಇತ್ಯರ್ಥಗೊಂಡರೆ ಅವಾರ್ಡ್ ಮಾಡಲಾಗುವುದು. ಅದು ಸಾಮಾನ್ಯ ಡಿಕ್ರಿಯಷ್ಟೆ ಮಹತ್ವ ಪಡೆದುಕೊಂಡಿರುತ್ತದೆ. ಪ್ರಕರಣಗಳು ರಾಜಿಯಾದಲ್ಲಿ ಶೇ.100 ರಷ್ಟು ನ್ಯಾಯಾಲಯ ಶುಲ್ಕ ಕಕ್ಷಿದಾರರಿಗೆ ಹಿಂದಿರುಗಿಸಲಾಗುವುದು.

ಲೋಕ್ ಅದಾಲತ್‌ನಲ್ಲಿ ಆದ ಆವಾರ್ಡ್ ವಿರುದ್ಧ ಮೇಲ್ಮನವಿಗೆ ಅವಕಾಶವಿರುವುದಿಲ್ಲ. ಸದರಿ ಲೋಕ್ ಅದಾಲತ್ ಬಗ್ಗೆ ಮತ್ತು ಅದರ ಪ್ರಯೋಜನಗಳ ಬಗ್ಗೆ ಕಕ್ಷಿದಾರರು ಹಾಗೂ ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳುವಂತೆ ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಜಿ.ದಿನೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ




ಸಂಜೀವ ರಘುನಾಥರಾವ್

ಮೈಸೂರು,ಸೆ.9–ಪಾರ್ಲೆ ಏಜೆನ್ಸೀಸ್‌ನ ಸಂಜೀವ್ ಎಂಟರ್‌ಪ್ರೈಸಸ್ ಮಾಲೀಕರು, ಮೈಸೂರು ತಾಲೂಕಿನ ಇನಾಂ ಉತ್ತನಹಳ್ಳಿಯ ಅಂದಿನ ಜಹಗೀರ್ದಾರ್ ಸಂಜೀವ ಕೃಷ್ಣಾಚಾರ್ ಅವರ ಪುತ್ರ ಸಂಜೀವ ರಘುನಾಥರಾವ್ (92) ಭಾನುವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಬೆಂಗಳೂರಿನ ಚಾಮರಾಜಪೇಟೆಯ ಟಿ.ಆರ್. ಮಿಲ್ ಬಳಿ ಭಾನುವಾರ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪೂರಿಗಾಲಿ ರಮೇಶ್



ಮಳವಳ್ಳಿ, ಸೆ.9– ತಾಲೂಕಿನ ಪೂರಿಗಾಲಿ ಗ್ರಾಮದ ರಮೇಶ್(67) ಅವರು ಸೋಮವಾರ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ನಿಧನರಾದರು. ಇವರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ಪತ್ರ ಬರಹಗಾರರಾಗಿದ್ದ ರಮೇಶ್ ಅವರು ತಾಲೂಕಿನ ಜನರಿಗೆ ಚಿರಪರಿಚಿತರಾಗಿದ್ದರು. ಮಧ್ಯಾಹ್ನದ ನಂತರ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಎನ್.ಡಿ.ವಸುಪಾಲ್

ಮೈಸೂರು, ಸೆ.9– ಮೈಸೂರಿನ ಅಶೋಕ ರಸ್ತೆ ನಿವಾಸಿ, ನಿವೃತ್ತ ಅಸಿಸ್ಟೆಂಟ್ ಡ್ರಗ್ ಕಂಟ್ರೋಲರ್ ಎನ್.ಡಿ.ವಸುಪಾಲ್(89) ಅವರು ಸೆ.6ರಂದು ನಿಧನರಾದರು. ಇವರು ಪತ್ನಿ, ಮೂವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಚಾಮುಂಡಿಬೆಟ್ಟ ತಪ್ಪಲಿನ ಹರಿಶ್ಚಂದ್ರ ಘಾಟ್‌ನಲ್ಲಿ ಭಾನುವಾರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ತ್ವರಿತವಾಗಿ ಸಾರ್ವಜನಿಕರ ಕೆಲಸ ಮಾಡಿಕೊಡಿ

ಪಾದಯಾತ್ರೆಯಲ್ಲಿ ಅಧಿಕಾರಿಗಳಿಗೆ ಶಾಸಕ ಕೆ.ಹರೀಶ್‌ಗೌಡ ಸೂಚನೆ

ಮೈಸೂರು,ಸೆ.9(ಪಿಎಂ)– ನಗರದ ವಾರ್ಡ್ ನಂ.4ರ ಹೆಬ್ಬಾಳು–ಲೋಕನಾಯಕನಗರ ವ್ಯಾಪ್ತಿಯಲ್ಲಿ ಸೋಮವಾರ ಪಾದಯಾತ್ರೆ ನಡೆಸಿದ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ, ಸಾರ್ವಜನಿಕರ ಕುಂದುಕೊರತೆ ಆಲಿಸಿದರು. ಅಲ್ಲದೆ, ವಿಳಂಬ ಮಾಡದೇ ಸಾರ್ವಜನಿಕರ ಕೆಲಸ ಕಾರ್ಯಗಳನ್ನು ಮಾಡಿಕೊಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮಳೆ ನೀರು ಚರಂಡಿ ಮಾಡಿಸಿಕೊಡಿ, ವಿದ್ಯುತ್ ಕಂಬ ಸ್ಥಳಾಂತರಿಸಿಕೊಡಿ, ವಿದ್ಯುತ್ ದೀಪ ಅಳವಡಿಸಲು ಸೂಚನೆ ನೀಡಿ, ಆಶ್ರಯ ಮನೆಗಳಿಗೆ ಹಕ್ಕು ಖುಲಾಸೆ ಪತ್ರವನ್ನು ಕೊಡಿಸಿಕೊಡಿ ಎಂಬಿತ್ಯಾದಿ ಮನವಿಗಳಿಗೆ ಸ್ಪಂದಿಸಿದ ಶಾಸಕರು, ಈ ನಿಟ್ಟಿನಲ್ಲಿ ಶೀಘ್ರ ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಹೆಬ್ಬಾಳಿನ ಹೆಬ್ಬಾಗಿಲಿನಿಂದ ಗಣಪತಿ–ಚಾಮುಂಡೇಶ್ವರಿ ದೇವಸ್ಥಾನ, ಸಂಜೀವಿನಿ ವೃತ್ತ, ಕಾಳೇಗೌಡರ ಸೈಟ್ ಮುಖ್ಯರಸ್ತೆ, ಆಶ್ರಯ ಮನೆಗಳ ಬೀದಿ, ನಂದಿ ಸ್ಟೋರ್, ಆಂಜನೇಯಸ್ವಾಮಿ ದೇವಸ್ಥಾನ, ಬಸವನಗುಡಿ ವೃತ್ತ, ಆಶಾಮಂದಿರ ರಸ್ತೆ, ಹೆಬ್ಬಾಳ್ ಕಾಲೋನಿಯಲ್ಲಿ ಪಾದಯಾತ್ರೆ ನಡೆಸಿದ ಶಾಸಕರು, ಬಳಿಕ ನಿಂಗಯ್ಯನ ಕೆರೆ ಸರ್ಕಾರಿ ಪದವಿಪೂರ್ವ ಕಾಲೇಜು ಆವರಣದಲ್ಲಿ ಜನ ಸಂಪರ್ಕ ಸಭೆ ನಡೆಸಿದರು.

ಸದರಿ ವಾರ್ಡ್‌ನ ವ್ಯಾಪ್ತಿಯಲ್ಲಿ ಹಲವು ರಸ್ತೆಗಳಿಗೆ ಮಳೆ ನೀರು ಚರಂಡಿ ಇಲ್ಲದಿರುವುದರ ಬಗ್ಗೆ ಅಲ್ಲಿನ ನಿವಾಸಿಗಳು ಶಾಸಕರ ಗಮನ ಸೆಳೆದರು. ಇದಕ್ಕೆ ಸ್ಪಂದಿಸಿದ ಶಾಸಕರು, ಅವಶ್ಯವಿರುವ ರಸ್ತೆಗಳಿಗೆ ಮಳೆ ನೀರು ಚರಂಡಿ ಮಾಡಿಸಲು ಕ್ರಿಯಾಯೋಜನೆ ತಯಾರಿಸಿ ಸಲ್ಲಿಸುವಂತೆ ಸ್ಥಳದಲ್ಲಿದ್ದ ಪಾಲಿಕೆಯ ಅಭಿಯಂತರರಿಗೆ ಸೂಚನೆ ನೀಡಿದರಲ್ಲದೆ, ಸದರಿ ಕಾಮಗಾರಿಯನ್ನು ತುರ್ತಾಗಿ ಪ್ರಾರಂಭಿಸಲಾಗುವುದೆಂದು ನಿವಾಸಿಗಳಿಗೆ ಭರವಸೆ ನೀಡಿದರು.

ಅಲ್ಲದೆ, ಹುಡ್ಕೋ ಬಡಾವಣೆಯ ಆಶ್ರಯ ಮನೆಗಳಿಗೆ ಹಕ್ಕು ಖುಲಾಸೆ ಪತ್ರ ನೀಡುವ ವಿಚಾರಕ್ಕೆ ಸಂಬಂಧಿಸಿದಂತೆ ಇರುವ ಗೊಂದಲಗಳನ್ನು ಶೀಘ್ರ ಬಗೆಹರಿಸುವಂತೆ ಪಾಲಿಕೆಯ ಕಂದಾಯ ವಿಭಾಗದ ಅಧಿಕಾರಿಗಳಿಗೆ ಶಾಸಕರು ಸೂಚನೆ ನೀಡಿದರು. ಅಲ್ಲದೆ, ಹುಡ್ಕೋ ಬಡಾವಣೆಯಲ್ಲಿ ಸಾಕಷ್ಟು ಮಂದಿ ಫಲಾನುಭವಿಗಳು ತಮ್ಮ ಮನೆಯನ್ನು ಮತ್ತೊಬ್ಬರಿಗೆ ಮಾರಾಟ ಮಾಡಿದ್ದು, ಸದರಿ ಮನೆಯನ್ನು ಪ್ರಸ್ತುತ ವಾಸ ಇರುವವರಿಗೆ ಖಾತೆ ಮಾಡಿಕೊಡಲು ಪಾಲಿಕೆ ಅಧಿಕಾರಿಗಳು ವಿಳಂಬ ಮಾಡುತ್ತಿರುವ ಬಗ್ಗೆ ಸಾರ್ವಜನಿಕರು ಶಾಸಕರಲ್ಲಿ ದೂರಿದರು. ವಿಳಂಬ ಮಾಡದೇ ಕೂಡಲೇ ಖಾತೆ ಮಾಡಿಕೊಡಲು ಕ್ರಮವಹಿಸುವಂತೆ ಶಾಸಕರು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಹುಡ್ಕೋ ಬಡಾವಣೆಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಕೆಟ್ಟು ನಾಲ್ಕೈದು ತಿಂಗಳೇ ಆಗಿದ್ದರೂ ಸರಿಪಡಿಸಲು ಕ್ರಮ ವಹಿಸದ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಶಾಸಕರು, ತ್ವರಿತವಾಗಿ ಸರಿಪಡಿಸಿ, ಮತ್ತೆ ಕೆಡದಂತೆ ಸೂಕ್ತ ನಿರ್ವಹಣೆ ಮಾಡಬೇಕೆಂದು ಸೂಚಿಸಿದರು. ಇದೇ ವೇಳೆ ಸದರಿ ಬಡಾವಣೆಯ ಉದ್ಯಾನವನದಲ್ಲಿ ಗಿಡ–ಗಂಟಿಗಳು ಬೆಳೆದಿದ್ದನ್ನು ಪರಿಶೀಲಿಸಿ, ಕೂಡಲೇ ಸ್ವಚ್ಛಗೊಳಿಸಿ ಉದ್ಯಾನವನಕ್ಕೆ ಹೊಸ ರೂಪ ಕೊಡುವಂತೆಯೂ ಹಾಗೂ ಪಾರ್ಕ್‌ನಲ್ಲಿ ವಿದ್ಯುತ್ ದೀಪ ಅಳವಡಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಭೈರವೇಶ್ವರನಗರದಲ್ಲಿ ಸರ್ವೀಸ್ ರಸ್ತೆಯವರೆಗೆ ಮಾತ್ರವೇ ಚರಂಡಿ ನಿರ್ಮಿಸಿರುವ ಕಾರಣ ಅಲ್ಲಿಂದ ಮುಂದೆ ರಸ್ತೆಯಲ್ಲಿ ಕೊಳಚೆ ನೀರು ಹರಿಯುತ್ತಿರುವುದನ್ನು ಗಮನಿಸಿದ ಶಾಸಕರು, ಮುಂದುವರೆದ ಕಾಮಗಾರಿಗೆ ಕ್ರಿಯಾಯೋಜನೆ ಸಿದ್ಧಪಡಿಸಲು ಅಧಿಕಾರಿಗಳಿಗೆ ತಿಳಿಸಿದರು.

ನಿಂಗಯ್ಯನಕೆರೆಯ ಸಮುದಾಯ ಭವನ ಸಾರ್ವಜನಿಕರ ಉಪಯೋಗಕ್ಕೆ ಬಾರದ ಹಾಗೆ ಇರುವುದನ್ನು ಗಮನಿಸಿ ಈ ಕೂಡಲೇ ಅಗತ್ಯ ಮೂಲ ಸೌಲಭ್ಯ ಕಲ್ಪಿಸಿ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ಜೊತೆಗೆ ಸದರಿ ವಾರ್ಡಿನ 2 ಅಂಗನವಾಡಿ ಕೇಂದ್ರಗಳಿಗೂ ಭೇಟಿ ನೀಡಿದ ಶಾಸಕರು, ಮಕ್ಕಳಿಗೆ ನೀಡುತ್ತಿರುವ ಆಹಾರ ಗುಣಮಟ್ಟದ ಬಗ್ಗೆ ಮಕ್ಕಳನ್ನೇ ಕೇಳಿ ಮಾಹಿತಿ ಪಡೆದರು.

ನಗರಪಾಲಿಕೆ ಮಾಜಿ ಸದಸ್ಯ ಪೈಶ್ರೀನಿವಾಸ್, ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ವಾರ್ಡ್ ಅಧ್ಯಕ್ಷ ಕೇಬಲ್ ನಾಗಣ್ಣ, ಮುಖಂಡರಾದ ಕೇಬಲ್ ಮಹೇಶ್, ಡಿ.ಸಿ.ನವೀನ್, ಜಯರಾಮೇಗೌಡ, ಅಪ್ಪಾಜಿಗೌಡ, ರವೀಶ್ ಮತ್ತಿತರರು ಹಾಜರಿದ್ದರು.



ಮೈಸೂರಿನ ಹೆಬ್ಬಾಳು–ಲೋಕನಾಯಕನಗರದಲ್ಲಿ ಸೋಮವಾರ ಪಾದಯಾತ್ರೆ ನಡೆಸಿದ ಶಾಸಕ ಕೆ.ಹರೀಶ್‌ಗೌಡ, ಸಾರ್ವಜನಿಕರ ಕುಂದುಕೊರತೆ ಆಲಿಸಿದರು.

ಭಾರತದಲ್ಲಿ ಎಂಪಾಕ್ಸ್ ಸೋಂಕು ದೃಢ

ನವದೆಹಲಿ: ಇತ್ತೀಚೆಗೆ ವಿದೇಶದಲ್ಲಿ ಪ್ರಯಾಣ ಮಾಡಿ ಭಾರತಕ್ಕೆ ಬಂದಿದ್ದ ವ್ಯಕ್ತಿಗೆ ಎಂಪಾಕ್ಸ್ ಸೋಂಕು ತಗಲಿರುವುದು ದೃಢಪಟ್ಟಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಶಂಕಿತ ಎಂಪಾಕ್ಸ್ ಪ್ರಕರಣ ದೃಢಪಟ್ಟಿದ್ದು, ಪ್ರಯಾಣ ಸಂಬಂಧಿತ ಸೋಂಕು ಎಂದು ಪರಿಶೀಲಿಸಲಾಗಿದೆ. ಪ್ರಯೋಗಾಲಯದ ಪರೀಕ್ಷೆಯು ರೋಗಿಯಲ್ಲಿ ಪಶ್ಚಿಮ ಆಫ್ರಿಕಾದ ಕ್ಲಾಡ್ –2 ಎಂಪಾಕ್ಸ್ ವೈರಸ್ ಇರುವಿಕೆಯನ್ನು ದೃಢಪಡಿಸಿದೆ ಎಂದು ಅದು ಹೇಳಿದೆ.

ಜುಲೈ 2022ರಿಂದ ಭಾರತದಲ್ಲಿ ವರದಿಯಾದ 30 ಪ್ರಕರಣಗಳಂತೆ ಇದು ಒಂದು ಪ್ರತ್ಯೇಕ ಪ್ರಕರಣವಾಗಿದೆ. ಇದು ಪ್ರಸ್ತುತ ವಿಶ್ವ ಆರೋಗ್ಯ ಸಂಸ್ಥೆಯ ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿಯ ಭಾಗವಾಗಿಲ್ಲ ಎಂದು ತಿಳಿಸಿದೆ. ಸೋಂಕಿತ ವ್ಯಕ್ತಿಯನ್ನು ಎಂಪಾಕ್ಸ್ ಕಾಯಿಲೆ ಚಿಕಿತ್ಸೆಗೆ ಮೀಸಲಾಗಿಟ್ಟಿರುವ ಆಸ್ಪತ್ರೆಯೊಂದರಲ್ಲಿ ಪ್ರತ್ಯೇಕವಾಗಿರಿಸಲಾಗಿದೆ. ಸದ್ಯ ಆತನ ಆರೋಗ್ಯ ಸ್ಥಿರವಾಗಿದೆ ಎಂದು ತಿಳಿಸಿದೆ.

ಮೈಸೂರು ಮೃಗಾಲಯದಲ್ಲಿ ಅರಣ್ಯಾಧಿಕಾರಿಗಳು, ಸಿಬ್ಬಂದಿಗೆ ಕಾರ್ಯಾಗಾರಕ್ಕೆ ಚಾಲನೆ

ಮೈಸೂರು,ಸೆ.9(ಎಂಟಿವೈ)– ಅಳಿವಿನಂಚಿಗೆ ದೂಡಲ್ಪಟ್ಟಿರುವ ಪ್ರಾಣಿಗಳ ಸಂತತಿ ಸಂರಕ್ಷಣೆಗೆ ಮೃಗಾಲಯಗಳು ಆದ್ಯತೆ ನೀಡಬೇಕಾದ ಅನಿವಾರ್ಯತೆ ಇದೆ ಎಂದು ಸಿಕ್ಕಿಂನ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಪಿ.ಸೆಂಥಿಲ್ ಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಚಾಮರಾಜೇಂದ್ರ ಮೃಗಾಲಯದಲ್ಲಿ ಭಾರತೀಯ ಅರಣ್ಯ ಸೇವೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಾಗಿ ಆಯೋಜಿಸಿದ್ದ 'ಮೃಗಾಲಯ ವ್ಯವಸ್ಥಾಪಕರಿಗಾಗಿ ವನ್ಯಜೀವಿಗಳು ಹಾಗೂ ಮೃಗಾಲಯ ನಿರ್ವಹಣೆ' ಕುರಿತ ಐದು ದಿನಗಳ ಕಾರ್ಯಾಗಾರವನ್ನು ಸೋಮವಾರ ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ಸಂದರ್ಭದಲ್ಲಿ ಹಲವು ಪ್ರಾಣಿ–ಪಕ್ಷಿ ಸಂತತಿ ಅಳಿವಿನಂಚಿಗೆ ದೂಡಲ್ಪಟ್ಟಿವೆ. ಅವುಗಳ ಸಂರಕ್ಷಣೆಗೆ ಒತ್ತು ನೀಡಬೇಕಾಗಿದೆ. ಈ ಹಿಂದೆ ಚೀತಾ ಸಂತತಿ ಅಳಿದಂತೆ ಇತರೆ ಪ್ರಾಣಿ ಸಂತತಿ ಅಳಿಯದಂತೆ ಎಚ್ಚರಿಕೆ ವಹಿಸುವ ಅಗತ್ಯವಿದೆ. ಮೃಗಾಲಯಗಳಲ್ಲಾದರೂ ಅಳಿವಿನಂಚಿನಲ್ಲಿರುವ ಪ್ರಾಣಿಗಳ ಸಂರಕ್ಷಣೆಗೆ ಕ್ರಮ ಕೈಗೊಳ್ಳಬೇಕು ಎಂದರು.

ಮೃಗಾಲಯ ನಿರ್ವಹಣೆ ಸವಾಲಿನಿಂದ ಕೂಡಿದೆ. ವನ್ಯಜೀವಿಗಳ ಪುನರ್ವಸತಿ, ಪಾಲನೆ, ಆರೈಕೆಯಲ್ಲಿ ಪಶುವೈದ್ಯರು, ಸಿಬ್ಬಂದಿ ಹಾಗೂ ಅಧಿಕಾರಿಗಳ ನಡುವೆ ಸಮನ್ವಯ ಇರಬೇಕು. ಮೃಗಾಲಯಗಳ ನಿರ್ವಹಣೆ ಮಾಡಲು ಅನುಭವ ಇರಬೇಕು. ಎಲ್ಲ ಸಿಬ್ಬಂದಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ವನ್ಯಜೀವಿ ಪಾಲಕರ ಅನುಭವವನ್ನು ಬಳಸಿಕೊಂಡು ಉತ್ತಮ ವಾತಾವರಣವನ್ನು ಮೃಗಾಲಯಗಳಲ್ಲಿ ನಿರ್ಮಿಸಬೇಕು ಎಂದು ಸಲಹೆ ಮಾಡಿದರು.


ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸುನಿಲ್ ಪವಾರ್ ಮಾತನಾಡಿ, ದೇಶದಲ್ಲಿಯೇ ಮೈಸೂರು ಮೃಗಾಲಯ ಮುಂಚೂಣಿ ಮೃಗಾಲಯ ಎಂಬ ಕೀರ್ತಿಗೆ ಪಾತ್ರವಾಗಿದೆ. ಇಲ್ಲಿನ ನಿರ್ವಹಣೆ ಹಾಗೂ ಪ್ರಾಣಿಗಳಿಗೆ ಆರೋಗ್ಯ ಸೇವೆ ಸೇರಿದಂತೆ ಪ್ರಾಣಿ–ಪಕ್ಷಿಗಳ ಹಿತ ಕಾಪಾಡುವ ನಿಟ್ಟಿನಲ್ಲಿ ಹಲವು ಕಾರ್ಯಕ್ರಮ ರೂಪಿಸಲಾಗಿದ್ದು, ದೇಶದ ಇತರೆ ಮೃಗಾಲಯ ಗಮನ ಸೆಳೆದಿದೆ. ಅಲ್ಲದೆ, ಮೃಗಾಲಯಕ್ಕೆ ಬರುವ ಪ್ರವಾಸಿಗರಿಗೆ ವನ್ಯಜೀವಿ ಸಂರಕ್ಷಣೆ ಬಗ್ಗೆಯೂ ಮೃಗಾಲಯ ಶಿಕ್ಷಣ ನೀಡುತ್ತಿದೆ. ಮೃಗಾಲಯಕ್ಕೆ ವಾರ್ಷಿಕ 40 ಲಕ್ಷ ಜನರು ಭೇಟಿ ನೀಡುತ್ತಿದ್ದು, ಅವರಲ್ಲಿ ಶೇ.10ರಷ್ಟು ಮಂದಿಯಲ್ಲಿ ಕಾಳಜಿ ಮೂಡಿದರೆ ಪರಿಸರ, ವನ್ಯಜೀವಿ ಸಂರಕ್ಷಣೆಗೆ ನೆರವಾಗುತ್ತದೆ ಎಂದರು.

ಇಂದಿನಿಂದ ಆರಂಭವಾದ ಕಾರ್ಯಾಗಾರ ಸೆ.13ರವರೆಗೂ ನಡೆಯಲಿದೆ. 8 ರಾಜ್ಯಗಳಿಂದ ಐಎಫ್‌ಎಸ್ ಅಧಿಕಾರಿಗಳು, ಮೃಗಾಲಯದ ಸಿಬ್ಬಂದಿ ಪಾಲ್ಗೊಂಡಿದ್ದಾರೆ. ಈ ಸಂದರ್ಭದಲ್ಲಿ ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಡಿ.ಮಹೇಶ್‌ಕುಮಾರ್, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕಿ ಸೀಮಾ, ಡಿಸಿಎಫ್ ಡಾ.ಕೆ.ಎನ್.ಬಸವರಾಜ್ ಇನ್ನಿತರರು ಉಪಸ್ಥಿತರಿದ್ದರು.



ಮೃಗಾಲಯದಲ್ಲಿ ಅರಣ್ಯಾಧಿಕಾರಿಗಳು, ಸಿಬ್ಬಂದಿಗೆ ಆಯೋಜಿಸಿರುವ ಕಾರ್ಯಾಗಾರದಲ್ಲಿ ಪಾಲ್ಗೊಂಡಿರುವ ಅಧಿಕಾರಿಗಳು.

ಮೈಸೂರು ಹಾಗೂ ಸುತ್ತಮುತ್ತ ನಾಳೆ...



ಇಂದಿನ ಪಂಚಾಂಗ

10.09.2024 ಮಂಗಳವಾರ, ಮಳೆ ನಕ್ಷತ್ರ: ಪುಬ್ಬ, 31.08.2024 ರಿಂದ 12.09.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಅನುರಾಧ, ರಾಹುಕಾಲ : ಮಧ್ಯಾಹ್ನ 3 ರಿಂದ 4.30ರವರೆಗೆ

■ **ಶ್ರೀ ಶ್ರೀ ಶ್ರೀ 101 ಗಣಪತಿ ದೇವಸ್ಥಾನ ಟ್ರಸ್ಟ್:** ಶ್ರೀ ಗೌರಿ–ಗಣೇಶ ಹಬ್ಬ ಮತ್ತು ಶ್ರೀ 101 ಗಣಪತಿ ಪ್ರತಿಷ್ಠಾಂಗ, 70ನೇ ವಾರ್ಷಿಕೋತ್ಸವದ ಪ್ರಯುಕ್ತ ವಿಶೇಷ ಪೂಜಾ ಮಹೋತ್ಸವ, ಸರಸ್ವತಿ ಮತ್ತು ವಾದ್ಯ ವೃಂದದವರಿಂದ ಸುಗಮ ಸಂಗೀತ, ಸ್ಥಳ: ದೇವಸ್ಥಾನದ ಬಳಿ, ತ್ಯಾಗರಾಜ ವೃತ್ತ, ಕೆ.ಆರ್.ಮೊಹಲ್ಲಾ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆ:** ಉಚಿತ ಸೈನಸೈಟಿಸ್ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ರಾಮಕೃಷ್ಣನಗರ, ಬೆಳಗ್ಗೆ 10ರಿಂದ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ:** ನಾಡಪ್ರಭು ಕೆಂಪೇಗೌಡ ಅಧ್ಯಯನ ಮತ್ತು ವಿಸ್ತರಣಾ ಕೇಂದ್ರ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಆದಿಚುಂಚನಗಿರಿ ಶ್ರೀ ಕ್ಷೇತ್ರದ ಪೀಠಾಧ್ಯಕ್ಷ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಅಧ್ಯಕ್ಷತೆ: ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ, ಮುಖ್ಯ ಅತಿಥಿಗಳು: ಸಾಹಿತಿ ಪ್ರೊ.ಕೃಷ್ಣೇಗೌಡ, ಇತಿಹಾಸ ವಿದ್ವಾಂಸ ಡಾ.ತಲಕಾಡು ಚಿಕ್ಕರಂಗೇಗೌಡ, ಕರಾಮುವಿವಿ ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ, ಸಂಯೋಜನಾಧಿಕಾರಿ ಡಾ.ಸಿ.ರಾಮೇಗೌಡ, ಸ್ಥಳ: ಘಟಿಕೋತ್ಸವ ಭವನ, ಕರಾಮುವಿವಿ, ಮುಕ್ತ ಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಶ್ರೀ ವಿದ್ಯಾಗಣಪತಿ ದೇವಸ್ಥಾನ, ಶ್ರೀ ಮಹಾಲಕ್ಷ್ಮಿ ದೇವಸ್ಥಾನ ಟ್ರಸ್ಟ್:** 44ನೇ ವರ್ಷದ ಗೌರಿ–ಗಣೇಶ ಹಬ್ಬದ ಪೂಜಾ ಮಹೋತ್ಸವ, ಸ್ಥಳ: ದೇವಸ್ಥಾನ, ವಿನಾಯಕನಗರ.

■ **ಅಂಬಾರಿ ಬಾಯ್ಸ್ :** 10ನೇ ವರ್ಷದ ಗಣಪತಿ ಪೂಜಾ ಮಹೋತ್ಸವ, ಲಕ್ಷ ದೀಪೋತ್ಸವ, ಸ್ಥಳ: ಕಾಮಾಟಗೇರಿ, ನಜರ್‌ಬಾದ್.

■ **ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಭಾರತೀಯ ಶೈಕ್ಷಣಿಕ ರಂಗಭೂಮಿ :** ಶೈಕ್ಷಣಿಕ ರಂಗಭೂಮಿ ರಾಷ್ಟ್ರೀಯ ಕಾರ್ಯಾಗಾರ, ಅಧ್ಯಕ್ಷತೆ : ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, ಮುಖ್ಯ ಅತಿಥಿಗಳು : ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಉಪಸ್ಥಿತರು : ಶಿಬಿರದ ನಿರ್ದೇಶಕ ರಜನೀಶ್ ಬಿಸ್ತ್, ಹಿರಿಯ ರಂಗಕರ್ಮಿ ಪ್ರಸನ್ನ, ಸ್ಥಳ: ಹಾರ್ಡ್ವಿಕ್ ಶಾಲೆ ಆವರಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10ಕ್ಕೆ.

■ **ಮೈಸೂರು ಆಕಾಶವಾಣಿ:** 90 ವರ್ಷಗಳು ತುಂಬಿರುವ ಸುಸಂದರ್ಭದಲ್ಲಿ ಮೈಸೂರು ಆಕಾಶವಾಣಿ ಆವರಣದಲ್ಲಿ ವಿಶೇಷ ಕಾರ್ಯಕ್ರಮಗಳು, ಬೆಳಗ್ಗೆ 11 ಗಂಟೆಗೆ ಮೈಸೂರು ಆಕಾಶವಾಣಿ ಆವರಣದಲ್ಲಿ ಗಿಡ ನೆಡುವ ಕಾರ್ಯಕ್ರಮ, ಭಾಗವಹಿಸುವವರು: ಮೈಸೂರು ಆಕಾಶವಾಣಿ ಸಂಸ್ಥಾಪಕ ಡಾ.ಎಂ.ವಿ.ಗೋಪಾಲಸ್ವಾಮಿ ಕುಟುಂಬದವರು ಹಾಗೂ ನಾ.ಕಸ್ತೂರಿ ಕುಟುಂಬದವರು, ಸ್ಥಳ: ಆಕಾಶವಾಣಿ ಆವರಣ.

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು:** ರಾಷ್ಟ್ರೀಯ ಸೇವಾ ಯೋಜನೆಯ ದೈನಂದಿನ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ: ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಅಧ್ಯಕ್ಷತೆ: ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ಉಪಸ್ಥಿತರು: ಕಾಲೇಜು ಪ್ರಿನ್ಸಿಪಾಲ್ ಡಾ.ಎಂ.ಶಾರದ, ಇತಿಹಾಸ ವಿಭಾಗದ ಮುಖ್ಯಸ್ಥೆ ತ್ರಿವೇಣಿ, ಸ್ಥಳ: ಸೆಮಿನಾರ್ ಹಾಲ್, ಬೆಳಗ್ಗೆ 11ಕ್ಕೆ.

■ **ಹೋಟೆಲು ಮಾಲೀಕರ ಪತ್ತಿನ ಸಹಕಾರ ಸಂಘ:** ಸಹಕಾರ ಮಿತ್ರ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ: ಅರ್ಕ ಫೌಂಡೇಷನ್ ಸಂಸ್ಥಾಪಕ ಶ್ರೀ ಯೋಗಿ ಶ್ರೀನಿವಾಸ ಅರ್ಕ, ಮುಖ್ಯ ಅತಿಥಿಗಳು: ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಅಧ್ಯಕ್ಷತೆ: ಹೋಟೆಲು ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾರಾಯಣ ವಿ.ಹೆಗಡೆ, ಸಹಕಾರ ಮಿತ್ರ ಪ್ರಶಸ್ತಿ ಭಾಜನರು: ಬಿ.ಜಿ.ರಾಘವನ್, ರಾಮಕೃಷ್ಣ ಹೆಬ್ಬಾರ್, ಆರ್.ಮುರಳೀಧರನ್, ಸ್ಥಳ: ಹೋಟೆಲ್ ಪೈವಿಸ್ತಾ ಸಭಾಂಗಣ, ಬೆಳಗ್ಗೆ 11.30ಕ್ಕೆ.

■ **ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಕೈಗಾರಿಕಾ ಸರಬರಾಜು ಮತ್ತು ಮಾರಾಟ ಸಹಕಾರ ಸಂಘ:** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಡಿ.ಪದ್ಮನಾಭ, ಸ್ಥಳ: ಜಿಲ್ಲಾ ಕೈಗಾರಿಕಾ ಕೇಂದ್ರ ಕಚೇರಿ ಆವರಣ, ಮಧ್ಯಾಹ್ನ 12ಕ್ಕೆ.

■ **ಎಸ್.ಪಿವಿಜಿಎಂಸಿ ಟ್ರಸ್ಟ್; ಪಾರಂಪರಿಕ ಸಂಗೀತೋತ್ಸವ,** 63ನೇ ಪಾರಂಪರಿಕ ಸಂಗೀತೋತ್ಸವ, ಸಂಜೆ 5.30 ಗಂಟೆಯಿಂದ 6.30ರವರೆಗೆ ಗಮಕ ವಾಚನ ಕಾರ್ಯಕ್ರಮ, ಕಾವ್ಯ : ದೇವೀ ಭಾಗವತ, ವಾಚನ :ವಿದುಷಿ ಧರಿತ್ರೀ ಆನಂದರಾವ್, ವ್ಯಾಖ್ಯಾನ : ಡಾ. ಎನ್.ಕೆ. ರಾಮಶೇಷನ್, ಸಂಜೆ 6.45ಕ್ಕೆ ವಿದ್ವಾನ್ ಹರೀಶ್ ಶಿವರಾಮಕೃಷ್ಣನ್ ಅವರಿಂದ ಗಾಯನ, ವಿದ್ವಾನ್ ಕಾರ್ತಿಕ್ ನಾಗರಾಜ್–ವಯೋಲಿನ್, ವಿದ್ವಾನ್ ಉಮಯಾಳಪುರಂ ಸಿವರಾಮನ್–ಮೃದಂಗ, ವಿದ್ವಾನ್ ಅರುಣ್‌ಕುಮಾರ್–ರಿದಂಪ್ಯಾಡ್, ಸ್ಥಳ: ಸ್ಥಳ: ಎಸ್‌ಪಿವಿಜಿಎಂಸಿ ಟ್ರಸ್ಟ್, 8ನೇ ಕ್ರಾಸ್, ವಿ.ವಿ.ಮೊಹಲ್ಲಾ.


■ **ಕರ್ನಾಟಕ ರಾಜ್ಯ ಕರಕುಶಲ ವಸ್ತುಗಳ ಉತ್ಪಾದಕರ ಸಂಘ:** ವುಡ್ ಇನ್ಲೆ ಕರಕುಶಲ ತರಬೇತಿ ಸಮಾರೋಪ ಸಮಾರಂಭ, ಅಧ್ಯಕ್ಷತೆ: ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ, ಮುಖ್ಯ ಅತಿಥಿಗಳು: ಜಿಲ್ಲಾ ಕೌಶಲಾಭಿವೃದ್ಧಿ ಅಧಿಕಾರಿ ನಾರಾಯಣಮೂರ್ತಿ, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಕೆ.ಶಿವಲಿಂಗಯ್ಯ, ಸುನೀಲ್‌ಕುಮಾರ್, ನಾಗೇಂದ್ರಪ್ಪ, ದೇವರಮಣಿ, ಸ್ಥಳ: ರೋಟರಿ ಸೆಂಟರ್, ಸಂಜೆ 5ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 'ಶ್ರದ್ಧೆಯ ಶಿಲ್ಪ' ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್.ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಮೈಸೂರು ಆಕಾಶವಾಣಿಗೆ 90–ಮಾತನಾಡುತ್ತಾರೆ ಪತ್ರಕರ್ತರಾದ ಅಂಶಿ ಪ್ರಸನ್ನಕುಮಾರ್, 6.50 ರೈತರಿಗೆ ಸಲಹೆ, 7.15 ಮೈಸೂರು ಆಕಾಶವಾಣಿ ಮೈಲಿಗಲ್ಲುಗಳು–ಮೈಸೂರು ಆಕಾಶವಾಣಿಯ ಉಪನಿರ್ದೇಶಕ ಎಸ್.ಸ್.ಉಮೇಶ್ ಅವರೊಂದಿಗೆ ಸಂದರ್ಶನ, ಸಂದರ್ಶಕರು: ಅಬ್ದುಲ್ ರಶೀದ್, 8.30 ಬಾನುಲಿ ಇಂಗ್ಲೀಷ್ ಪಾಠ–ರೇಡಿಯೋ ಸರಣಿ, ಪ್ರಸ್ತುತಿ: ಸದಾನಂದ. ಆರ್, 8.40 ಮೈಸೂರು ಆಕಾಶವಾಣಿಗೆ 90–ಕೇಳುಗರೊಂದಿಗೆ ಆತ್ಮೀಯ ಸಂವಾದ, ಪ್ರಸ್ತುತಿ: ಡಾ.ಮೈಸೂರು ಉಮೇಶ್, 10.00 ಮೈಸೂರು ಆಕಾಶವಾಣಿಗೆ 90–ಯುವ ಕೇಳುಗರೊಂದಿಗೆ ಸಂವಾದ, ಪ್ರಸ್ತುತಿ: ಬಿ.ದಿಗ್ವಿಜಯ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಮೈಸೂರು ಆಕಾಶವಾಣಿಗೆ 90, ಕಥೆಯಲ್ಲಿದೆ ಉತ್ತರ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಚೈತ್ರಿಕಾ **ಮಧ್ಯಾಹ್ನ:** 12.05 ವನಿತಾ ವಿಹಾರ 'ಹೀಗಿದೆ ನೋಡಿ ನಮ್ ಜೋಡಿ', ಭಾಗವಹಿಸುತ್ತಾರೆ: ಪತ್ರಕರ್ತ ಸಮಾಜ ಸೇವಾ ಕಾರ್ಯಕರ್ತ ಜೋಡಿ ಕಮಲ್ ಗೋಪಿನಾಥ್ ಹಾಗೂ ಶೈಲಜಾ ಮಹೇಶ್ವರಪ್ಪ, ಇವರೊಂದಿಗೆ ಭಾಗವಹಿಸುತ್ತಾರೆ: ಅಬ್ದುಲ್ ರಶೀದ್, 12.30 ದೇವರನಾಮ–ರೋಹಿಣಿ ಸುಧಾಮ, 12.45 ಡಾ.ಎ.ಎನ್.ಮೂರ್ತಿ ರಾಯರೊಂದಿಗೆ ದೇ.ಜ.ಗೌ ಅವರು ನಡೆಸಿದ್ದ ಸಂವಾದ, 1.00 ಬಾನುಲಿ ಇಂಗ್ಲಿಷ್ ಪಾಠ–ರೇಡಿಯೋ ಸರಣಿ, ಪ್ರಸ್ತುತಿ: ಸದಾನಂದ. ಆರ್., 1.20 ಭಾವಗೀತೆಗಳು–ಮಂಜುಳಾ ಗುರುರಾಜ್, 1.30 ಮೈಸೂರು ಆಕಾಶವಾಣಿಗೆ 90–ಕೇಳುಗರ ಸಂದೇಶಗಳನ್ನಾಧರಿಸಿದ ಚಿತ್ರಗೀತೆಗಳ ಕಾರ್ಯಕ್ರಮ, ಪ್ರಸ್ತುತಿ: ಡಾ.ಮೈಸೂರು ಉಮೇಶ್, 3.00 ಮೈಸೂರು ಆಕಾಶವಾಣಿಗೆ 90, ರೂಪಕ–ಬಹುಜನ ಹಿತಾಯ ಬಹುಜನ ಸುಖಾಯ, ರಚನೆ–ಶ್ರೀನಿವಾಸಪ್ರಸಾದ್, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 4.00 ಮೈಸೂರು ಆಕಾಶವಾಣಿಗೆ 90–ರೈತರೊಂದಿಗೆ ಸಂವಾದ, ಪ್ರಸ್ತುತಿ: ಎನ್.ಕೇಶವಮೂರ್ತಿ, 5.00 ಮೈಸೂರು ಆಕಾಶವಾಣಿಗೆ 90–ವಿಶೇಷ ಸೈಕಲ್ ಸವಾರಿ ಮಾತಿನ ಲಹರಿ, ಪ್ರಸ್ತುತಿ: ಜಾಂಪಣ್ಣ ಆಶೀಹಾಳ್ ಮತ್ತು ಅಬ್ದುಲ್ ರಶೀದ್, 6.50 ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ರೇಷ್ಮೆ ಐಸಿರಿ–ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ, ನೂತನ ರೇಷ್ಮೆ ಹುಳು ಸಂಕಿರಣ ತಳಿಗಳು ಹಾಗೂ ಡಬಲ್ ಹೈಬ್ರಿಡ್ ತಳಿಗಳ ಅನುಕೂಲಗಳು. ಈ ಕುರಿತು ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ.ಎಲ್.ಕುಸುಮಾ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, 8.00 ಮೈಸೂರು ಆಕಾಶವಾಣಿಗೆ 90–ವಿಶೇಷ ಸಂಗೀತ ಸಂವಾದ, ಪ್ರಸ್ತುತಿ: ಹೆಚ್.ಎಲ್.ಶಿವಶಂಕರಸ್ವಾಮಿ ಹಾಗೂ ತುಮಕೂರು. ಬಿ.ರವಿಶಂಕರ್, 9.30 ಮೈಸೂರು ಆಕಾಶವಾಣಿಗೆ 90–ಖ್ಯಾತರೊಂದಿಗೆ ವಿಶೇಷ ಸಂವಾದ, ಪ್ರಸ್ತುತಿ: ಜಿ.ಶಾಂತಕುಮಾರ್


ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರಾದ
ಎಂ ಪ್ರದೀಪ್ ಕುಮಾರ್ ರವರಿಗೆ
ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು
ದಿನಾಂಕ : 10-09-2024
ಶುಭಕೋರುವವರು :-
ಸಿದ್ಧಾರ್ಥ ನಗರ ಮತ್ತು ಆಲನಹಳ್ಳಿ ಸ್ನೇಹ ಬಳಗ


OPENS TOMORROW
THE FINEST BRIDAL EXHIBITION
HI LIFE BRIDES
BRIDAL COUTURE | JEWELLERY | ACCESSORIES
OVER 100+ OF THE FINEST DESIGNERS
11 & 12 SEPT
Radisson BLU
PLAZA HOTEL MYSORE
10 am - 9 pm
NEERU'S


ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರಾದ
ಎಂ ಪ್ರದೀಪ್ ಕುಮಾರ್ ರವರಿಗೆ
ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು
ದಿನಾಂಕ : 10-09-2024
ಶುಭಕೋರುವವರು :-
ಜನತಾ ನಗರ ಮತ್ತು ಟಿ.ಕೆ ಬಡಾವಣೆ ಗೆಳೆಯರ ಬಳಗ


ದಾರಿ ದೀಪ ಜನಸೇವಾ ಕೇಂದ್ರ ಅಧ್ಯಕ್ಷರಾದ
ಎಂ ಪ್ರದೀಪ್ ಕುಮಾರ್ ರವರಿಗೆ
ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು
ದಿನಾಂಕ : 10-09-2024
ಶುಭಕೋರುವವರು :-
ಎಂ ಪ್ರದೀಪ್ ಕುಮಾರ್, ಸ್ನೇಹಬಳಗ
ಎನ್. ಹೆಚ್. ಪಾಳ್ಯ
ಮಹೇಶ್. ಎನ್
ಕ್ರಿಯೇಟಿವ್ ಎಂಟರ್‌ಪ್ರೈಸಸ್
9900252131

ನಕ್ಕರೆ ಅದೇ ಸ್ವರ್ಗ

ಹೆಂಡತಿ : ಲಾಯರ್ ಸರ್ ನನಗೆ ಗಂಡ ಬೇಕು.
ಲಾಯರ್ : ಡೈವೋರ್ಸ್ ಆಗಿ ಆರು ತಿಂಗಳಾಗಿಲ್ಲ. ಮತ್ತೆ ಗಂಡ ಬೇಕು ಅಂತೀಯಲ್ಲಮ್ಮ?
ಹೆಂಡತಿ : ಅವನ ಖುಷಿನಾ ನನ್ನ ಕೈಯಲ್ಲಿ ನೋಡೋಕೆ ಆಗ್ತಾ ಇಲ್ಲ.!?

ಮೈಸೂರು ಮಿತ್ರ

ಮಂಗಳವಾರ, 10 ಸೆಪ್ಟೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಪಾಸಿಟಿವ್ ಥಿಂಕಿಂಗ್ ಅಂದ್ರೆ ಪ್ರತಿ ಸಲವೂ ಒಳ್ಳೆಯದೇ ಆಗುತ್ತದೆಂದು ನಿರೀಕ್ಷಿಸುವುದಲ್ಲ. ಎಲ್ಲವೂ ಒಳ್ಳೆಯದಕ್ಕೆ ಆಗುತ್ತಿದೆ ಎಂದು ತಿಳಿದು ಮುನ್ನಡೆಯುವುದು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬೇಸರವಿರಬಾರದು, ಅವಸರ ಮಾಡಬಾರದು.

ನಿಮ್ಮ ಪತ್ರಗಳು

ಇಸ್ಕಾನ್ : ಸೂಕ್ತ ಸರತಿ ಸಾಲಿನ ವ್ಯವಸ್ಥೆ ಮಾಡಲಿ

ಮಾನ್ಯರೆ,

ಮೈಸೂರು ಜಯನಗರದ 18ನೇ ಕ್ರಾಸ್‌ನಲ್ಲಿರುವ ಇಸ್ಕಾನ್ ಕೃಷ್ಣ ದೇವಾಲಯದಲ್ಲಿ ಕೃಷ್ಣ ಜಯಂತಿಯಂದು ಪ್ರತಿ ವರ್ಷ ವಿಜೃಂಭಣೆಯಿಂದ ಶ್ರೀ ಕೃಷ್ಣ ಜಯಂತಿಯನ್ನು ಆಚರಿಸಲಾಗುತ್ತಿದೆ. ಅದೇ ರೀತಿ ಈ ವರ್ಷ ಸೆಪ್ಟೆಂಬರ್ 25 ಮತ್ತು 26 ರಂದು ಹಬ್ಬವನ್ನು ಆಚರಿಸಲಾಯಿತು. ದಿನಾಂಕ 26 ರ ಕೃಷ್ಣ ಜಯಂತಿಯ ಆಚರಣೆಯಂದು ಕೃಷ್ಣ ದರ್ಶನಕ್ಕೆ ಭಾರಿ ಜನಸಂದಣಿ ಇತ್ತು. ಆದರೆ ದೇವರ ದರ್ಶನಕ್ಕೆ ಸೂಕ್ತ ಒಂದು ಸಾಲಿನ ಕ್ಯೂ ಮಾಡದೆ ಹಾಗೂ ಪ್ರವೇಶ ಹಾಗೂ ನಿರ್ಗಮನಕ್ಕೆ ಬೇರೆ ಬೇರೆ ದ್ವಾರಗಳಿದ್ದರೂ, ಕೇವಲ ಒಂದೇ ದ್ವಾರದಿಂದ ಒಳ ಹೋಗಲು ಹಾಗೂ ಹೊರ ಬರಲು ವ್ಯವಸ್ಥೆ ಮಾಡಿದ್ದರು. ಸೂಕ್ತ ಸಿಬ್ಬಂದಿ ಇಲ್ಲದೆ ಇದ್ದ ಕಾರಣ ಜನರ ನೂಕು ನುಗ್ಗಲನ್ನು ನಿಯಂತ್ರಿಸುವುದು ಕಷ್ಟಕರವಾಗಿತ್ತು. ಈ ವಿಐಪಿಗಳ ಓಡಾಟದಿಂದ ಜನರು ಮುಖ್ಯ ದ್ವಾರದಿಂದ ಒಳ ಹೋಗಲು ಹೊರ ಬರಲು ಭಾರಿ ಪ್ರಯಾಸ ಪಡುವಂತಾಗಿತ್ತು. ಅದೆಷ್ಟು ಪ್ರಯಾಸಕರ ಎಂದರೆ ನೂಕು ನುಗ್ಗಲಿನಲ್ಲಿ ಕಾಲ್ತುಳಿತವಾಗುವ ಸಂಭವವೂ ಇತ್ತು. ಮುಖ್ಯ ದ್ವಾರದಲ್ಲಿ ವಿಐಪಿಗಳ ಆಗಮನದ ಹಿನ್ನೆಲೆಯಲ್ಲಿ ಪೊಲೀಸರು ಇದ್ದರಾದರೂ ಅವರೂ ಕೂಡ ಅಸಹಾಯಕರಾಗಿದ್ದರು. ಬಹಳಷ್ಟು ಮಂದಿ ನೂಕು ನುಗ್ಗಲು ಜಾಸ್ತಿಯಾದ ಕಾರಣ ದೇವರ ದರ್ಶನ ಮಾಡದೆ ಹಿಂತಿರುಗಿದರು.

ಮುಂದಿನ ಬಾರಿಗಾದರೂ ಕ್ಯೂನಲ್ಲಿ ಒಬ್ಬೊಬ್ಬರೇ ಸಾಗುವಂತೆ ಹಾಗೂ ನೇರವಾಗಿ ದೇವರ ದರ್ಶನ ಮಾಡಿ ಹೊರ ಬರುವಂತೆ ಏರ್ಪಾಡು ಮಾಡಲಿ.

–ಮುಳ್ಳೂರು ಪ್ರಕಾಶ್, ಕನಕದಾಸ ನಗರ, ಮೈಸೂರು.

ದೇಶದಲ್ಲಿ ಹೆಚ್ಚುತ್ತಿರುವ ಹೆಣ್ಣು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯಗಳು

ಮಾನ್ಯರೆ,

ದೇಶ ಹಾಗೂ ರಾಜ್ಯದಲ್ಲಿ ಹೆಣ್ಣು ಮಕ್ಕಳು, ಮಹಿಳೆಯರ ಮೇಲೆ ಅತ್ಯಾಚಾರ, ಕೊಲೆ ಹೀಗೆ ನಾನಾ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿದ್ದು, ಇತ್ತೀಚೆಗೆ ಮಹಿಳೆಯರಿಗೆ ಸೂಕ್ತ ಭದ್ರತೆ ಇಲ್ಲದಂತಾಗಿದೆ.

ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳು ಹಾಗೂ ಕೊಲ್ಕತ್ತಾದ ವೈದ್ಯ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರಗೈದು ಕೊಲೆಗೈದಿರುವುದು, ಬಸ್ ನಿಲ್ದಾಣದಲ್ಲಿ ಸಾಮೂಹಿಕ ಅತ್ಯಾಚಾರ ಜರುಗಿರುವುದು, ಬೆಂಗಳೂರಿನಲ್ಲಿ ವಿದ್ಯಾರ್ಥಿನಿ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿರುವುದು. ಉತ್ತರಪ್ರದೇಶದ ಭದೋಹಿ ಜಿಲ್ಲೆಯ ನರ್ಸ್ ಮೇಲೆ 21 ವರ್ಷದಿಂದ ಹೆದರಿಸಿ ಅತ್ಯಾಚಾರ ಮಾಡಿರುವುದು. ಚಿಕ್ಕಮಗಳೂರು ತಾಲೂಕಿನ ಮಲ್ಲೇನಹಳ್ಳಿಗೆ ಕೆಲವು ತಿಂಗಳ ಹಿಂದೆ ಯೋಗ, ಧ್ಯಾನ, ಕಲಿಯಲು ಆಶ್ರಮಕ್ಕೆ ಬಂದಿದ್ದ ವಿದೇಶಿ ಮಹಿಳಾ ಮೇಲೆ ಯೋಗಗುರು ಅತ್ಯಾಚಾರ ಮಾಡಿರುವುದು. ಸಾಕಷ್ಟು ಕಾನೂನು ಕ್ರಮಕೈಗೊಂಡರೂ ಲೈಂಗಿಕ ದೌರ್ಜನ್ಯಗಳು, ಆರ್ಭಟಗಳು ನಡೆಯುತ್ತಲೇ ಇವೆ. ಹೆಣ್ಣು ಮಕ್ಕಳನ್ನು ದೈವತ್ವಕ್ಕೆ ಹೋಲಿಸಿರುವ ಭಾರತ ದೇಶದಲ್ಲಿ ಮಹಿಳೆಗೆ ಭದ್ರತೆ ಇಲ್ಲದಾಗಿದೆ. ಒಮ್ಮೆ ಯೋಚಿಸಿ ನೋಡಬೇಕಾಗಿದೆ. ಭಾರತ ಮಹಿಳೆಯರಿಗೆ ಸುರಕ್ಷಿತವೇ?

–ಪಿ ಸಿ ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು.

ಹುಣಸೂರು ರಸ್ತೆಯಲ್ಲಿ ಅಪಾಯಕಾರಿ ಗುಂಡಿ



ಮಾನ್ಯರೆ,

ಗಂಗೋತ್ರಿಯಿಂದ ಪಡುವಾರಹಳ್ಳಿಗೆ ಹೋಗುವ ಮಾರ್ಗ, ಹುಣಸೂರು ರಸ್ತೆಯಲ್ಲಿ ಕೂಡುವ ವೃತ್ತದ (ಎಸ್. ವೆಂಕಟರಮಣಯ್ಯ ವೃತ್ತ) ಬಳಿ ಮಧೂಸ್ ಟೈರ್ ಮುಂಭಾಗ ಪಾದಚಾರಿ ಮಾರ್ಗದಲ್ಲಿ ಆಳವಾದ ಚರಂಡಿ ಬಾಯ್ತೆರೆದುಕೊಂಡಿದ್ದು ಅಪಾಯಕಾರಿ ಸ್ಥಿತಿಯಲ್ಲಿದೆ. ಸದರಿ ವೃತ್ತದಲ್ಲಿ ಸಿಗ್ನಲ್ ಕೂಡ ಇರುವುದರಿಂದ ದ್ವಿಚಕ್ರ ವಾಹನ ಚಾಲಕರು ಕೂಡಾ ಆ ಬದಿಗೆ ಬರುವ ಸಂಭವವಿದೆ. ಗೊತ್ತಿಲ್ಲದೇ ದ್ವಿಚಕ್ರ ವಾಹನವಾಗಲೀ ಅಥವಾ ಪಾದಚಾರಿಯಾಗಲೀ ಕಾಲಿಟ್ಟಲ್ಲಿ ಬದುಕುಳಿಯುವುದೇ ಕಷ್ಟಕರವಾಗಿದೆ. ಸಂಬಂಧಪಟ್ಟವರು ಕೂಡಲೇ ದುರಸ್ತಿಪಡಿಸಲು ಮನವಿ.

–ಕೆ.ಎಂ. ನಾಗರಾಜು, ವಿಜಯನಗರ 1ನೇ ಹಂತ, ಮೈಸೂರು

ಕೇಂದ್ರದ ಮುಂದೆ ಕೈಯೊಡ್ಡಿ ನಿಲ್ಲುವ ಪರಿಸ್ಥಿತಿ ರಾಜ್ಯಕ್ಕೆ ಬಾರದಿರಲಿ

ಮಾನ್ಯರೆ,

ಹಲವಾರು ಉಚಿತ ಭಾಗ್ಯಗಳಿಂದಾಗಿ ಹಿಮಾಚಲ ಪ್ರದೇಶ ಸರ್ಕಾರ ಆರ್ಥಿಕವಾಗಿ ದಿವಾಳಿ ಸುಳಿಗೆ ಸಿಲುಕಿದ್ದು, ಇದು ಕರ್ನಾಟಕಕ್ಕೂ ಎಚ್ಚರಿಕೆಯ ಗಂಟೆಯಾಗಿದೆ. ಸರ್ಕಾರಿ ನೌಕರರಿಗೆ ಸಂಬಳ ನೀಡಲೂ ತಿಣುಕಾಡುವ ಪರಿಸ್ಥಿತಿ ಎದುರಾಗಿ ಸಿಎಂ ಆದಿಯಾಗಿ ಮಂತ್ರಿಗಳು, ನಿಗಮ–ಮಂಡಳಿ ಅಧ್ಯಕ್ಷರು, ಕಳೆದ ಎರಡು ತಿಂಗಳಿಂದ ಸಂಬಳ ಪಡೆಯದೇ ಆರ್ಥಿಕ ಪರಿಸ್ಥಿತಿ ಬಿಗಡಾಯಿಸಿರುವ ಬಗ್ಗೆ ವರದಿಯಾಗಿದೆ.

ಯಾವುದೇ ಸಾಧಕ–ಬಾಧಕಗಳನ್ನು ಪರಾಮರ್ಶಿಸದೆ ನಮ್ಮ ರಾಜ್ಯದಲ್ಲೂ ಪಂಚ ಗ್ಯಾರಂಟಿಗಳನ್ನು ಘೋಷಿಸಿದ ಕಾಂಗ್ರೆಸ್ ಸರ್ಕಾರಕ್ಕೆ ಈಗ ಅದರ ವ್ಯತಿರಿಕ್ತ ಪರಿಣಾಮಗಳು ತಟ್ಟುತ್ತಿದ್ದು, ಯೋಜನೆಗಳ ಬಗ್ಗೆ ಹಲವಾರು ಸಚಿವರು ಅಪಸ್ವರ ಎತ್ತಿದ್ದಾರೆ. ಯಾವುದೇ ಮಾನದಂಡವಿಲ್ಲದೆ ಘೋಷಿಸಿದ ಈ ಉಚಿತ ಯೋಜನೆಗಳಿಂದಾಗಿ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಗರಬಡಿದಂತಾಗಿದ್ದು, ರಾಜ್ಯದ ಆರ್ಥಿಕ ಸಂಪನ್ಮೂಲದ ಬಹುತೇಕ ಪಾಲು ಈ ಪಂಚಭಾಗ್ಯಗಳಿಗೆ ವಿನಿಯೋಗವಾದಲ್ಲಿ ಯಾವ ಅಭಿವೃದ್ಧಿ ಕಾರ್ಯವನ್ನು ನಿರೀಕ್ಷಿಸಲು ಸಾಧ್ಯ?

ಅಧಿಕಾರ ಗದ್ದುಗೆ ಸ್ಥಾನವನ್ನು ಗಟ್ಟಿ ಮಾಡಿಕೊಳ್ಳಲು ಮಾಡಿಕೊಂಡಿರುವ ಈ ಉಚಿತ ಭಾಗ್ಯಗಳು ಮುಂದೊಂದು ದಿನ ಆರ್ಥಿಕ ಅಪಾಯ ತಂದೊಡ್ಡುವ ಲಕ್ಷಣಗಳನ್ನು ಅಲ್ಲಗಳೆಯುವಂತಿಲ್ಲ. ಇದಕ್ಕೆ ಹಿಮಾಚಲ ಪ್ರದೇಶವೇ ತಾಜಾ ಉದಾಹರಣೆಯಾಗಿದ್ದು ಕೇಂದ್ರದ ಮುಂದೆ ಕೈಯೊಡ್ಡಿ ನಿಲ್ಲುವ ಪರಿಸ್ಥಿತಿ ರಾಜ್ಯಕ್ಕೆ ಬಾರದಿರಲಿ.

– ಹೆಚ್.ಆರ್. ಪ್ರಸಾದ್, ವಿವೇಕಾನಂದನಗರ, ಮೈಸೂರು.

ನಂಬಿಕೆಯ ಮರ ಸದಾ ಹಸಿರಾಗಿರಲಿ





ಪರಮೇಶ ಕೆ.ಉತ್ತನಹಳ್ಳಿ
ಕನ್ನಡ ಉಪನ್ಯಾಸಕರು,
ಹವ್ಯಾಸಿ ಬರಹಗಾರರು
ಮೊ: 77958 62281

> “ ನಂಬಿಕೆಯೆಂಬುದು ಒಂದು ಪರಿಣಾಮಕಾರಿಯಾದ ಅಂಶವಾಗಿದೆ. ಅದು ಉತ್ಸಾಹದ ಚಿಲುಮೆಗೆ ದಾರಿದೀಪವಾಗಿದೆ. ನಂಬಿಕೆ ಮತ್ತು ಅನುಮಾನ ಒಂದೇ ಜಾಗದಲ್ಲಿ ಇರಲು ಎಂದಿಗೂ ಸಾಧ್ಯವಿಲ್ಲ. ಅನುಮಾನದೊಂದಿಗೆ ಬದುಕದೆ ನಂಬಿಕೆಯ ಮೇಲೆ ವಿಶ್ವಾಸವಿಟ್ಟು ಮುಂದೆ ಸಾಗಿದರೆ ಆಗ ತನಗೆ ತಾನೇ ಅನುಮಾನ ಜಾಗ ಖಾಲಿ ಮಾಡುತ್ತದೆ. ನಂಬಿಕೆ ಎನ್ನುವುದು ಯಾವುದೇ ಸಂಬಂಧದ ಅಡಿಪಾಯ. ಈ ಅಡಿಪಾಯ ಗಟ್ಟಿಯಿಲ್ಲದಿದ್ದರೆ ಮನಸ್ಸುಗಳು ಮುರಿದು ಬೀಳುತ್ತವೆ. ಅನುಮಾನ ಎಂಬ ಹುಳು ಮನಸ್ಸಿನ ಒಳಗೆ ಸೇರಿದರೆ ಅದು ಕೊರೆಯುತ್ತಲೇ ಮನುಷ್ಯನನ್ನು ಮಾನಸಿಕವಾಗಿ ಅಧಃಪತನಕ್ಕೆ ಎಳೆದೊಯ್ಯುತ್ತದೆ. ಹೆಂಡತಿಯ ಮೇಲೆ ಗಂಡನಿಗೆ, ಗಂಡನ ಮೇಲೆ ಹೆಂಡತಿಗೆ ನಂಬಿಕೆ ಇರಬೇಕು. ಮುಖವಾಡದ ಬದುಕು ಮೂರೇ ದಿನ ಉಳಿಯುವುದು. ಅವಿಶ್ವಾಸದಿಂದ ಬಾಳಬಾರದು. ಪರಿವಾರದಲ್ಲಿ ನಂಬಿಕೆ ಬೆಳೆಸಬೇಕಾಗಿದೆ. ತಂದೆಯ ಬಗ್ಗೆ ಮಗನಿಗೆ, ಮಗನ ಬಗ್ಗೆ ತಂದೆಗೆ ಪೋಷಕರು ಮಕ್ಕಳು, ಗಂಡ–ಹೆಂಡತಿ, ಸಹೋದರ–ಸಹೋದರಿ, ಗುರು–ಶಿಷ್ಯರು, ಅತೀತ ಶಕ್ತಿಯನ್ನು ಒಳಗೊಂಡಿರುವ ನಿಸರ್ಗ–ಪ್ರಕೃತಿ ಹೀಗೆ ಸಾಗುವ ಸಂಬಂಧಗಳ ಅನುಬಂಧಗಳು ನಿಂತಿರುವುದೇ ನಂಬಿಕೆಯ ಮೇಲೆ.

ಮಾನವನ ಬದುಕು ನಂಬಿಕೆಯ ಅಡಿಗಲ್ಲ ಮೇಲೆ ನಿಂತಿದೆ. ನಂಬಿಕೆ ಇಲ್ಲದಿದ್ದರೆ ಮಾನವನ ಬದುಕಿಗೆ ಅರ್ಥವೇ ಇರುತ್ತಿರಲಿಲ್ಲ. ನಂಬಿಕೆಯಲ್ಲಿ ಭರವಸೆ ಇದೆ, ನೆಮ್ಮದಿ ಇದೆ. ನಂಬಿಕೆಯ ಊರುಗೋಲು ಮುರಿದರೆ ಅಪನಂಬಿಕೆ, ಸಂಶಯ, ದುಗುಡ, ದುಮ್ಮಾನಗಳ ಭಾವರೂಪಗಳು ಗರಿಗೆದರುತ್ತವೆ. ಯಾವಾಗ ನಮ್ಮ ನಮ್ಮ ಮಾತುಗಳಲ್ಲಿ, ನಡತೆಯಲ್ಲಿ ನಂಬಿಕೆಗಳು ಮೂಡುತ್ತವೆಯೋ ಆಗ ನಿಜಕ್ಕೂ ಅದೆಷ್ಟೋ ವ್ಯವಹಾರಗಳು, ವ್ಯಾಪಾರ ಕುದುರಲು ಸಾಧ್ಯ. ನಂಬಿಕೆಯಿಂದ ನಾಳಿನ ಬದುಕಿಗೆ ಭರವಸೆಯ ಬೆಳಕು ಕಾರಂಜಿಯಾಗಲು ಸಾಧ್ಯ. ಈ ದಿನ ನಾವು ಎಷ್ಟೇ ಕಷ್ಟ ಕಾರ್ಪಣ್ಯದಿಂದ ನೋವಿನ ದಳ್ಳುರಿಯಲ್ಲಿ ದಹಿಸುತ್ತಿದ್ದರೂ ನಾಳೆಯ ದಿನವಾದರೂ ಸಂತಸದ ಕ್ಷಣಗಳು ಅರಸುತ್ತಾ ಬರಬಹುದೆಂದು ನಂಬಿರುವುದು ಜೀವಂತ ಬದುಕಿನ ಲಕ್ಷಣ. ರೈತ ಬರಲಿರುವ ಮಳೆಯನ್ನು ನಂಬಿ ಹೊಲವನ್ನು ಹಸನು ಮಾಡಿ ಆಸೆಗಣ್ಣಿನಲ್ಲಿ ಕಾಯುವಿಕೆ, ಗಂಡು–ಹೆಣ್ಣು ಪರಸ್ಪರ ನಂಬಿಕೆಯ ಬನದೊಳಗೆ ಬದುಕುತ್ತಲೇ ಹೂ ಗಿಡಗಳ ಬೆಳೆಸುವ ಪರಿ ವಿನೂತನ.

ಈ ಬಗೆಯ ನಂಬಿಕೆಗಳೇ ನಮ್ಮ ಬದುಕಿನ ಮುನ್ನಡೆಗೆ ಸಹಾಯ ಮಾಡುತ್ತದೆ. ಈ ರೀತಿಯಲ್ಲಿ ನಂಬಿಕೆಯ ವಿಚಾರಗಳು–ಸಂಗತಿಗಳು ಕೇವಲ ಮನುಷ್ಯರಿಗೆ ಮಾತ್ರ ಅನ್ವಯವಾಗದೆ ಪ್ರಾಣಿ–ಪಕ್ಷಿಗಳು ಆತ್ಮೀಯ ಬಾಂಧವ್ಯತೆಯಿಂದ ಒಮ್ಮೊಮ್ಮೆ ಕೋಪವನ್ನು ವ್ಯಕ್ತಪಡಿಸಿದರೂ ತಾವು ನಂಬಿಕೆ ಇಟ್ಟಿರುವುದನ್ನು ದೂರ ಮಾಡಿಕೊಳ್ಳದೆ ಸದಾ ಕಾಲ ನಮ್ಮ ನೆರಳಲ್ಲಿಯೇ ಉಳಿಯುವುದು, ಮರಳಿ ಬರುವುದು ನಂಬಿಕೆಯ ಬಲವನ್ನು ವೃದ್ಧಿಸುತ್ತದೆ. ಅವುಗಳಿಗೆ ಕಾಡುವ ಭಾವ ಅನ್ನದ ಋಣ ಹಾಗೂ ಸ್ವಾಮಿ ನಿಷ್ಠೆಯ ನಂಬಿಕೆ.

ಅದೇ ಜಾಗದಲ್ಲಿ ಮಕ್ಕಳಿದ್ದು ಗದರಿಸುವುದು ಅಥವಾ ನಂಬಿಕೆಯನ್ನು ಕಳೆದುಕೊಂಡರೆ ಇಲ್ಲವೇ ದೂರವಾದರೆ ನೂರು ಬಾಣಗಳು ಒಮ್ಮೆಲೆ ಎದೆಯನ್ನು ಬಗೆದಂತೆ ಭಾಸವಾಗುತ್ತದೆ. ಅದಕ್ಕೆ ಬಲ್ಲವರು ಹೇಳುವುದು ನಂಬಿದರೆ ಇಂಬು, ನಂಬದಿರೆ ಅಂಬು ಎಂದು. ನಂಬಿಕೆಯ ಹಂಬಲದಿಂದ–ಬೆಂಬಲದಿಂದ ಬದುಕುತ್ತಿದ್ದೇವೆ. ಆಕಾಶವು ನಮ್ಮ ಮೇಲೆ ಬೀಳುವುದಿಲ್ಲ ಎಂಬ ಬಲವಾದ ನಂಬಿಕೆ–ವಿಶ್ವಾಸದಲ್ಲಿಯೇ ಅದರ ಅಡಿಯಲ್ಲಿ ನಾವು ನಿತ್ಯ ಬದುಕನ್ನು ಸಾಕುತ್ತಿದ್ದೇವೆ.

ಜೀವನ ಸದಾ ಹಸಿರಾಗಿರಬೇಕು. ಅದಕ್ಕೆ ನಂಬಿಕೆ ಎಂಬ ಮರ ಭದ್ರವಾದ ಬೇರುಕೊಟ್ಟು ಹಸಿರಿನ ಸಮೃದ್ಧತೆಯಿಂದ ಉಸಿರಾಗಿರಬೇಕು. ಪರಸ್ಪರ ಒಡನಾಟದಲ್ಲಿ ಬದುಕುವ ಮನುಷ್ಯ ನಂಬಿಕೆಯಿಂದ ತನ್ನ ಬಾಳಿನ ಬಂಡಿಯನ್ನು ಎಳೆದು ಸಾಗಬೇಕು. ನಂಬಿಕೆ ಎಂಬುದು ಆಂತರ್ಯದ ಮನೋಭಾವ. ನಂಬಿಕೆಗೆ ಮತ್ತೊಂದು ಅರ್ಥವೇ ವಿಶ್ವಾಸ, ಭರವಸೆ. ವಿಶ್ವಾಸ ಗಳಿಸುವುದು ಮುಖ್ಯವಲ್ಲ. ಗಳಿಸಿರುವ ವಿಶ್ವಾಸವನ್ನು ಸಾಯೋತನಕ ಉಳಿಸಿಕೊಂಡು ಹೋಗುವುದು ಮುಖ್ಯ. ವಿಶ್ವಾಸ ಗಳಿಕೆಗೆ ಕ್ಷಣ ಸಾಕು. ಅದರ ಉಳಿಕೆಗೆ ಜೀವಮಾನವೇ ಬೇಕು. ನಂಬಿಕೆಯು ವ್ಯಕ್ತಿಯ ವ್ಯಕ್ತಿತ್ವಕ್ಕೊಂದು ಶೋಭೆ ತರುವ ಅಂಶವಾಗಿದೆ. ನಂಬಿಕೆಯಿಂದ ಬದುಕಬೇಕು. ಏಕೆಂದರೆ ನಂಬಿಕೆಯೇ ಜೀವನದ ತಳಹದಿ. ತನ್ನ ಮೇಲೆ ತನಗೆ ನಂಬಿಕೆ ಇರಬೇಕು. ನಾನು ಈ ಕೆಲಸವನ್ನು ಮಾಡುತ್ತೇನೆ. ನನಗೆ ಇದು ಸಾಧ್ಯವಿದೆ ಎಂಬ ಅಚಲ ನಂಬಿಕೆ ಇದ್ದರೆ ಅರ್ಧ ಕೆಲಸ ಆದಂತೆಯೇ ಸರಿ.

ಏನನ್ನಾದರೂ ನಂಬುವುದಾದರೆ ನಂಬಿಕೆಯನ್ನು ನಂಬು. ಈ ಜಗತ್ತು ನಂಬಿಕೆಯ ಮೇಲೆ ನಿಂತಿದೆ. ಹಾಗಾಗಿ ನಂಬಿಕೆ ಎಂದರೆ ಒಬ್ಬರ ಮೇಲೆ ಮತ್ತೊಬ್ಬರಿಗಿರುವ ವಿಶ್ವಾಸ. ಬೇರೆಯವರ ಮೇಲೆ ನಮಗಿರುವ ನಂಬಿಕೆಯಂತೆ ನಮ್ಮ ಮೇಲೆ ನಮಗಿರುವ ನಂಬಿಕೆ ದೊಡ್ಡದು. ಕಾಲ ಕಳೆದಂತೆಲ್ಲ ಮನುಷ್ಯನು ತನ್ನ ನಂಬಿಕೆಯನ್ನು ಕಳೆದುಕೊಳ್ಳುತ್ತಿದ್ದಾನೆ. ಈಗಿದ್ದ ಮಾತು ಇನ್ನು ಸ್ವಲ್ಪ ಹೊತ್ತಿನಲ್ಲಿ ಇರುವುದಿಲ್ಲ. ವಚನ ಭ್ರಷ್ಟತೆ, ಮಾತು ತಪ್ಪುವುದು ಇವೆಲ್ಲವೂ ಸಾಮಾನ್ಯ ಸಂಗತಿಗಳಾಗಿವೆ. ಹೀಗೆ ಮಾಡಿದರೆ ನಂಬಿಕೆಯ ಕತ್ತು ಹಿಸುಕಿದಂತಾಗುತ್ತದೆ. ಆದರೂ ಕೆಲವರು ನಂಬಿದವರಿಗೆ ಪ್ರಾಣ ಕೊಡಲು ಸಿದ್ಧವಾಗಿರುತ್ತಾರೆ. ಅದೇ ನಿಜವಾದ ನಂಬಿಕೆ, ಆವರೇ ನಿಜವಾದ ನಂಬಿಕಸ್ಥರು. ಈ ನೆಲದ ಬಯಲಲ್ಲಿ ದೇವರು ಮಾತ್ರ ವಾಸವಾಗಿಲ್ಲ ದೇವತಾ ಮನುಷ್ಯರು ವಾಸವಾಗಿದ್ದಾರೆ. ಅದೇ ರೀತಿ ಇದೇ ನೆಲದಲ್ಲಿ ರಾಕ್ಷಸರು ವಾಸವಾಗಿಲ್ಲ ನರಭಕ್ಷಕರೂ ವಾಸವಾಗಿದ್ದಾರೆ. ಅತ್ಯಂತ ಭೀಕರ ಸಮಯ–ಕಷ್ಟವೆಂದು ಪಡೆದ ಹಣಕ್ಕೆ ದ್ರೋಹ ಬಗೆದು ವಿಶ್ವಾಸ ಕಗ್ಗೊಲೆಗೆ ಸುಪಾರಿ ಕೊಟ್ಟಿರುತ್ತಾರೆ. ಇಂತಹ ವ್ಯಕ್ತಿಗಳು ವಿಶ್ವಾಸ ಘಾತುಕರಾಗಿರುತ್ತಾರೆ.

ಹಿಂದಿನ ಕಾಲದಲ್ಲಿ ಕೇವಲ ಮಾತಿನಿಂದಲೇ ಎಷ್ಟೋ ಕೆಲಸ–ಕಾರ್ಯಗಳು ಅಲ್ಲದೆ ಹಣದ ವ್ಯವಹಾರವು ಕೂಡ ನಡೆಯುತ್ತಿದ್ದವು ಎಂದರೆ ಆ ಮಾತಿನ ಮೇಲೆ ಇದ್ದ ನಂಬಿಕೆಯೇ ಕಾರಣ. ನಂಬಿಕೆ ಇಟ್ಟವರು ನಂಬಿಕೆ ಕಳ್ಕೊತ್ತಾರೆ. ಒಂದು ಕಾಲದಲ್ಲಿ ಜನಪ್ರಿಯವಾದ ಗೀತೆಯಾಗಿದ್ದ ಹೇಳಿದ್ದು ಸುಳ್ಳಾಗಬಹುದು ನೋಡಿದ್ದು ಸುಳ್ಳಾಗಬಹುದು ನಿಧಾನಿಸಿ ಯೋಚಿಸಿದಾಗ ನಿಜವು ತಿಳಿವುದು. ಆದರೆ ಏನು ಮಾಡುವುದು ಹೊರಗಿನ ಕಳ್ಳರನ್ನಾದರೂ ಪತ್ತೆ ಮಾಡಬಹುದು, ಒಳಗಿನ ಕಳ್ಳರನ್ನು ಪತ್ತೆ ಮಾಡಲು ಎಂದಿಗೂ ಸಾಧ್ಯವಾಗದೆ ಇರಬಹುದು. ಅವ್ರಕ್ಕಾ ಸ್ವೇಡ ಅನ್ನೋ ಜಾತಿಗೆ ಸೇರಿದವರಾಗಿರುತ್ತಾರೆ. ಪ್ರಕೃತಿಯಲ್ಲಿನ ಪ್ರತಿಯೊಂದು ವಸ್ತುವಿನ ಮೇಲೆ ನಂಬಿಕೆ ಇರಲೇಬೇಕು. ನಂಬಿಕೆಯ ಭಾವದಿಂದ ಉಸಿರಾಡುವುದು ಬಹಳಾನೇ ಕಷ್ಟ, ಅದಕ್ಕಾಗಿಯೇ ಹೇಳುವುದು ಎಲ್ಲರನ್ನ ನಂಬಬೇಕು. ಆದರೆ ನಮ್ಮನ್ನು ನಾವೇ ಕಳೆದುಕೊಳ್ಳುವ ಹಾಗೆ ನಂಬಬಾರದು ಎಂದು. ಜೀವನದಲ್ಲಿ ನಂಬಿಕೆ ಎನ್ನುವುದು ಅತಿ ಮುಖ್ಯವಾದುದು. ಅದನ್ನು ಕಳೆದುಕೊಂಡರೆ ಮತ್ತೆ ಸಂಪಾದಿಸಲು ಮಣ್ಣಿಗೋದರೂ ಸಾಧ್ಯವಿಲ್ಲ.

ನಂಬಿಕೆಯೆಂಬುದು ಒಂದು ಪರಿಣಾಮಕಾರಿಯಾದ ಅಂಶವಾಗಿದೆ. ಅದು ಉತ್ಸಾಹದ ಚಿಲುಮೆಗೆ ದಾರಿದೀಪವಾಗಿದೆ. ನಂಬಿಕೆ ಮತ್ತು ಅನುಮಾನ ಒಂದೇ ಜಾಗದಲ್ಲಿ ಇರಲು ಎಂದಿಗೂ ಸಾಧ್ಯವಿಲ್ಲ. ಅನುಮಾನದೊಂದಿಗೆ ಬದುಕದೆ ನಂಬಿಕೆಯ ಮೇಲೆ ವಿಶ್ವಾಸವಿಟ್ಟು ಮುಂದೆ ಸಾಗಿದರೆ ಆಗ ತನಗೆ ತಾನೇ ಅನುಮಾನ ಜಾಗ ಖಾಲಿ ಮಾಡುತ್ತದೆ. ನಂಬಿಕೆ ಎನ್ನುವುದು ಯಾವುದೇ ಸಂಬಂಧದ ಅಡಿಪಾಯ. ಈ ಅಡಿಪಾಯ ಗಟ್ಟಿಯಿಲ್ಲದಿದ್ದರೆ ಮನಸ್ಸುಗಳು ಮುರಿದು ಬೀಳುತ್ತವೆ. ಅನುಮಾನ ಎಂಬ ಹುಳು ಮನಸ್ಸಿನ ಒಳಗೆ ಸೇರಿದರೆ ಅದು ಕೊರೆಯುತ್ತಲೇ ಮನುಷ್ಯನನ್ನು ಮಾನಸಿಕವಾಗಿ ಅಧಃಪತನಕ್ಕೆ ಎಳೆದೊಯ್ಯುತ್ತದೆ. ಹೆಂಡತಿಯ ಮೇಲೆ ಗಂಡನಿಗೆ, ಗಂಡನ ಮೇಲೆ ಹೆಂಡತಿಗೆ ನಂಬಿಕೆ ಇರಬೇಕು. ಮುಖವಾಡದ ಬದುಕು ಮೂರೇ ದಿನ ಉಳಿಯುವುದು. ಅವಿಶ್ವಾಸದಿಂದ ಬಾಳಬಾರದು. ಪರಿವಾರದಲ್ಲಿ ನಂಬಿಕೆ ಬೆಳೆಸಬೇಕಾಗಿದೆ. ತಂದೆಯ ಬಗ್ಗೆ ಮಗನಿಗೆ, ಮಗನ ಬಗ್ಗೆ ತಂದೆಗೆ ಪೋಷಕರು ಮಕ್ಕಳು, ಗಂಡ–ಹೆಂಡತಿ, ಸಹೋದರ–ಸಹೋದರಿ, ಗುರು–ಶಿಷ್ಯರು, ಅತೀತ ಶಕ್ತಿಯನ್ನು ಒಳಗೊಂಡಿರುವ ನಿಸರ್ಗ–ಪ್ರಕೃತಿ ಹೀಗೆ ಸಾಗುವ ಸಂಬಂಧಗಳ ಅನುಬಂಧಗಳು ನಿಂತಿರುವುದೇ ನಂಬಿಕೆಯ ಮೇಲೆ.

ನಂಬಿ ಕೆಟ್ಟವರಿಲ್ಲವೋ ರಂಗಯ್ಯನಾ ಎಂದು ದಾಸವಾಣಿಯೇ ಹೇಳುತ್ತದೆ. ಹಾಗೆ ಹೇಳಿದ ಮಾತ್ರಕ್ಕೆ ಎಲ್ಲರನ್ನೂ, ಎಲ್ಲವನ್ನೂ ನಂಬಬೇಕು ಎಂದಲ್ಲ. ಅದಕ್ಕೂ ಒಂದು ಮಿತಿ ಇರುತ್ತದೆ. ಯಾರನ್ನು ಯಾವ ಸಮಯದಲ್ಲಿ ಎಷ್ಟು ನಂಬಬೇಕು ಎಂಬ ನಿರ್ಧಾರ ತೆಗೆದುಕೊಳ್ಳುವುದು ಸ್ವಲ್ಪ ಕಷ್ಟವೇ, ತಂದೆ ತಾಯಿಗಳಿಗೆ ಮಕ್ಕಳು ಚೆನ್ನಾಗಿ ಓದುತ್ತಾರೆ, ವಿದ್ಯಾರ್ಥಿಗಳಿಗೆ ಗುರುಗಳು ಏನೇ ಹೇಳಿಕೊಟ್ಟರೂ ಸರಿ ಇರುತ್ತದೆ ಎಂಬ ನಂಬಿಕೆ. ಆಸ್ತಿಕರಿಗೆ ದೇವರ ಬಗೆಗಿನ ನಂಬಿಕೆ, ನಾಸ್ತಿಕರಿಗೆ ಎಲ್ಲವೂ ಮಿಥ್ಯ ಎಂಬ ನಂಬಿಕೆ, ವೃದ್ಧರಿಗೆ ತಮ್ಮ ಮಕ್ಕಳು ಇಳಿ ವಯಸ್ಸಲ್ಲಿ ನಮ್ಮನ್ನು ನೋಡಿಕೊಳ್ಳುತ್ತಾರೆ ಎಂಬ ನಂಬಿಕೆ, ಪ್ರೀತಿಸುವವರು ತಮ್ಮ ಸಂಗಾತಿಯ ಬಗ್ಗೆ ಪ್ರಬಲವಾದ ನಂಬಿಕೆ ಇಟ್ಟು ಸಾಗಿದರೆ ನಂಬಿಕೆ ಚಿರಕಾಲ ಜೀವಿಸುವುದರಲ್ಲಿ ಯಾವುದೇ ಸಂಶಯವಿಲ್ಲ..

ನಂಬಿಕೆಯೆಂಬುದು ಒಂದು ಪರಿಣಾಮಕಾರಿಯಾದ ಅಂಶವಾಗಿದೆ. ಧರ್ಮೋ ರಕ್ಷತಿ ರಕ್ಷಿತಃ ಎಂಬ ಮಾತಿನಂತೆ ನಾವು ನಂಬಿಕೆಯನ್ನು ಕಾಪಾಡಿಕೊಂಡರೆ ನಂಬಿಕೆ ನಮ್ಮನ್ನು ಕಾಯುತ್ತದೆ ಹಾಗೂ ಬೆಳೆಸುತ್ತವೆ. ಒಬ್ಬ ಒಳ್ಳೆಯ ಸ್ನೇಹಿತ ಆಗ್ಬೇಕಾದ್ರೆ ಹಣ ಬೇಕಾಗಿಲ್ಲ, ಆಸ್ತಿ ಬೇಕಾಗಿಲ್ಲ, ಸೌಂದರ್ಯ ಬೇಕಾಗಿಲ್ಲ. ನಂಬಿಕೆ, ವಿಶ್ವಾಸ, ಪ್ರಾಮಾಣಿಕತೆ ಎಂಬ ಮೂರು ತ್ರಿರತ್ನಗಳಿದ್ದರೆ ಸಾಕು. ನಂಬಿಕೆಯೆಂಬ ಗಾಜು ಒಡೆದು ಹೋದರೆ ಮತ್ತೆ ಅದನ್ನು ಜೋಡಿಸಲು ಸಾಧ್ಯವಿಲ್ಲ. ತೊಂದರೆಗಳಿಗೆ ಪ್ರಮುಖವಾಗಿ ಎರಡು ಕಾರಣ. ಒಂದು ಕೆಟ್ಟವರ ಮೇಲೆ ಬಲವಾದ ನಂಬಿಕೆ ಇಡುವುದು, ಇನ್ನೊಂದು ಒಳ್ಳೆಯವರ ಮೇಲೆ ಸಂಶಯ ಪಡುವುದು. ದೇಹದ ಮೇಲೆ ಬೀಳುವ ಪೆಟ್ಟಿಗಿಂತ ನಂಬಿಕೆಯ ಮೇಲೆ ಬೀಳುವ ಪೆಟ್ಟು ಹೆಚ್ಚು ನೋವು ಕೊಡುತ್ತದೆ. ಮರಣದವರೆಗೆ ಉತ್ತರ ಸಿಗದ ಏಕೈಕ ಪ್ರಶ್ನೆ ಎಂದರೆ ಯಾರನ್ನು ನಂಬುವುದು? ಪ್ರಪಂಚದಲ್ಲಿ ಅತೀ ದುಬಾರಿ ವಸ್ತು ಅಂದರೆ ನಂಬಿಕೆ. ಅದನ್ನು ಗಳಿಸಲು ಎಷ್ಟೋ ವರ್ಷಗಳೇ ಬೇಕು. ಆದರೆ ಅದನ್ನು ನಾಶಗೊಳಿಸಲು ಕೆಲವೇ ಕ್ಷಣ ಸಾಕು. ನಂಬಿಕೆಗೆ ವಿರುದ್ಧವಾದುದು ನಂಬಿಕೆ ದ್ರೋಹ, ವಿಶ್ವಾಸಘಾತುಕತನ, ಅಂದರೆ ದ್ರೋಹವು ಒಂದು ಪ್ರಕಲಿತ ಒಪ್ಪಂದ. ನಂಬಿಕೆ ಅಥವಾ ವಿಶ್ವಾಸವನ್ನು ಉಲ್ಲಂಘಿಸುವುದು ವ್ಯಕ್ತಿಗಳ ನಡುವಿನ ಸಂಬಂಧದೊಳಗೆ ನೈತಿಕ ಮತ್ತು ಮಾನಸಿಕ ಸಂಘರ್ಷವನ್ನು ಉಂಟುಮಾಡುತ್ತದೆ. ಹಲವು ವೇಳೆ ದ್ರೋಹವು ಒಂದು ವೈರಿಯ ಗುಂಪನ್ನು ಬೆಂಬಲಿಸುವ ಕ್ರಿಯೆಯಾಗಿರುತ್ತದೆ. ಇತರರಿಗೆ ದ್ರೋಹ ಮಾಡುವವನನ್ನು ದ್ರೋಹಿ ಅಥವಾ ವಿಶ್ವಾಸಘಾತಕ ಎಂದು ಕರೆಯುತ್ತಾರೆ. ಹಾಗೆ ನಂಬಿಕೆಗೆ ದ್ರೋಹ ಬಗೆಯದೆ ಮಾನವ ಕುಲದ ಮನುಷ್ಯರು ನಂಬಿಕೆಯಿಂದ ಬದುಕಿದರೆ ಸುಂದರ ಜಗತ್ತನ್ನು ಕಟ್ಟಬಹುದು. ಅಂತೆಯೇ ನಂಬಿಕೆಯೆಂಬ ಪ್ರತಿಯುಸಿರಿನ ಸಿರಿಸಿಂಚನದ ನವಮಂಟಪದೊಳು ನಳನಳಿಸುತ್ತಿರುವ ಓ ದೀನ ಬಂಧು, ನನ್ನೊಳಗಿನ ಸಿರಿಸಂಪದದ ಮಹಿಮೆಯೇ ನೀನೆನಗೆ ಕಲಿಸು. ಪರರೊಂದಿಗೆ ನಂಬಿಕೆಯಿಂದ ಬದುಕುವುದ ಮಣ್ಣ ಗೆದ್ದಲಹುಳು ತಿಂದು ಮುಗಿಸುವವರೆಗೂ ಮನುಜನಲ್ಲಿ ಮನುಜನಿಗೆ ನಂಬಿಕೆಯು ಮುಖ್ಯ. ಅದರಿಂದಲಾಗುವುದು ಜೀವನವು ಸೌಖ್ಯ, ಕತ್ತಲೆಯ ಕಂಡವಗೆ ಭರವಸೆ ಬೇಕು, ನಂಬಿಕೆಯ ಬೆಳಕಿನ ಆರತಿಯೇ ಸಾಕು!.

ನಂಬಿಕೆ

ನಂಬಿಕೆಯೇ ವಿಶ್ವಾಸ–ಆತ್ಮವಿಶ್ವಾಸದ ಮೆಲುಕು,
ನಂಬಿಕೆಯೇ ಜೀವಿಸುವ ಜೀವನದ ಜೀವಂತ ಬದುಕು,
ನಂಬಿಕೆಯೇ ತಿಳಿಮುಗಿಲ ಅಂಚಲ್ಲಿ ಭರವಸೆಯ ಬೆಳಕು,
ನಂಬಿಕೆ ಇಲ್ಲದಿರೆ ವಿರಸ–ವೈಮನಸ್ಸು–ಮೂಡುವುದು ಒಡಕು,
ನಂಬಿಕೆಯಿಂದಲೇ ಅಗಾಧ ಕಾರ್ಯಗಳ ಸಿದ್ದಿಗಾಗಿ ಅದುವೇ ಜಗಕೆ
ಬೇಕು, ನಂಬಿಕೆ ಇಲ್ಲದ ಮನಸ್ಸು ಎಂದಿಗೂ ಕೊಳಕು,
ನಂಬಿಕೆ ತೊರೆದರೆ ಅಳುಕು–ನಂಬಿಕೆಯನ್ನೇ ಸಂಶಯಪಡುತಾ
ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸಲು
ಎಲ್ಲರ ಜೀವನವ ಮುಕ್ಕುವುದು ಅಪನಂಬಿಕೆಯ ಉಳುಕು.
ನಂಬಿಕೆ ಬೇಕು ಅದಕು–ಇದಕು– ಎದಕೂ–ನಂಬಿಕೆಯೇ
ಬಾಳಿನ ಜೀವಾಳದ ಬದುಕು ಎಂದಳು ನನ್ನವ್ವ ಸಾಕವ್ವ

ಆಹಾರ ಮೇಳದ ಮಳಿಗೆಗಳ ಬಾಡಿಗೆ ಕಡಿಮೆ ಮಾಡಲು ಆಗ್ರಹ

ಸಸ್ಯಾಹಾರಕ್ಕೆ 25,000, ಮಾಂಸಾಹಾರಕ್ಕೆ 30,000 ರೂ. ನಿಗದಿಗೆ ಒತ್ತಾಯ



ಮೈಸೂರಿನ ಜಲ ದರ್ಶಿನಿಯಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ದಸರಾ ಆಹಾರ ಮೇಳ ತಿಂಡಿ ತಿನಿಸುಗಳ ಮಾರಾಟಗಾರರ ಸಂಘದ ಅಧ್ಯಕ್ಷ ನಾಗರಾಜು ಎಸ್.ಸಿದ್ದರಾಮನಹುಂಡಿ ಮಾತನಾಡಿದರು.

ಮೈಸೂರು,ಸೆ.9(ಜಿಎ)–ಪ್ರಸಕ್ತ ಸಾಲಿನ ದಸರಾ ಮಹೋತ್ಸವದಲ್ಲಿ ಆಹಾರ ಮೇಳದ ಮಳಿಗೆಗಳ ಬಾಡಿಗೆ ದರ ಕಡಿಮೆ ಮಾಡುವಂತೆ ಮೈಸೂರು ದಸರಾ ಆಹಾರ ಮೇಳದ ತಿಂಡಿ–ತಿನಿಸುಗಳ ಮಾರಾಟಗಾರರ ಸಂಘ, ಮುಖ್ಯಮಂತ್ರಿಗಳು ಹಾಗೂ ಜಿಲ್ಲಾಡಳಿತಕ್ಕೆ ಮನವಿ ಮಾಡಿದೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ನಾಗರಾಜು.ಎಸ್.ಸಿದ್ದರಾಮನಹುಂಡಿ ಮಾತನಾಡಿ, ಕಳೆದ ಬಾರಿ ರಾಜ್ಯದಲ್ಲಿ ಬರವಿದ್ದ ಹಿನ್ನೆಲೆಯಲ್ಲಿ ಆಹಾರ ಮಳಿಗೆಗಳ ಬಾಡಿಗೆಯನ್ನು ಸಸ್ಯಹಾರಿ ವಿಭಾಗದಲ್ಲಿ 59,000 ರೂ., ಮಾಂಸಾಹಾರಿ ವಿಭಾಗದ ಮಳಿಗೆಗೆ 88,500 ರೂ. ಜಿಎಸ್‌ಟಿ ಸೇರಿದಂತೆ ನಿಗದಿಪಡಿಸಲಾಗಿತ್ತು. ಪರಿಣಾಮ ವ್ಯಾಪಾರಸ್ಥರು ನಷ್ಟ ಅನುಭವಿಸಬೇಕಾಯಿತು. ಹಾಗಾಗಿ ಈ ಬಾರಿ ಸಸ್ಯಾಹಾರಕ್ಕೆ 25,000 ರೂ., ಮಾಂಸಾಹಾರಕ್ಕೆ 30,000 ರೂ. ಗಳನ್ನು ಜಿಎಸ್‌ಟಿ ರಹಿತವಾಗಿ ನಿಗದಿಪಡಿಸುವಂತೆ ಒತ್ತಾಯಿಸಿದರು.

2019ರಲ್ಲಿ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ವಿ.ಸೋಮಣ್ಣ, ಕಾರ್ಯಕರ್ತರು ಮತ್ತು ಆಹಾರ ಮೇಳದ ಸಮಿತಿ ಸದಸ್ಯರ ಸಲಹೆ ಮೇರೆಗೆ ಸಸ್ಯಾಹಾರಕ್ಕೆ 25,000 ರೂ., ಮಾಂಸಾಹಾರಕ್ಕೆ 30,000 ರೂ. ನಿಗದಿಪಡಿಸಿದರು. ತದನಂತರ 2023ರಲ್ಲಿ ಸಸ್ಯಾಹಾರಿ 59,000 ರೂ., ಮಾಂಸಹಾರಿ ಮಳಿಗೆಗೆ 88,500 ರೂ., ನಿಗದಿಪಡಿಸಿದರು. ಈ ಬಗ್ಗೆ ಮುಖ್ಯಮಂತ್ರಿಗಳು ಮತ್ತು ಜಿಲ್ಲಾ ಉಸ್ತುವಾರಿ ಸಚಿವರಿಗೆ ಮನವಿ ನೀಡಿದರೂ ಯಾವುದೇ ಪ್ರಯೋಜನವಾಗಲಿಲ್ಲ. ಇದರಿಂದ ವ್ಯಾಪಾರಸ್ಥರಿಗೆ ಭಾರಿ ನಷ್ಟವಾಯಿತು ಎಂದರು.

40 ಕೋಟಿ ವೆಚ್ಚದಲ್ಲಿ ಅದ್ದೂರಿ ದಸರಾ ಮಾಡಲು ಮುಂದಾಗಿರುವ ರಾಜ್ಯ ಸರ್ಕಾರವು, ಅತ್ಯಂತ ಹೆಚ್ಚು ಜನರ ಆಕರ್ಷಿಸುವ ಆಹಾರ ಮೇಳದಲ್ಲಿ ಸಸ್ಯಾಹಾರಕ್ಕೆ 25,000 ರೂ., ಮಾಂಸಾಹಾರಕ್ಕೆ 30,000 ರೂ.ಗಳನ್ನು ಜಿಎಸ್‌ಟಿ ರಹಿತವಾಗಿ ಮಳಿಗೆಗಳಿಗೆ ನಿಗದಿಪಡಿಸುವ ಮೂಲಕ ವ್ಯಾಪಾರಸ್ಥರಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ ಮಾಡಿದರು.

ಈ ಬಾರಿ 175 ಮಳಿಗೆಗಳನ್ನು ಒಂದೇ ಕಡೆ ನೀಡಲು ಜಿಲ್ಲಾಡಳಿತ ತೀರ್ಮಾನಿಸಿದ್ದು, ಆದರೆ ಪಾರ್ಕಿಂಗ್ ಸಮಸ್ಯೆ ಉದ್ಭವವಾಗಲಿದೆ. ಆದ್ದರಿಂದ ಈ ಬಾರಿ ಜಂಬೋ ಸರ್ಕಸ್ ನಡೆಯದೇ ಇರುವುದರಿಂದ ಆಹಾರ ಮೇಳವನ್ನು ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ 125 ಮಳಿಗೆ ಮತ್ತು ಇಟ್ಟಿಗೆಗೂಡಿನ ಕಾರಂಜಿಕೆರೆ ಪಕ್ಕದ ಮೈದಾನದಲ್ಲಿ 50 ಮಳಿಗೆಗಳನ್ನು ನಿರ್ಮಿಸಿ ವ್ಯಾಪಾರಿಗಳು, ಪ್ರವಾಸಿಗರಿಗೆ ಅನುಕೂಲ ಮಾಡಿಕೊಡುವಂತೆ ಒತ್ತಾಯಿಸಿದರು.

ಇಟ್ಟಿಗೆಗೂಡಿನ ಕಾರಂಜಿ ಕೆರೆ ಪಕ್ಕದ ಮೈದಾನವು ಅರಮನೆಯ ಸುಪರ್ದಿಯಲ್ಲಿ ಇರುವುದರಿಂದ ಇದನ್ನು ಆಹಾರ ಮೇಳಕ್ಕೆ ಬಳಸಿಕೊಳ್ಳಲು ಅನುಮತಿ ನೀಡುವಂತೆ ರಾಜವಂಶಸ್ಥರಾದ ಪ್ರಮೋದಾ ದೇವಿ ಒಡೆಯರ್ ಮತ್ತು ಸಂಸದ ಯದುವೀರ್ ಅವರನ್ನು ಭೇಟಿ ಮಾಡಿ ಮನವಿ ಮಾಡಿಕೊಳ್ಳುತ್ತೇವೆ ಎಂದರು.

ಈ ಬಾರಿಯ ದಸರಾ ಮಹೋತ್ಸವ ಅಧಿಕಾರಿಗಳ ದಸರಾ ಆಗಬಾರದು, ಬದಲಾಗಿ ಜನಸಾಮಾನ್ಯರ ದಸರಾ ಆಗಬೇಕಿರುವುದರಿಂದ ದಸರಾ ಉಪಸಮಿತಿಗಳನ್ನು ಮುಂಚಿತವಾಗಿ ನೇಮಕ ಮಾಡಬೇಕು. ಅಧಿಕಾರಿಗಳು ಸಭೆ ನಡೆಸುವಾಗ ಸಂಘದವರಿಗೆ ಆಹ್ವಾನ ನೀಡಿ ಮುಕ್ತವಾಗಿ ಚರ್ಚಿಸಬೇಕು. ಹಾಗೆಯೇ ಮಧ್ಯವರ್ತಿಗಳ ಹಾವಳಿ ತಪ್ಪಿಸಿ, ಹೊರ ಜಿಲ್ಲೆ, ರಾಜ್ಯಗಳ ವ್ಯಾಪಾರಸ್ಥರಿಗೆ ಅವಕಾಶ ನೀಡಬೇಕು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ಕಂಸಾಳೆ ರವಿ, ಉಪಾಧ್ಯಕ್ಷೆ ಶಾಂತಮ್ಮ, ಶಿವಸಿದ್ದು, ಬೀರೇಶ್, ಸಂತೋಷ್ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ಎರಡು ಕೃತಿ ಬಿಡುಗಡೆ

ಮೈಸೂರು, ಸೆ.9(ಎಸ್‌ಪಿಎನ್)– ಲೇಖಕಿ ಎಂ.ಎ.ನೀಲಾಂಬಿಕ ರಚಿಸಿದ ನಾಟಕ 'ಷಷ್ಠಿತ' ಹಾಗೂ ದಿ.ಅಂಕಪ್ಪನವರ 'ಕಲಿರಾಯ ವಚನಗಳು' ಪುಸ್ತಕಗಳು ಸೆ.11ರಂದು ಸಂಜೆ 6 ಗಂಟೆಗೆ ಲೋಕಾರ್ಪಣೆಗೊಳ್ಳಲಿವೆ.

ಉತ್ತರ ಕನ್ನಡ ಶಿರಸಿಯ ಶ್ರೀ ರುದ್ರದೇವರ ಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಅವರು ಸಾನ್ನಿಧ್ಯ ವಹಿಸಲಿದ್ದು, ನಂಜನಗೂಡು ಉಪ ಪೊಲೀಸ್ ವರಿಷ್ಠಾಧಿಕಾರಿ ಎಸ್.ಎಂ.ಮಹೇಶ್ ಪುಸ್ತಕಗಳನ್ನು ಬಿಡುಗಡೆ ಮಾಡಲಿದ್ದಾರೆ. ಜೆಎಸ್‌ಎಸ್ ಮಹಾವಿದ್ಯಾಪೀಠ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ.ಮಲ್ಲಿಕಾರ್ಜುನ ಮೊರಬದ ಅವರು ಕೃತಿ ಕುರಿತು ಮಾತನಾಡಲಿದ್ದಾರೆ. ಲೇಖಕಿ ಎಂ.ಎ. ನೀಲಾಂಬಿಕಾ(ರಾಜೇಂದ್ರ ಶಿಶು), ಶ.ಸಾ.ಪ ಮೈಸೂರು ನಗರ ಘಟಕದ ಅಧ್ಯಕ್ಷ ಮ.ಗು. ಸದಾನಂದಯ್ಯ, ಕಾರ್ಯದರ್ಶಿ ಟಿ.ಎಸ್. ಕುಮಾರಸ್ವಾಮಿ ಉಪಸ್ಥಿತರಿರುತ್ತಾರೆ.

ಇಂದು ಕೆ.ಆರ್.ಕ್ಷೇತ್ರ ಪ್ರಗತಿ ಪರಿಶೀಲನಾ ಸಭೆ

ಮೈಸೂರು, ಸೆ.9(ಎಸ್‌ಪಿಎನ್)– ಮೈಸೂರು ನಗರಪಾಲಿಕೆ ವ್ಯಾಪ್ತಿಯ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಪ್ರಗತಿ ಪರಿಶೀಲನಾ ಸಭೆ ಶಾಸಕ ಟಿ.ಎಸ್. ಶ್ರೀವತ್ಸ ಅಧ್ಯಕ್ಷತೆಯಲ್ಲಿ ಸೆ.10 ರಂದು ಸಂಜೆ 4 ಗಂಟೆಗೆ ಪಾಲಿಕೆಯ ಶ್ರೀ ಜಯಚಾಮರಾಜ ಒಡೆಯರ್ ಸಭಾಂಗಣದಲ್ಲಿ ನಡೆಯಲಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com


ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರಾದ
ಎಂ ಪ್ರದೀಪ್ ಕುಮಾರ್ ರವರಿಗೆ
ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು
ದಿನಾಂಕ : 10-09-2024
ಶುಭಕೋರುವವರು :-
ಸುಣ್ಣದಕೇರಿ, ಸ್ನೇಹ ಬಳಗ


ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರಾದ
ಎಂ ಪ್ರದೀಪ್ ಕುಮಾರ್ ರವರಿಗೆ
ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು
ದಿನಾಂಕ : 10-09-2024
ಶುಭಕೋರುವವರು :-
ವಿವೇಕಾನಂದ ನಗರ ಮತ್ತು ಶ್ರೀರಾಂಪುರ
ಗೆಳೆಯರ ಬಳಗ


ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರಾದ
ಎಂ ಪ್ರದೀಪ್ ಕುಮಾರ್ ರವರಿಗೆ
ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು
ದಿನಾಂಕ : 10-09-2024
ಶುಭಕೋರುವವರು :-
ಕನಕಗಿರಿ, ಸ್ನೇಹ ಬಳಗ


ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷರಾದ
ಎಂ ಪ್ರದೀಪ್ ಕುಮಾರ್ ರವರಿಗೆ
ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು
ದಿನಾಂಕ : 10-09-2024
ಶುಭಕೋರುವವರು :-
ಕೆ.ಆರ್. ನಗರ ತಾಲ್ಲೂಕಿನ
ಸಮಾಜದ ಮುಖಂಡರು

ಮೈಸೂರು ಮಿತ್ರ

ಮಂಗಳವಾರ 10 ಸೆಪ್ಟೆಂಬರ್ 2024

ರಾಷ್ಟ್ರೀಯ ಈಜು ಸ್ಪರ್ಧೆ: ಹಾರಿಕಾಗೆ 3 ಪದಕ



ನವದೆಹಲಿಯಲ್ಲಿ ನಡೆದ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಪದಕ ಪಡೆದ ಹಾರಿಕಾ.

ಮೈಸೂರು,ಸೆ.9– ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಮೈಸೂರಿನ ಜಿಎಸ್‌ಎಯ ಈಜುಪಟು ಹಾರಿಕಾ 1 ಬೆಳ್ಳಿ ಹಾಗೂ 2 ಕಂಚಿನ ಪದಕ ಪಡೆದು, ಸ್ಕೂಲ್ ಗೇಮ್ಸ್ ಆಫ್ ಇಂಡಿಯಾಗೆ ಆಯ್ಕೆಯಾಗಿದ್ದಾಳೆ.

ನವದೆಹಲಿಯಲ್ಲಿ ನಡೆದ ಕೇಂದ್ರೀಯ ವಿದ್ಯಾಲಯ ಸಂಘಟನೆಯ 53ನೇ ರಾಷ್ಟ್ರೀಯ ಕ್ರೀಡಾಕೂಟದ ಈಜು ಸ್ಪರ್ಧೆಯಲ್ಲಿ ಮೈಸೂರಿನ ಪಿಎಂ ಶ್ರೀ ಕೇಂದ್ರೀಯ ವಿದ್ಯಾಲಯ ಶಾಲೆಯ ಹಾರಿಕಾ 3 ಪದಕ ಪಡೆದಿದ್ದಾರೆ.

ಈ ಬಾಲಕಿಯು ಮೈಸೂರಿನ ಜೆ.ಪಿ. ನಗರದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಈಜುಕೊಳದ ಗ್ಲೋಬಲ್ ಸ್ಪೋರ್ಟ್ಸ್ ಅಸೋಸಿಯೇಷನ್‌ನಲ್ಲಿ ತರಬೇತಿ ಪಡೆಯುತ್ತಿದ್ದು, 14 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಸ್ಪರ್ಧಿಸಿದ್ದರು.

ಇವರು 200 ಮೀ. ಬ್ರೆಸ್ಟ್ ಸ್ಟ್ರೋಕ್‌ನಲ್ಲಿ ಬೆಳ್ಳಿ ಪದಕ, 100 ಮೀ. ಬ್ರೆಸ್ಟ್ ಸ್ಟ್ರೋಕ್‌ನಲ್ಲಿ ಕಂಚು ಹಾಗೂ 4 X100 ಮೆಡ್ಲೆ ರಿಲೇಯಲ್ಲಿ ಕಂಚಿನ ಪದಕ ಪಡೆದು, ಉತ್ತಮ ಪ್ರದರ್ಶನ ನೀಡಿ, ಸ್ಕೂಲ್ ಗೇಮ್ಸ್ ಫೆಡರೇಷನ್ ಆಫ್ ಇಂಡಿಯಾ (ಎಸ್‌ಜಿಎಫ್‌ಐ)ಗೆ ಆಯ್ಕೆಯಾಗಿದ್ದಾರೆ. ಬಾಲಕಿಯ ಸಾಧನೆ ಸಂತಸ ತಂದಿದ್ದು, ಮುಂದಿನ ಸ್ಪರ್ಧೆಯಲ್ಲಿ ಜಯಶಾಲಿಯಾಗಲಿ ಎಂದು ತರಬೇತುದಾರ ಪವನ್ ಕುಮಾರ್ ಹಾಗೂ ತಂಡ ಹಾರೈಸಿದೆ.

ಸೆ.12ರಂದು ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ

ಮೈಸೂರು, ಸೆ.9–ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಸೆ.12ರಂದು ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ದೂ.0821–04259259 ಸಂಪರ್ಕಿಸಬಹುದು.

ಒಂದನೇ ಪುಟದಿಂದ

ಸಿಸಿ ಕ್ಯಾಮರಾ, ಡಿವಿಆರ್ ನಾಪತ್ತೆ!

ನಾಶಪಡಿಸಿರುವ ಅನುಮಾನ ವ್ಯಕ್ತವಾಗಿದೆ. ಮೈಸೂರಿನ ಕುವೆಂಪುನಗರದ ಆದಿ ಚುಂಚನಗಿರಿ ರಸ್ತೆಯ ಅಪೋಲೋ ಬಿಜಿಎಸ್ ಆಸ್ಪತ್ರೆ ಸಮೀಪ ಮುಡಾ ಅಧ್ಯಕ್ಷರು, ಆಯುಕ್ತರ ನಿವಾಸಗಳಿವೆ. ಸಾಮಾನ್ಯವಾಗಿ ಮೈಸೂರಿನವರೇ ಮುಡಾ ಅಧ್ಯಕ್ಷರಾಗುತ್ತಿದ್ದರಿಂದ ಅವರು ತಮಗೆ ಕಲ್ಪಿಸಿರುವ ಅಧಿಕೃತ ನಿವಾಸದಲ್ಲಿ ವಾಸಿಸುತ್ತಿರಲಿಲ್ಲ. ಕೇವಲ ವಿಶ್ರಾಂತಿ, ಪ್ರಮುಖ ಗುಪ್ತ ಸಮಾಲೋಚನೆಗೆ ಮಾತ್ರವೇ ಬಳಸುತ್ತಿದ್ದರು.

ಆದರೆ ಆಯುಕ್ತರಾದವರು ಸಾಮಾನ್ಯವಾಗಿ ಬೇರೆಡೆಯಿಂದ ವರ್ಗವಾಗಿ ಬರುವುದರಿಂದ ತಮಗೆ ಕಲ್ಪಿಸಲಾಗಿರುವ ಈ ನಿವಾಸದಲ್ಲಿ ವಾಸಿಸುವುದು ವಾಡಿಕೆ. ಕೆಲಸದ ಅವಧಿಯಲ್ಲಿ ವಿಲೇವಾರಿ ಆಗದ ಕಡತಗಳನ್ನು ಸಿಬ್ಬಂದಿ ಮೂಲಕ ತಮ್ಮ ನಿವಾಸಕ್ಕೆ ತರಿಸಿಕೊಂಡು ಪರಿಶೀಲಿಸಿ, ವಿಲೇ ಮಾಡುತ್ತಿದ್ದುದು ಸರ್ವೇ ಸಾಮಾನ್ಯ.

2020ರಿಂದೀಚೆಗೆ ಪ್ರಾಧಿಕಾರದ ಆಯುಕ್ತರಾಗಿ ಅಧಿಕಾರ ನಡೆಸಿದ ಡಾ. ಡಿ.ಬಿ. ನಟೇಶ್ ಮತ್ತು ಜಿ.ಟಿ. ದಿನೇಶ್‌ಕುಮಾರ್ ಅವಧಿಯಲ್ಲಿ ಬಹುತೇಕ ಕಡತಗಳು ಕಚೇರಿಯಲ್ಲಿ ವಿಲೇವಾರಿ ಆಗುವ ಬದಲು, ತಮ್ಮ ಆಪ್ತರ ವ್ಯೂಹ (ಸಿಂಡಿಕೇಟ್) ದೊಂದಿಗೆ ಆಯುಕ್ತರ ನಿವಾಸದಲ್ಲೇ ನಿರ್ವಹಣೆ ಆಗುತ್ತಿದ್ದವಂತೆ. ಹೀಗೆ ರಾತ್ರಿಯಿಡೀ ಶೇ. 50:50ರ ಅನುಪಾತದಡಿ ನಿವೇಶನಗಳನ್ನು ಮಂಜೂರು ಮಾಡಿ ಅಧಿಕೃತ ಜ್ಞಾಪನ ಪತ್ರವನ್ನು ಇಲ್ಲಿಂದಲೇ ಹೊರಡಿಸುತ್ತಿದ್ದರು ಎಂದು ಹೇಳಲಾಗುತ್ತಿದೆ. ಜಿ.ಟಿ.ದಿನೇಶ್‌ಕುಮಾರ್, ಮನೆಯಲ್ಲೇ ಬಹುತೇಕ ಕಡತ ವಿಲೇವಾರಿ, ಜ್ಞಾಪನಾ ಪತ್ರ ಸಿದ್ಧಪಡಿಸಿ ವಿವಿಧ ಅಳತೆಯ ನಿವೇಶನಗಳನ್ನು ಪರಭಾರೆ ಮಾಡಿದ್ದಾರೆ ಎಂಬ ಮಾತು ಮುಡಾ ಅಧಿಕಾರಿ ವಲಯದಲ್ಲೇ ವ್ಯಾಪಕವಾಗಿ ಕೇಳಿಬರುತ್ತಿದೆ. ಪ್ರತೀದಿನ ರಾತ್ರಿ ಮಧ್ಯವರ್ತಿಗಳು, ರಿಯಲ್ ಎಸ್ಟೇಟ್ ಉದ್ಯಮಿಗಳು, ಆಪ್ತರು ಆಯುಕ್ತರ ನಿವಾಸದಲ್ಲೇ ಕುಳಿತು ಯೋಜಿತ ಪ್ರಕ್ರಿಯೆ ನಡೆಸುತ್ತಿದ್ದರು. ಆದರೆ, ಜನರಲ್ಲಿ ಯಾವ ಅನುಮಾನ ಬಾರದಿರಲಿ ಎಂದು ಅವರ ವಾಹನಗಳನ್ನು ಅನತಿ ದೂರದಲ್ಲಿ, ಅಡ್ಡ ರಸ್ತೆಗಳಲ್ಲಿ ಪಾರ್ಕ್ ಮಾಡುತ್ತಿದ್ದರು ಎಂದು ನೆರೆಹೊರೆಯವರು ಈಗ ಹೇಳುತ್ತಿದ್ದಾರೆ.

ಮನೆಯ ಮುಂಭಾಗ, ಹೊರಗಡೆ, ಹಿಂಭಾಗದಲ್ಲಿ ಹೀಗೆ ಒಟ್ಟು 8 ಸಿಸಿ ಕ್ಯಾಮರಾಗಳನ್ನು ಆಯುಕ್ತರ ಅಧಿಕೃತ ನಿವಾಸಕ್ಕೆ ಅಳವಡಿಸಲಾಗಿತ್ತು. ಅದರ ದೃಶ್ಯಾವಳಿಗಳನ್ನು ಶೇಖರಿಸಿಡಲು ಡಿಜಿಟಲ್ ವಿಡಿಯೋ ರೆಕಾರ್ಡರ್ (ಡಿವಿಆರ್) ಸಿಸ್ಟಂ ಸಹ ಇತ್ತು. ಮೂರು ತಿಂಗಳ ಕಾಲ ಸ್ಟೋರ್ ಮಾಡುವ ಸಾಮರ್ಥ್ಯವಿದ್ದ ಉಪಕರಣವದು.

ಶೇ. 50:50ರ ಅನುಪಾತ, ಪ್ರೋತ್ಸಾಹದಾಯಕ ಹಾಗೂ ಬದಲಿ ನಿವೇಶನಗಳ ಮಂಜೂರಾತಿ ಪ್ರಕ್ರಿಯೆ ಜೋರಾಗಿ ನಡೆಯುವಾಗ ಸಾಕಷ್ಟು ಮಂದಿ ಈ ಮನೆಗೆ ಬಂದು ಹೋಗುತ್ತಿದ್ದರು. ತಡರಾತ್ರಿವರೆಗೂ ಜನ, ವಾಹನಗಳ ಚಲನ–ವಲನವಿತ್ತು. ಯಾವಾಗ ಹಗರಣ ಬಯಲಾಯಿತೋ ಆಗ ಸಾಕ್ಷ್ಯಗಳಂತಿದ್ದ ಮನೆಯಲ್ಲಿದ್ದ ಸಿಸಿ ಕ್ಯಾಮರಾ, ಡಿವಿಆರ್ ಉಪಕರಣವನ್ನು ತೆರವು ಮಾಡಲಾಗಿದೆ ಎಂದು ಹೇಳಲಾಗುತ್ತಿದೆ.

ಈಗ ಆಯುಕ್ತರ ಅಧಿಕೃತ ನಿವಾಸದ ಕಿಟಕಿಯ ರಾಡ್‌ಗೆ ಬಿಗಿದಿರುವ ವೈಯರ್‌ಗಳು ಇಲ್ಲೇನೋ ನಡೆದಿದೆ ಎಂಬುದನ್ನು ಸಾರಿ ಸಾರಿ ಹೇಳುತ್ತಿದೆ. ಬಹಳ ದಿನಗಳ ಹಿಂದೆಯೇ ಸಿಸಿ ಕ್ಯಾಮರಾ, ಡಿವಿಆರ್ ತೆರವುಗೊಳಿಸಲಾಗಿದ್ದರೂ ಅದನ್ನು ನಿರ್ವಹಣೆ ಮಾಡುತ್ತಿದ್ದ ಕಟ್ಟಡ ವಿಭಾಗದ ಇಂಜಿನಿಯರ್‌ಗಳಾಗಲೀ, ಸ್ಟಾಕ್‌ಬುಕ್ ನಿರ್ವಹಿಸುತ್ತಿದ್ದ ಅಧಿಕಾರಿಗಳಾಗಲೀ ಅಥವಾ ಸೆಕ್ಯೂರಿಟಿ ಸಿಬ್ಬಂದಿಗಳಾಗಲೀ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದಿಲ್ಲ ಅಥವಾ ಪೊಲೀಸ್ ಠಾಣೆಗೆ ದೂರು ನೀಡದೇ ಇರುವುದು ಅಚ್ಚರಿ ಮೂಡಿಸಿದೆ.

ಪೀಠೋಪಕರಣ ನಾಪತ್ತೆ: ಈ ಮಧ್ಯೆ ಕ್ವಾರ್ಟರ್ಸ್‌ನಲ್ಲಿದ್ದ ಕೆಲ ಬೆಲೆ ಬಾಳುವ ಪೀಠೋಪಕರಣಗಳೂ ಕಣ್ಮರೆಯಾಗಿವೆ ಎಂದು ಹೇಳಲಾಗುತ್ತಿದೆ. ಆದರೆ, ಬಿಲ್ಡಿಂಗ್ ಡಿವಿಷನ್ನಿನ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಆರ್. ಶ್ರೀನಿವಾಸ್ ಈ ಬಗ್ಗೆ ನನಗೇನೂ ಗೊತ್ತಿಲ್ಲ ಎಂದು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ್ದಾರೆ.

ನಾನು ಜವಾಬ್ದಾರಿ ವಹಿಸಿಕೊಂಡಾಗ ಆಯುಕ್ತರ ಕ್ವಾರ್ಟರ್ಸ್ ಸ್ಟಾಕ್ ಲಿಸ್ಟ್ ಅನ್ನು ಹಿಂದಿನವರು ಕೊಟ್ಟಿಲ್ಲ. ಅಲ್ಲಿ ಸಿಸಿ ಕ್ಯಾಮರಾ, ಡಿವಿಆರ್ ಉಪಕರಣಗಳೂ ಇರಲಿಲ್ಲ ಎಂದು ಅಸಿಸ್ಟೆಂಟ್ ಇಂಜಿನಿಯರ್ ಚೆಲುವರಾಜು ತಿಳಿಸಿದರೆ, ನನಗೆ ಎಲೆಕ್ಟ್ರಿಕ್ ಬಿಲ್ ಪಾವತಿ, ಜನರೇಟರ್ ನಿರ್ವಹಣೆ ಜವಾಬ್ದಾರಿ ಇದೆಯೇ ಹೊರತು, ಕ್ಯಾಮರಾ, ಮತ್ತಿತರ ಎಲೆಕ್ಟ್ರಾನಿಕ್ ವಸ್ತುಗಳ ಬಗ್ಗೆ ಮಾಹಿತಿ ಇಲ್ಲ ಎಂದು ಎಲೆಕ್ಟ್ರಿಕಲ್ ಡಿವಿಷನ್ ಅಸಿಸ್ಟೆಂಟ್ ಇಂಜಿನಿಯರ್ ಸುರೇಶ್ ಹೇಳುತ್ತಾರೆ.

ಆಡಳಿತ ತರಬೇತಿ ಸಂಸ್ಥೆಯ ಗೆಸ್ಟ್ ಹೌಸ್‌ನಲ್ಲಿ ತಂಗಿದ್ದ, ಮೈಸೂರಿನ ಹಿಂದಿನ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ, ಅಲ್ಲಿಂದ ತೆರವು ಮಾಡುವಾಗ ಅಲ್ಲಿದ್ದ ಕೆಲ ಪದಾರ್ಥಗಳ ಕೊಂಡೊಯ್ದಿದ್ದಾರೆ ಎಂದು ಹೇಳಿ ಅಧಿಕಾರಿಗಳೇ ಅವರಿಗೆ ಪತ್ರ ಬರೆದು, ಅವೆಲ್ಲವನ್ನೂ ವಶಪಡಿಸಿಕೊಳ್ಳುವ ಇಲ್ಲವೇ ಅವುಗಳ ಬೆಲೆ ವಸೂಲಿ ಮಾಡುವ ಕ್ರಮ ಕೈಗೊಂಡರು.

ಆದರೆ, ಇಲ್ಲಿ ಅಂತಹ ಕ್ರಮ ಕೈಗೊಳ್ಳಲು ಯಾರಿಗೂ ಅಧಿಕಾರ ಇಲ್ಲವೇ, ಪ್ರಶ್ನಿಸುವ ಸಾಮರ್ಥ್ಯ ಇಲ್ಲವೇ? ಹಾಗಾದರೆ ಮುಡಾ ಆಸ್ತಿಯಾದ ಅಧ್ಯಕ್ಷರು, ಆಯುಕ್ತರು, ಕಾರ್ಯದರ್ಶಿ, ವಿಶೇಷ ಭೂಸ್ವಾಧೀನಾಧಿಕಾರಿಗಳ ನಿವಾಸಗಳ ಉಸ್ತುವಾರಿ ಯಾರದ್ದು? ಅವರನ್ನು ಈಗ ಹೊಣೆ ಮಾಡಿದರೆ ನಿಜ ಸಂಗತಿ ಬಯಲಾಗಲಿದೆ.

ಈ ಮಧ್ಯೆ ಮುಡಾ ಆಯುಕ್ತರ ಅಧಿಕೃತ ನಿವಾಸದ ದುರಸ್ತಿ ಕಾರ್ಯವೂ ನಡೆಯುತ್ತಿರುವಂತೆ ಕಂಡುಬರುತ್ತಿದೆ.

ಆಗಸ್ಟ್ ತಿಂಗಳಲ್ಲಿ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಸಂಚಾರ ನಿಯಮ ಉಲ್ಲಂಘಿಸಿದ ಲಕ್ಷಕ್ಕೂ ಅಧಿಕ ವಾಹನ; 5,500 ವಾಹನ ಸವಾರರಿಂದ ಮಾತ್ರ ದಂಡ ಪಾವತಿ

ಬಾಕಿ ದಂಡ ವಸೂಲಿಗೆ ಪ್ರವೇಶ, ನಿರ್ಗಮನ, ಟೋಲ್ ಪ್ಲಾಜಾಗಳಲ್ಲಿ ಪೊಲೀಸರ ನಿಯೋಜನೆ



ರಿಂಗ್ ರಸ್ತೆಯಲ್ಲಿ ವೇಗದ ಮಿತಿ ನಿಗದಿ

ಮೈಸೂರು ನಗರ ಪೊಲೀಸರು 42.5 ಕಿ.ಮೀ. ರಿಂಗ್ ರಸ್ತೆಯಲ್ಲಿ ವೇಗದ ಮಿತಿ ನಿಗದಿಗೊಳಿಸುವ ಪ್ರಕ್ರಿಯೆ ಆರಂಭಿಸಿದ್ದು, ಉಲ್ಲಂಘಿಸುವ ವಾಹನ ಮಾಲೀಕರಿಂದ ದಂಡ ವಸೂಲಿಗೆ ಕ್ರಮ ವಹಿಸಿದ್ದಾರೆ. ಕಾರು, ಜೀಪ್ ಮತ್ತು ಟ್ಯಾಕ್ಸಿಗಳಿಗೆ ಗಂಟೆಗೆ 60 ಕಿ.ಮೀ. ವೇಗದ ಮಿತಿ ನಿಗದಿ ಮಾಡಲಾಗಿದೆ. ಅಂತೆಯೇ ಬಸ್ ಮತ್ತು ಬೈಕ್‌ಗಳಿಗೆ ಗಂಟೆಗೆ 50 ಕಿ.ಮೀ., ಲಾರಿ, ಟ್ರಕ್, ಲಘು ಸರಕು ವಾಹನಗಳಾದ ಗೂಡ್ಸ್ ಆಟೋ, ಸಾಮಾನ್ಯ ಆಟೋರಿಕ್ಷಾಗಳು ಗರಿಷ್ಠ 40 ಕಿ.ಮೀ. ವೇಗದಲ್ಲಿ ಚಲಿಸಬಹುದು. ಟ್ರಾಕ್ಟರ್ ಮಾದರಿ ವಾಹನಗಳಿಗೆ ಗಂಟೆಗೆ 20 ಕಿ.ಮೀ. ವೇಗಕ್ಕೆ ಸೀಮಿತಗೊಳಿಸಲಾಗಿದೆ.

ಅಪಘಾತ ಸಾವುಗಳು; ಮೂರು ವರ್ಷಗಳ ವಿವರ

ಸ್ಥಳ	2022 (ಆಗಸ್ಟ್‌ವರೆಗೆ)	2023 (ಆಗಸ್ಟ್‌ವರೆಗೆ)	2024 (ಆಗಸ್ಟ್‌ವರೆಗೆ)
ಮೈಸೂರು ನಗರ	125	101	112
ಮೈಸೂರು ಜಿಲ್ಲೆ	337	334	271
ಮಂಡ್ಯ	330	346	340
ರಾಮನಗರ	215	303	261
ಚಾಮರಾಜನಗರ	140	105	160
ಕೊಡಗು	49	59	60
ಹಾಸನ	337	325	305
ಒಟ್ಟು	1,533	1,573	1,509

ಮಾಹಿತಿ ಮೂಲ : ಎಡಿಜಿಪಿ ಅಲೋಕ್‌ಕುಮಾರ್ ಅವರು ತಮ್ಮ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿದ ಡೇಟಾ

ಮೈಸೂರು,ಸೆ.9(ಎಜಿ/ಬಿಸಿಟಿ/ಪಿಎಂ)–ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 275ರ ಉದ್ದಕ್ಕೂ 48ಕ್ಕೂ ಹೆಚ್ಚು ಸ್ವಯಂಚಾಲಿತ ನಂಬರ್ ಪ್ಲೇಟ್ ರೆಕಗ್ನಿಷನ್ (ಎಎನ್‌ಪಿಆರ್) ಕ್ಯಾಮರಾಗಳ ಮೂಲಕ 2024ರ ಆ.1ರಿಂದ ಆ.31ರವರೆಗೆ (ಆಗಸ್ಟ್ ತಿಂಗಳಲ್ಲಿ) ಲಕ್ಷಕ್ಕೂ ಅಧಿಕ ವಾಹನಗಳು ಸಂಚಾರ ನಿಯಮಗಳನ್ನು ಉಲ್ಲಂಘಿಸಿರುವುದು ದಾಖಲಾಗಿದೆ. ಆದರೆ ಈ ಪೈಕಿ ಕೇವಲ 5,500 ವಾಹನಗಳ ಸಂಬಂಧ ಮಾತ್ರವೇ ದಂಡ ಪಾವತಿಸಲಾಗಿದೆ.

ಸೆಕ್ಷನಲ್ ಸ್ಪೀಡ್ ಕಂಟ್ರೋಲ್ ಸಿಸ್ಟಮ್ ಅನ್ನು ಆಗಸ್ಟ್ 1ರಂದು ಜಾರಿಗೊಳಿಸಿದಾಗಿನಿಂದ ಎಐ (ಕೃತಕ ಬುದ್ಧಿಮತ್ತೆ) ಆಧಾರಿತ ಆಟೋಮ್ಯಾಟಿಕ್ ನಂಬರ್ ಪ್ಲೇಟ್ ರೆಕಗ್ನಿಷನ್ (ಎಎನ್‌ಪಿಆರ್) ಕ್ಯಾಮರಾಗಳು ವೇಗದ ಮಿತಿ ಮೀರಿದ ವಾಹನಗಳನ್ನು ಪರಿಣಾಮಕಾರಿಯಾಗಿ ಗುರುತಿಸಿವೆ. 119 ಕಿ.ಮೀ. ರಸ್ತೆ ವಿಸ್ತರಣೆಗೆ ಸಂಬಂಧಿಸಿದಂತೆ ಗರಿಷ್ಠ ವೇಗದ ಮಿತಿಯನ್ನು ಗಂಟೆಗೆ 100 ಕಿ.ಮೀ. ಅನ್ನು (ಕೆಎಂಪಿಹೆಚ್) ನಿಗದಿಗೊಳಿಸಲಾಗಿದೆ. ಯಾವುದೇ ವಾಹನವು ಈ ಮಿತಿಯನ್ನು ಮೀರಿ ಚಲಿಸಿದಾಗ, ಕ್ಯಾಮರಾಗಳು ಸ್ವಯಂಚಾಲಿತವಾಗಿ ಸದರಿ ವಾಹನದ ನಂಬರ್ ಪ್ಲೇಟ್ ಅನ್ನು ಸೆರೆಹಿಡಿಯುತ್ತವೆ. ಜೊತೆಗೆ ಈ ಸಂಬಂಧ ದತ್ತಾಂಶವನ್ನು ಸಂಚಾರ ನಿರ್ವಹಣಾ ಕೇಂದ್ರಕ್ಕೆ ರವಾನಿಸುತ್ತವೆ.

ಮೋಟಾರು ವಾಹನ ಕಾಯ್ದೆಯಡಿ ಪ್ರಕರಣಗಳನ್ನು ದಾಖಲಿಸಿ ಇ–ಚಲನ್‌ಗಳನ್ನು (ಎಲೆಕ್ಟ್ರಾನಿಕ್ ದಂಡ) ಸಂಚಾರ ನಿಯಮ ಉಲ್ಲಂಘಿಸಿದ ವಾಹನ ಚಾಲಕರಿಗೆ ರವಾನಿಸಲಾಗುತ್ತದೆ. ಇದು ವಾಹನ ಮಾಲೀಕರ ನೋಂದಾಯಿತ ಮೊಬೈಲ್ ನಂಬರ್‌ಗೆ ಎಸ್‌ಎಂಎಸ್ (ಸಂದೇಶ) ಮೂಲಕ ತಲುಪಲಿದೆ. ಲಕ್ಷಕ್ಕೂ ಅಧಿಕ ಸಂಖ್ಯೆಯ ವಾಹನಗಳಿಂದ ಸಂಚಾರ ನಿಯಮ ಉಲ್ಲಂಘನೆಯಾಗಿದ್ದರೂ 5,500 ವಾಹನ ಮಾಲೀಕರು ಮಾತ್ರ ದಂಡ ಪಾವತಿಸಿದ್ದಾರೆ.

ಹಾಗಾಗಿ ದಂಡ ವಸೂಲಿಗಾಗಿ ಟೋಲ್ ಪ್ಲಾಜಾಗಳಲ್ಲಿ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ. ಶ್ರೀರಂಗಪಟ್ಟಣ ಬಳಿಯಿರುವ (ಕೆ.ಶೆಟ್ಟಿಹಳ್ಳಿ ಸಮೀಪದ ಗಣಂಗೂರು ಗ್ರಾಮ) ಮತ್ತು ಬಿಡದಿ (ಕುಂಬಳಗೋಡು ಬಳಿಯ ಕಣಿಮಿಣಿಕೆ) ಮೊದಲಾದ ಟೋಲ್ ಪ್ಲಾಜಾಗಳಲ್ಲಿ ಪೊಲೀಸರು ದಂಡ ವಸೂಲಿಗೆ ಕ್ರಮ ವಹಿಸಿದ್ದಾರೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಎಡಿಜಿಪಿ (ಸಂಚಾರ ಮತ್ತು ರಸ್ತೆ ಸುರಕ್ಷತೆ) ಅಲೋಕ್‌ಕುಮಾರ್, ಟೋಲ್ ಪ್ಲಾಜಾಗಳಲ್ಲಿ ಪೊಲೀಸರ ನಿಯೋಜನೆ ಜೊತೆಗೆ ಹೆದ್ದಾರಿಯುದ್ದಕ್ಕೂ ಪ್ರಮುಖ ಪ್ರವೇಶ ಮತ್ತು ನಿರ್ಗಮನ ಸ್ಥಳಗಳಲ್ಲಿ ಪೊಲೀಸ್ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಉದಾಹರಣೆಗೆ ಮೈಸೂರಿನ ಕೆಂಪೇಗೌಡ ವೃತ್ತದ ಬಳಿ (ಮಣಿಪಾಲ್ ಆಸ್ಪತ್ರೆ ಜಂಕ್ಷನ್) ಪೊಲೀಸರನ್ನು ತಪಾಸಣೆಗೆ ನಿಯೋಜಿಸಲಾಗಿದೆ. ಇದಲ್ಲದೆ, ಮೈಸೂರು ನಗರದ ರಿಂಗ್ ರಸ್ತೆಯಂತಹ ಇನ್ನಿತರ ಪ್ರದೇಶಗಳಲ್ಲಿ ಕಂಡುಬರುವ ವಾಹನಗಳ ಸಂಚಾರ ನಿಯಮ ಉಲ್ಲಂಘನೆಗೆ ದಂಡ ವಿಧಿಸಲು ಪ್ರಾರಂಭಿಸಲಾಗಿದೆ ಎಂದರು. ಹ್ಯಾಂಡ್ ಹೆಲ್ಡ್ ಡಿವೈಸ್‌ಗಳಲ್ಲಿ ವಾಹನಗಳ ದತ್ತಾಂಶ ಇರಲಿದ್ದು, ಸಂಚಾರ ನಿಯಮ ಉಲ್ಲಂಘಿಸುವ ವಾಹನಗಳ ವಿವರಗಳನ್ನು ಕ್ಯಾಮರಾಗಳು ಸೆರೆಹಿಡಿದು ಸಂಚಾರ ನಿರ್ವಹಣಾ ಕೇಂದ್ರಕ್ಕೆ ಕಳುಹಿಸಿಕೊಡಲಿವೆ. ಬಳಿಕ ದಂಡವನ್ನು ನೇರವಾಗಿ ವಸೂಲಿ ಮಾಡಲು ಹ್ಯಾಂಡ್ ಹೆಲ್ಡ್ ಡಿವೈಸ್‌ಗಳಿಗೆ ರವಾನಿಸುವ ಮೂಲಕ ಟೋಲ್ ಪ್ಲಾಜಾಗಳಲ್ಲಿ ಪೊಲೀಸ್ ಸಿಬ್ಬಂದಿ ಮುಂದಿನ ಕ್ರಮ ವಹಿಸಲಿದ್ದಾರೆ ಎಂದರು.

ಈ ವೇಳೆ ವಾಹನ ಚಾಲಕರು ದಂಡ ಪಾವತಿಸಲು ನಿರಾಕರಿಸಿದರೆ, ಅವರು ಕೋರ್ಟ್‌ನಲ್ಲಿ ದಂಡ ಪಾವತಿಸಬೇಕಾಗುತ್ತದೆ. ಇದೇ ನಿಯಮ ಸರ್ಕಾರಿ ವಾಹನಗಳೂ ಸೇರಿದಂತೆ ಎಲ್ಲಾ ವಾಹನಗಳಿಗೂ ಅನ್ವಯಿಸುತ್ತದೆ. ಹಲವು ಬಾರಿ ಉಲ್ಲಂಘನೆ ಮಾಡಿದರೆ ದಂಡ ಪಾವತಿಗೆ ನೋಟಿಸ್ ನೀಡಲಾಗುವುದು. ನಿರಂತರವಾಗಿ ದಂಡ ಬಾಕಿ ಉಳಿಸುವ ಪ್ರವೃತ್ತಿ ಮುಂದುವರೆಸಿದರೆ ಅಂತಹವರ ವಿರುದ್ಧ ಪೊಲೀಸರು ಕ್ರಮ ವಹಿಸಲಿದ್ದಾರೆ. ನೇರವಾಗಿ ದಂಡ ವಸೂಲಿಯ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುವುದು ಎಂದರು.

411 ಎಫ್‌ಐಆರ್ ದಾಖಲು

ಅತಿ ವೇಗದ ಜೊತೆಗೆ ಸೀಟ್ ಬೆಲ್ಟ್ ಧರಿಸದೇ ಇರುವುದು, ಅಶಿಸ್ತಿನಲ್ಲಿ ಲೇನ್ ಬದಲಾವಣೆ ಮಾಡುವುದು ಮತ್ತು ವಾಹನ ಚಾಲನೆ ವೇಳೆ ಚಾಲಕ ಮೊಬೈಲ್‌ನಲ್ಲಿ ಮಾತನಾಡುವುದು ಸೇರಿದಂತೆ ಇನ್ನಿತರ ಸಂಚಾರ ನಿಯಮ ಉಲ್ಲಂಘನೆಗಳನ್ನು ಸಹ ಎಐ ಕ್ಯಾಮರಾಗಳು ಸೆರೆಹಿಡಿಯಲಿವೆ. ಹೆದ್ದಾರಿಯಲ್ಲಿ ಮಿತಿಮೀರಿದ ವೇಗಕ್ಕೆ ದಂಡ ವಿಧಿಸುವುದಲ್ಲದೆ, ಗಂಟೆಗೆ 130 ಕಿ.ಮೀ.ಗಿಂತಲೂ ಹೆಚ್ಚಿನ ವೇಗದಲ್ಲಿ ವಾಹನ ಚಾಲನೆಗೆ ಆಗಸ್ಟ್‌ನಲ್ಲಿ 411 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ.

ತೆರಿಗೆ ಪದ್ಧತಿ ಬಗ್ಗೆ ಜನರಿಗೆ ಮನವರಿಕೆ ಅವಶ್ಯ

- ಆದಾಯ ತೆರಿಗೆ ಇಲಾಖೆ ಜಂಟಿ ಆಯುಕ್ತೆ ಕಲ್ಪಲತಾ ರಾಜನ್ ಅಭಿಮತ
- ತೆರಿಗೆ ಸಲಹೆಗಾರರು ಆದಾಯ ತೆರಿಗೆ ಇಲಾಖೆ ಮತ್ತು ತೆರಿಗೆದಾರರ ನಡುವೆ ಸಂಪರ್ಕ ಸೇತುವೆ



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ, ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ ಆಫ್ ಇಂಡಿಯಾ ಹಾಗೂ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಟ್ಯಾಕ್ಸ್ ಪ್ರಾಕ್ಟಿಸನರ್ಸ್ ಆಫ್ ಇಂಡಿಯಾ ಸಂಯುಕ್ತಾಶ್ರಯದಲ್ಲಿ ಸೋಮವಾರ ನಡೆದ ಆದಾಯ ತೆರಿಗೆ–ಟ್ಯಾಕ್ಸ್ ಕ್ಲಿನಿಕ್ ಕಾರ್ಯಕ್ರಮವನ್ನು ಆದಾಯ ತೆರಿಗೆ ಇಲಾಖೆ ಜಂಟಿ ಆಯುಕ್ತೆ ಕಲ್ಪಲತಾ ರಾಜನ್ ಉದ್ಘಾಟಿಸಿದರು. ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು, ಆದಾಯ ತೆರಿಗೆ ಇಲಾಖೆಯ ಉಪ ಆಯುಕ್ತ ಎಂ.ಹೆಚ್.ಹುಸೇನ್ ಇನ್ನಿತರರು ಚಿತ್ರದಲ್ಲಿದ್ದಾರೆ.

ಮೈಸೂರು, ಸೆ.9(ಜಿಎ)–ಆದಾಯ ತೆರಿಗೆ ಇಲಾಖೆ ಮತ್ತು ತೆರಿಗೆ ಪಾವತಿದಾರರ ನಡುವೆ ತೆರಿಗೆ ಸಲಹೆಗಾರರು ಸಂಪರ್ಕ ಸೇತುವೆಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಆದಾಯ ತೆರಿಗೆ ಇಲಾಖೆಯ ಜಂಟಿ ಆಯುಕ್ತೆ ಕಲ್ಪಲತಾ ರಾಜನ್ ತಿಳಿಸಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಸೋಮವಾರ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ, ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ ಆಫ್ ಇಂಡಿಯಾ ಮತ್ತು ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಟ್ಯಾಕ್ಸ್ ಪ್ರಾಕ್ಟಿಸನರ್ಸ್ ಆಫ್ ಇಂಡಿಯಾ ಸಂಯುಕ್ತಾಶ್ರಯದಲ್ಲಿ ನಡೆದ ಆದಾಯ ತೆರಿಗೆ ಮತ್ತು ಟ್ಯಾಕ್ಸ್ ಕ್ಲಿನಿಕ್ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬದಲಾದ ಕಾಲಘಟ್ಟಕ್ಕೆ ತಕ್ಕಂತೆ ನಮ್ಮ ಕಾರ್ಯವೈಖರಿಯೂ ಬದಲಾಗಬೇಕು. ಗ್ರಾಹಕರಿಗೆ ಉತ್ತಮ ಸೇವೆ ಸಿಗಬೇಕಿದೆ, ನೇರ ಭೇಟಿ ಕಡಿಮೆ ಆಗಿದ್ದು, ಡಿಜಿಟಲ್ ವಹಿವಾಟಿಗೆ ಆದ್ಯತೆ ದೊರೆತಿದೆ. ಹೀಗಾಗಿ ಸಂವಹನ ಕಡಿಮೆ ಆಗಿದೆ ಎಂದರು.

ಇ–ಮೇಲ್ ಮೂಲಕ ಬಹುತೇಕ ಸಂವಹನ ನಡೆಯುತ್ತಿದ್ದು, ಹೆಚ್ಚಿನ ಜನರಿಗೆ ಸಂವಹನದ ಕೊರತೆ ಇದೆ. ಹೀಗಾಗಿ ಹೊಸ ಬೆಳವಣಿಗೆ, ತೆರಿಗೆ ಪದ್ಧತಿಗಳ ಕುರಿತು ಜನರಿಗೆ ಮಾಹಿತಿ ನೀಡಬೇಕು. ಸಣ್ಣ ಪ್ರಮಾಣದ ತೆರಿಗೆದಾರರಿಗೆ ಎಲ್ಲ ಮಾಹಿತಿಗಳು ತಲುಪಬೇಕು. ದೂರು ಕಡಿಮೆ ಆಗಬೇಕು. ಈ ನಿಟ್ಟಿನಲ್ಲಿ ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ ಎಂದು ತಿಳಿಸಿದರು.

ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು ಮಾತನಾಡಿ, ಇಡೀ ದೇಶದಲ್ಲಿ ಕರ್ನಾಟಕ ತೆರಿಗೆ ಪಾವತಿಯಲ್ಲಿ ಮುಂಚೂಣಿಯಲ್ಲಿದ್ದು, ತೆರಿಗೆ ಸಲಹೆಗಾರರಿಗೆ ರಾಜ್ಯದಲ್ಲಿ ಸಾಕಷ್ಟು ಮಂದಿ ಉದ್ಯಮಿಗಳು ತೆರಿಗೆ ಪಾವತಿ ಮಾಡುತ್ತಿದ್ದು, ರಾಜ್ಯ ತೆರಿಗೆ ಪಾವತಿಯಲ್ಲಿ ಮುಂಚೂಣಿಯಲ್ಲಿರುವುದಕ್ಕೆ ತೆರಿಗೆ ಸಲಹೆಗಾರರ ಕೊಡುಗೆ ಹೆಚ್ಚಾಗಿದೆ. ಉದ್ಯಮಿಗಳಿಗೆ ತೆರಿಗೆ ಪಾವತಿ ಸಂಬಂಧ ಜಾಗೃತಿ ಮೂಡಿಸುವ ಕಾರ್ಯಕ್ರಮಗಳು ನಡೆಯಬೇಕಿದ್ದು, ಈ ನಿಟ್ಟಿನಲ್ಲಿ ಕೈಗಾರಿಕಾ ಸಂಘ ಕ್ರಮ ವಹಿಸಿದೆ ಎಂದರು

ಆದಾಯ ತೆರಿಗೆ ಇಲಾಖೆಯ ಉಪ ಆಯುಕ್ತ ಎಂ.ಹೆಚ್.ಹುಸೇನ್ ಮಾತನಾಡಿ, ಆದಾಯ ತೆರಿಗೆ ಪಾವತಿಯಿಂದ ದೇಶದ ಅಭಿವೃದ್ಧಿ ಯೋಜನೆಗಳಿಗೆ ಅನುದಾನ ಒದಗಿಸಲು ಸಾಧ್ಯ. ಇದನ್ನು ತೆರಿಗೆ ಪಾವತಿದಾರರಿಗೆ ಮನವರಿಕೆ ಮಾಡಿಕೊಡಬೇಕು. 2014ರಲ್ಲಿ ಐಟಿಆರ್ ಪ್ರೊಸೆಸಿಂಗ್‌ಗೆ 8–10 ತಿಂಗಳು ಬೇಕಿತ್ತು. ಈಗ 48 ಗಂಟೆ ಸಾಕು ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಐಸಿಟಿಪಿಐ ರಾಷ್ಟ್ರೀಯ ಅಧ್ಯಕ್ಷ ಶ್ರೀಧರ ಪಾರ್ಥಸಾರಥಿ, ಬಳ್ಳಾರಿ ಕೈಗಾರಿಕಾ ಮತ್ತು ವಾಣಿಜ್ಯ ಸಂಘದ ಅಧ್ಯಕ್ಷ ಎನ್.ಯಶವಂತ ರಾಜ್, ಉತ್ತಮ್, ಜಿ.ಸಿ.ರಾಮಚಂದ್ರ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ಸೆ.16, ಮೀಲಾದ್ ಪಾರ್ಕ್‌ನಲ್ಲಿ ಸನ್ಮಾನ

ಮೈಸೂರು,ಸೆ.9–ಜಶ್ನೆ ಈದ್ ಮೀಲಾದ್–ಉನ್–ನಬಿ ಅಂಗವಾಗಿ ಮೈಸೂರಿನ ಅಶೋಕ ರಸ್ತೆಯಲ್ಲಿರುವ ಮೀಲಾದ್ ಪಾರ್ಕ್‌ನಲ್ಲಿ ಸರ್‌ಖಾಜಿ, ಶಾಸಕ ತನ್ವೀರ್ ಸೇಠ್ ಹಾಗೂ ಅರೇಬಿಕ್ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭವನ್ನು ಏರ್ಪಡಿಸಲಾಗಿದೆ.

ಮೈಸೂರು ಸಿಟಿ ಸೆಂಟ್ರಲ್ ಮೀಲಾದ್ ಕಮಿಟಿ, ಮೀಲಾದ್ ಪಾರ್ಕ್, ಅಶೋಕ ರಸ್ತೆ, ಲಷ್ಕರ್ ಮೊಹಲ್ಲಾ, ಮೈಸೂರು ಇದರ ಪದಾಧಿಕಾರಿಗಳು ಪ್ರತಿ ವರ್ಷದಂತೆ ಈ ವರ್ಷವೂ ಪ್ರವಾದಿ ಮೊಹಮ್ಮದ್ (ಪಿಬಿಹೆಚ್‌ಯು) ರವರ ಜನ್ಮದಿನ ಜಶ್ನೆ ಈದ್ ಮೀಲಾದ್–ಉನ್–ನಬಿ ಅನ್ನು ಸೆ. 16ರಂದು ಸಂಜೆ 5.30 ರಿಂದ ರಾತ್ರಿ 9.45ರವರೆಗೆ, ಮೀಲಾದ್ ಪಾರ್ಕ್, ಅಶೋಕ ರಸ್ತೆ, ಲಷ್ಕರ್ ಮೊಹಲ್ಲಾ, ಮೈಸೂರು ಇಲ್ಲಿ ಆಚರಣೆ ಮಾಡಲಿದ್ದಾರೆ. ಹೆಚ್ಚಿನ ವಿವರಗಳಿಗೆ ಮೊಹಮ್ಮದ್ ಅಫ್ರೋಜ್ ಪಾಷ, ಮೊಬೈಲ್ ನಂ. 9379856537 ಸಂಪರ್ಕಿಸಬಹುದು.

ಕೆಎಎಸ್ ಪ್ರಿಲಿಮ್ಸ್ ಪರೀಕ್ಷೆಗೆ ಉಚಿತ ಕ್ರ್ಯಾಶ್ ಕೋರ್ಸ್

ಮೈಸೂರು,ಸೆ.9–ಮೈಸೂರಿನ ಎಸ್.ಕೆ. ಎಜುಕೇಷನ್ ಸೊಸೈಟಿ ವತಿಯಿಂದ ಕೆಎಎಸ್ ಪ್ರಿಲಿಮ್ಸ್ ಸ್ಪರ್ಧಾತ್ಮಕ ಪರೀಕ್ಷೆಗೆ 2 ತಿಂಗಳ ಉಚಿತ ಕ್ರ್ಯಾಶ್ ಕೋರ್ಸ್ ಅನ್ನು ಸೆ.16ರಿಂದ ಹಮ್ಮಿಕೊಳ್ಳಲಾಗಿದೆ. ಆಸಕ್ತ ಅಭ್ಯರ್ಥಿಗಳು ಇದರ ಸದುಪಯೋಗಪಡೆದುಕೊಳ್ಳಬೇಕೆಂದು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 89044 03555 ಸಂಪರ್ಕಿಸಬಹುದು.


ದೇಶ - ವಿದೇಶ

ಕಾಡ್ಗಿಚ್ಚಿನ ಆರ್ಭಟ; ಕ್ಯಾಲಿಫೋರ್ನಿಯಾ ರಾಜ್ಯದಲ್ಲಿ ತುರ್ತು ಪರಿಸ್ಥಿತಿ ಘೋಷಣೆ



ಕ್ಯಾಲಿಫೋರ್ನಿಯಾ: ಅಮೆರಿಕದ ಕ್ಯಾಲಿಫೋರ್ನಿಯಾ ರಾಜ್ಯದ ದಕ್ಷಿಣ ಭಾಗದಲ್ಲಿ ಕಾಡ್ಗಿಚ್ಚಿನ ಆರ್ಭಟ ವಿಪರೀತವಾಗಿದೆ. 17 ಸಾವಿರ ಎಕರೆ ಪ್ರದೇಶಕ್ಕೆ ಕಾಡ್ಗಿಚ್ಚು ವ್ಯಾಪಿಸಿದೆ. ಈ ಹಿನ್ನೆಲೆಯಲ್ಲಿ ಬರೋಬ್ಬರಿ 5 ಸಾವಿರ ಜನರನ್ನು ಸ್ಥಳಾಂತರ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಕ್ಯಾಲಿಫೋರ್ನಿಯಾ ರಾಜ್ಯದಲ್ಲಿ ತುರ್ತು ಪರಿಸ್ಥಿತಿ ಘೋಷಣೆ ಮಾಡಲಾಗಿದೆ. ಮೂಲಗಳ ಪ್ರಕಾರ ಕ್ಯಾಲಿಫೋರ್ನಿಯಾ ರಾಜ್ಯದಲ್ಲಿ ಮನೆಗಳೂ ಸೇರಿದಂತೆ ಒಟ್ಟು 35 ಸಾವಿರ ಕಟ್ಟಡಗಳು ಹಾನಿಗೀಡಾಗುವ ಆತಂಕವಿದೆ. ಈಗಾಗಲೇ 8 ಸಾವಿರಕ್ಕೂ ಹೆಚ್ಚು ಕಟ್ಟಡಗಳು ಹಾನಿಗೀಡಾಗಿವೆ. ರಾಜ್ಯಾದ್ಯಂತ ಒಟ್ಟು 600 ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಅಗ್ನಿಶಾಮಕ ದಳದ ಆದೇಶದ ಅನ್ವಯ ಕ್ಯಾಲಿಫೋರ್ನಿಯಾ ರಾಜ್ಯದ ಹಲವು ಭಾಗಗಳಲ್ಲಿ ಮನೆಗಳನ್ನು ತೆರವುಗೊಳಿಸಿ ಅಲ್ಲಿನ ನಿವಾಸಿಗಳನ್ನು ಸುರಕ್ಷಿತ ಸ್ಥಳಗಳಿಗೆ ರವಾನೆ ಮಾಡಲಾಗಿದೆ. ಹಲವು ಹೆದ್ದಾರಿಗಳನ್ನೂ ಬಂದ್ ಮಾಡಲಾಗಿದ್ದು, ಜನರ ಓಡಾಟಕ್ಕೆ ನಿರ್ಬಂಧ ಹೇರಲಾಗಿದೆ.


ಬರೋಬ್ಬರಿ 20 ದಿನಗಳ ಕಾಲ ವಿದ್ಯಾರ್ಥಿನಿಯನ್ನು ಹೋಟೆಲ್ ರೂಮ್‌ನಲ್ಲಿ ಬಂಧಿಸಿಟ್ಟ ಯುವಕ



ಹೈದರಾಬಾದ್: ವಿದ್ಯಾರ್ಥಿನಿಯನ್ನು ಕಳೆದ 20 ದಿನಗಳಿಂದ ಹೋಟೆಲ್ ರೂಂನಲ್ಲಿ ಯುವಕನೊಬ್ಬ ಕೂಡಿ ಹಾಕಿದ್ದಾನೆ. ಇದೀಗ ಹೈದರಾಬಾದ್‌ನ ಮಹಿಳಾ ಪೊಲೀಸರು ಆಕೆಯನ್ನು ರಕ್ಷಿಸಿ, 19 ವರ್ಷದ ಆರೋಪಿಯನ್ನು ಬಂಧಿಸಿದ್ದಾರೆ. ಆನ್‌ಲೈನ್ ಪ್ಲಾಟ್‌ಫಾರ್ಮ್ ಮೂಲಕ ಪರಿಚಯವಾಗಿದ್ದ ಯುವಕ, ನಂತರ ಪರಸ್ಪರ ಚಾಟಿಂಗ್ ಮಾಡಲು ಶುರುಮಾಡಿದ್ದಾರೆ. ಯುವತಿ ಮೇಲೆ ಚಾಟಿಂಗ್ ವಿಚಾರವಾಗಿ ಕೋಪಗೊಂಡ ಯುವಕ ನಂತರ ಹೋಟೆಲ್ ರೂಮ್‌ನಲ್ಲಿ ಕೂಡಿ ಹಾಕುತ್ತಾನೆ. ಈ ಸುದ್ದಿಯನ್ನು ಯಾರಿಗೂ ತಿಳಿಸದಂತೆಯೂ ಬೆದರಿಕೆ ಹಾಕುತ್ತಾನೆ. ಆದರೆ, ಮನೆಯವರಲ್ಲಿ ಮಾತನಾಡಲೆಂದು ಮಾತ್ರ ಫೋನ್ ಕೊಡುತ್ತಿದ್ದನಂತೆ. ಈ ವೇಳೆ ಚಾಣಾಕ್ಷತನದಿಂದ ಯುವತಿ ತನ್ನ ಪೋಷಕರಿಗೆ ಲೊಕೇಷನ್ ಕಳಿಸಿದ್ದಾಳೆ. ಜೊತೆಗೆ ಟ್ರ್ಯಾಪ್ ಆಗಿರುವ ಮಾಹಿತಿಯನ್ನು ಶೇರ್ ಮಾಡಿಕೊಂಡಿದ್ದಾಳೆ. ನಂತರ ವಿದ್ಯಾರ್ಥಿನಿ ಪೋಷಕರು ಹೈದರಾಬಾದ್‌ನ 'SHE' ಟೀಮ್ಸ್‌ಗೆ ದೂರು ಸಲ್ಲಿಸಿದ್ದಾರೆ. ತಕ್ಷಣ ಪ್ರಕರಣ ಕೈಗೆತ್ತಿಕೊಂಡ ಪೊಲೀಸರು ನಾರಾಯಣಗುಡಾದಲ್ಲಿ ಬೀಗ ಹಾಕಲಾದ ಹೋಟೆಲ್‌ನಲ್ಲಿ ಬಾಲಕಿಯನ್ನು ಪತ್ತೆಹಚ್ಚಿ, ಪೋಷಕರಿಗೆ ಒಪ್ಪಿಸಿದ್ದಾರೆ.

ಟ್ರಕ್–ಪೆಟ್ರೋಲ್ ಟ್ಯಾಂಕರ್ ಡಿಕ್ಕಿಯಾಗಿ ಸ್ಫೋಟ: 48 ಜನ, 50 ಜಾನುವಾರು ಸಾವು


ನೈಜೀರಿಯಾ: ಪೆಟ್ರೋಲ್ ಟ್ಯಾಂಕರ್ ಮತ್ತು ಟ್ರಕ್ ನಡುವೆ ಅಪಘಾತವಾಗಿ ಭೀಕರ ಸ್ಫೋಟ ಸಂಭವಿಸಿದ್ದು, ಸ್ಥಳದಲ್ಲಿಯೇ



48 ಮಂದಿ ಹಾಗೂ 50ಕ್ಕೂ ಅಧಿಕ ಜಾನುವಾರುಗಳು ಸಜೀವ ದಹನವಾಗಿರುವ ಘಟನೆ ನೈಜೀರಿಯಾದಲ್ಲಿ ನಡೆದಿದೆ.

ನೈಜೀರಿಯಾದ ನಾರ್ಥ ಸೆಂಟ್ರಲ್‌ನಲ್ಲಿ ಘಟನೆ ನಡೆದಿದೆ. ಅಪಘಾತದ ಸ್ಥಳದಲ್ಲಿ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ ಎಂದು ತುರ್ತು ನಿರ್ವಹಣಾ ಕೇಂದ್ರದ ಮಹಾನಿರ್ದೇಶಕ ಅಬ್ದುಲ್ಲಾ ಬಾಬಾ ಅರಬ್ ಹೇಳಿದ್ದಾರೆ. ಸ್ಫೋಟ ಅತ್ಯಂತ ತೀವ್ರವಾಗಿದ್ದು, ಮೊದಲಿಗೆ 30 ಮೃತದೇಹಗಳು ಸಿಕ್ಕಿದ್ದವು. ಆ ಬಳಿಕ 18 ಮೃತದೇಹಗಳನ್ನು ಹೊರತೆಗೆಯಲಾಗಿದೆ. ಇವುಗಳನ್ನು ವಾರಸುದಾರರ ಸಮ್ಮುಖದಲ್ಲಿ ಸಾಮೂಹಿಕ ಅಂತ್ಯಸಂಸ್ಕಾರ ನಡೆಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಈ ಬಗ್ಗೆ ಮಾತನಾಡಿರುವ ಗವರ್ನರ್ ಮೊಹಮ್ಮದ್ ಬಾಗೊ, ವಾಹನ ಚಾಲಕರು ಟ್ರಾಫಿಕ್ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಇನ್ನು ಸ್ಫೋಟಗೊಂಡ ಸ್ಥಳದ ಸುತ್ತಮುತ್ತಲ ಜನ ಶಾಂತಿ ಕಾಪಾಡಬೇಕು ಎಂದು ಸಲಹೆ ನೀಡಿದ್ದಾರೆ.


ದೆಹಲಿಯಲ್ಲಿ ವಾಯುಮಾಲಿನ್ಯ ನಿಯಂತ್ರಿಸಲು ಜನವರಿ 1ರವರೆಗೆ ಪಟಾಕಿ ನಿಷೇಧ



ನವದೆಹಲಿ: ಮುಂಬರುವ ಚಳಿಗಾಲದಲ್ಲಿ ವಾಯು ಮಾಲಿನ್ಯವನ್ನು ನಿಯಂತ್ರಿಸಲು ದೆಹಲಿ ಸರ್ಕಾರ ಸೋಮವಾರ ರಾಷ್ಟ್ರ ರಾಜಧಾನಿಯಲ್ಲಿ ಪಟಾಕಿಗಳ ಉತ್ಪಾದನೆ, ಮಾರಾಟ ಮತ್ತು ಬಳಕೆಯನ್ನು ನಿಷೇಧಿಸಿದೆ. ಆನ್‌ಲೈನ್‌ನಲ್ಲೂ ಪಟಾಕಿ ಮಾರಾಟ ಮತ್ತು ವಿತರಣೆಯನ್ನು ಸಹ ನಿಷೇಧಿಸಲಾಗಿದೆ ಎಂದು ದೆಹಲಿ ಪರಿಸರ ಸಚಿವ ಗೋಪಾಲ್ ರೈ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ನಿಷೇಧವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ದೆಹಲಿ ಪೊಲೀಸರು, ದೆಹಲಿ ಮಾಲಿನ್ಯ ನಿಯಂತ್ರಣ ಸಮಿತಿ ಮತ್ತು ಕಂದಾಯ ಇಲಾಖೆ ಸಹಯೋಗದಲ್ಲಿ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲಾಗುವುದು ಎಂದು ಹೇಳಿದ್ದಾರೆ. ಪಟಾಕಿ ಉತ್ಪಾದನೆ, ಸಂಗ್ರಹಣೆ, ಮಾರಾಟ ಮತ್ತು ಬಳಕೆಯ ಮೇಲಿನ ನಿಷೇಧವು ಜನವರಿ 1, 2025ರವರೆಗೆ ಜಾರಿಯಲ್ಲಿರುತ್ತದೆ ಎಂದು ಗೋಪಾಲ್ ರೈ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫಿಲಿಪೈನ್ಸ್‌ನಲ್ಲಿ ಶಿಶುಕಾಮಿ ಪಾದ್ರಿ ಬಂಧನಕ್ಕೆ 2 ಸಾವಿರ ಪೊಲೀಸರು; ಹೆಲಿಕಾಪ್ಟರ್ ಬಳಕೆ



ಫಿಲಿಪೈನ್ಸ್: ತನ್ನನ್ನು ತಾನು ದೇವ ಮಾನವ ಎಂದು ಹೇಳಿಕೊಳ್ಳುತ್ತಿದ್ದ ವ್ಯಕ್ತಿಯ ವಿರುದ್ಧ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಕೇಳಿ ಬಂದಿತ್ತು. ಆತನ ಹೆಸರು ಅಪೊಲೊ ಕ್ವಿಬೊಲೊಯ್. ಫಿಲಿಪೈನ್ಸ್ ದೇಶದ ಚರ್ಚ್ ಒಂದರ ಪಾಸ್ಟರ್ ಆಗಿದ್ದ ಅಪೊಲೊ ಕ್ವಿಬೊಲೊಯ್ ಎಂಬಾತನನ್ನು ಬಂಧಿಸಲಾಗಿದೆ. ಈತನ ಬಂಧನಕ್ಕೆ ಬರೋಬ್ಬರಿ 2 ಸಾವಿರ ಪೊಲೀಸರು ನಿಯೋಜನೆಗೊಂಡಿದ್ದರು. ಫಿಲಿಪೈನ್ಸ್‌ನ ದಾವೋ ನಗರದಲ್ಲಿ ಆತ 74 ಎಕರೆ ವಿಸ್ತಾರದಲ್ಲಿ ಚರ್ಚ್ ನಿರ್ಮಿಸಿಕೊಂಡಿದ್ದಾನೆ. ಈ ಚರ್ಚ್ ಸೇರಿದಂತೆ ಹಲವೆಡೆ ಸುಮಾರು 2 ವಾರಗಳ ಕಾಲ ಹುಡುಕಿದ ಬಳಿಕ ಇದೀಗ ಆರೋಪಿ ಪತ್ತೆಯಾಗಿದ್ದಾನೆ. 74 ಎಕರೆ ಪ್ರದೇಶದ ಸುತ್ತಲೂ ಮಾನವ ತಡೆಗೋಡೆ ರೀತಿ ಹರಡಿ ಕುಳಿತಿದ್ದ ಬೆಂಬಲಿಗರು ಪೊಲೀಸ್ ಹಾಗೂ ಭದ್ರತಾ ಪಡೆ ಒಳಗೆ ಬರದಂತೆ ತಡೆದಿದ್ದರು. ತಮ್ಮ ಬಳಿ ನ್ಯಾಯಾಲಯದ ಆದೇಶ ಇದೆ ಎಂದರೂ ಬೆಂಬಲಿಗರು ಸೊಪ್ಪು ಹಾಕಿರಲಿಲ್ಲ. ಈ ಹಿನ್ನೆಲೆಯಲ್ಲಿ ಪೊಲೀಸರು ಹೆಲಿಕಾಪ್ಟರ್ ಬಳಕೆ ಮಾಡಿಕೊಂಡು ಈ ಪ್ರದೇಶದ ಒಳಗೆ ನುಗ್ಗಲು ಯತ್ನಿಸಿದರು. ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಹಲವು ಪ್ರಕರಣಗಳ ಆರೋಪಿಯಾಗಿದ್ದ.

ಹೆಣ್ಣು ಮಕ್ಕಳ ಕಾಲೇಜಿಗೆ ಕರೆತನ್ನಿ

● ಪಾದಯಾತ್ರೆ ಬಳಿಕ ನಡೆದ ಜನಸಂಪರ್ಕ ಸಭೆಯಲ್ಲಿ ಶಾಸಕ ಕೆ.ಹರೀಶ್‌ಗೌಡರ ಸಲಹೆ ● ಕುಂಬಾರಕೊಪ್ಪಲು ಸರ್ಕಾರಿ ಪಿಯು ಕಾಲೇಜಿನ ಕೊಠಡಿ ಉದ್ಘಾಟನೆ



ಕುಂಬಾರಕೊಪ್ಪಲು ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಎರಡು ತರಗತಿ ಕೊಠಡಿಗಳನ್ನು ಶಾಸಕ ಕೆ.ಹರೀಶ್‌ಗೌಡರು ಸೋಮವಾರ ಉದ್ಘಾಟಿಸಿದರು.

ಮೈಸೂರು,ಸೆ.9– ಕುಂಬಾರಕೊಪ್ಪಲಿನ ಸರಕಾರಿ ಪದವಿಪೂರ್ವ ಕಾಲೇಜಿನ ಪ್ರವೇಶಾತಿ ಹೆಚ್ಚಿಸಲು ವಿಶೇಷ ನೋಂದಣಿ ಅಭಿಯಾನ ಆರಂಭಿಸಿ. ಮುಖ್ಯವಾಗಿ ಹೆಣ್ಣು ಮಕ್ಕಳನ್ನು ಕಾಲೇಜಿಗೆ ಸೇರಿಸಿ ಎಂದು ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರು ಸಲಹೆ ನೀಡಿದರು.

ಮೈಸೂರು ಮಹಾನಗರಪಾಲಿಕೆ ವಾರ್ಡ್ ನಂ.4ರ ಹೆಬ್ಬಾಳು–ಲೋಕನಾಯಕನಗರದಲ್ಲಿ ಸೋಮವಾರ ಪಾದಯಾತ್ರೆ ನಡೆಸಿ ಕುಂದುಕೊರತೆಗಳನ್ನು ಆಲಿಸಿ ಅಹವಾಲು ಸ್ವೀಕರಿಸಿದ ಬಳಿಕ ಕುಂಬಾರಕೊಪ್ಪಲು ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಎರಡು ತರಗತಿ ಕೊಠಡಿಗಳನ್ನು ಉದ್ಘಾಟಿಸಿ ಮಾತನಾಡಿದರು.

ಕುಂಬಾರಕೊಪ್ಪಲಿನ ಜನತೆ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗಲೆಂದು ಈ ಕಾಲೇಜಿಗೆ ಜಾಗ ನೀಡಿದ್ದಾರೆ. ಕಲೆ, ವಾಣಿಜ್ಯ ವಿಷಯದಲ್ಲಿ ಪಿಯುಸಿ ಅಧ್ಯಯನಕ್ಕೆ ಅವಕಾಶವಿದೆ. ಅಂತೆಯೆ ಈ ಕಾಲೇಜಿನ ಸುತ್ತ ಏಳು ವಾರ್ಡ್‌ಗಳಿದ್ದು ಕೇವಲ 65 ವಿದ್ಯಾರ್ಥಿಗಳು ಮಾತ್ರ ಪ್ರವೇಶಾತಿ ಪಡೆದಿರುವುದು ಬೇಸರದ ಸಂಗತಿ. ನಾನು ಕಾಲೇಜಿಗೆ ಬೇಕಾದ ಎಲ್ಲಾ ರೀತಿ ಸೌಲಭ್ಯಗಳನ್ನು ನೀಡಲು ಸಿದ್ಧರಿದ್ದೇನೆ. ಕಾಲೇಜಿನ ಸಿಬ್ಬಂದಿ ವಿಶೇಷ ಅಭಿಯಾನದ ಮೂಲಕ ಕಾಲೇಜು ವ್ಯಾಪ್ತಿಯಲ್ಲಿರುವ ಪ್ರೌಢಶಾಲೆಗಳಿಗೆ ಭೇಟಿ ನೀಡಿ ಈ ಕಾಲೇಜಿಗೆ ಪ್ರವೇಶಾತಿ ಪಡೆಯುವಂತೆ ಮನವೊಲಿಸಬೇಕು. ತನ್ಮೂಲಕ ವಿದ್ಯಾರ್ಥಿಗಳ ಸಂಖ್ಯೆಯನ್ನು 600ಕ್ಕೆ ಏರಿಕೆ ಮಾಡಬೇಕೆಂದು ಸಲಹೆ ನೀಡಿದರು.

ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳು ನಗರ ಪ್ರದೇಶದ ಕಾಲೇಜಿನಲ್ಲಿ ಸೇರಿಕೊಂಡು ಅಧ್ಯಯನ ಮಾಡಲು ಉಳಿದುಕೊಳ್ಳಲು ಜಾಗವಿಲ್ಲದೇ ಶಿಕ್ಷಣ ಮೊಟಕುಗೊಳಿಸುತ್ತಿದ್ದಾರೆ. ಇದರಿಂದ ಹೆಣ್ಣು ಮಕ್ಕಳು ಅವಕಾಶ ವಂಚಿತರಾಗುತ್ತಾರೆ. ಆದರೆ ನಗರ ಪ್ರದೇಶದ ಮಕ್ಕಳಿಗೆ ಈ ರೀತಿ ಆಗಬಾರದು. ಆ ನಿಟ್ಟಿನಲ್ಲಿ ಹೆಣ್ಣು ಮಕ್ಕಳು ಎಸ್‌ಎಸ್‌ಎಲ್‌ಸಿ ನಂತರ ಶಿಕ್ಷಣ ಮೊಟಕುಗೊಳಿಸುವುದನ್ನು ತಪ್ಪಿಸಿ ಎಂದು ಸಲಹೆ ನೀಡಿದರು.

ಕುಂಬಾರಕೊಪ್ಪಲು ಸರಕಾರಿ ಪದವಿ ಪೂರ್ವ ಕಾಲೇಜಿಗೆ ಕೊಳವೆ ಬಾವಿ ಮಂಜೂರಾಗಿದೆ. ಶಾಸಕರ ಅನುದಾನದಲ್ಲಿಯೇ ರಂಗಮಂದಿರ ಕಟ್ಟಿಸಿಕೊಡುತ್ತೇವೆ. ಮಾತ್ರವಲ್ಲದೇ ಹೆಣ್ಣುಮಕ್ಕಳಿಗೆ ಶೌಚಾಲಯ ನಿರ್ಮಿಸಿಕೊಡುವುದಾಗಿ ಭರವಸೆ ನೀಡಿದರು. ಪಾಲಿಕೆ ಮಾಜಿ ಸದಸ್ಯ ಪೈಲ್ವಾನ್ ಶ್ರೀನಿವಾಸ್, ಡಿಡಿಪಿಯು ಎಂ.ಮರಿಸ್ವಾಮಿ, ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಮುಖಂಡರಾದ ನಾಗಣ್ಣ, ಮಹೇಶ್, ಅನೀಲ್, ಪ್ರಾಂಶುಪಾಲ ಶಿವಕುಮಾರ್ ಇತರರಿದ್ದರು.

ಮನೆ ಬೀಗ ಮುರಿದು ನಗ–ನಾಣ್ಯ ಕಳವು

ಮೈಸೂರು, ಸೆ.9(ಎಸ್‌ಬಿಡಿ)– ಮನೆ ಬೀಗ ಮುರಿದು ಲಕ್ಷಾಂತರ ರೂ. ನಗ–ನಾಣ್ಯ ದೋಚಿರುವ ಘಟನೆ ಮೈಸೂರಿನ ಶ್ರೀನಗರ ಬಡಾವಣೆಯಲ್ಲಿ ನಡೆದಿದೆ.

ಇಲ್ಲಿನ ಬಿ ಬ್ಲಾಕ್ ನಿವಾಸಿ ಬಿ.ಶಿವಶಂಕರ ಮನೆಯ ಡೋರ್ ಲಾಕ್ ಮುರಿದು ಒಳನುಗ್ಗಿರುವ ಕಳ್ಳರು, ಸುಮಾರು 2.95 ಲಕ್ಷ ರೂ. ಮೌಲ್ಯದ 62 ಗ್ರಾಂ ಚಿನ್ನಾಭರಣ, ಸುಮಾರು 18 ಸಾವಿರ ರೂ. ಬೆಲೆಯ ಬೆಳ್ಳಿ ಪದಾರ್ಥಗಳು ಹಾಗೂ 30 ಸಾವಿರ ರೂ. ಹಣವನ್ನು ಕದ್ದೊಯ್ದಿದ್ದಾರೆ. ಗಣೇಶ ಚತುರ್ಥಿ ಹಿನ್ನೆಲೆಯಲ್ಲಿ ಶಿವಶಂಕರ್ ಮನೆಯವರೊಂದಿಗೆ ಶನಿವಾರ ಮಧ್ಯಾಹ್ನ 1 ಗಂಟೆಗೆ ಸ್ವಗ್ರಾಮ ಬಿದರಗೂಡಿಗೆ ತೆರಳಿದ್ದರು. ಭಾನುವಾರ ಬೆಳಗ್ಗೆ 10.30ಕ್ಕೆ ವಾಪಸ್ ಬಂದಾಗ ಮನೆಯ ಡೋರ್ ಲಾಕ್ ಮುರಿದಿತ್ತು. ಗಾಬರಿಯಿಂದ ಒಳಹೋಗಿ ನೋಡಿದಾಗ ಬೀರುವಿನಲ್ಲಿದ್ದ ಚಿನ್ನಾಭರಣ, ಬೆಳ್ಳಿ ಪದಾರ್ಥ ಹಾಗೂ ಹಣ ಕಳ್ಳತನವಾಗಿರುವುದು ತಿಳಿಯಿತು.

ಈ ಸಂಬಂಧ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಖದೀಮರ ಪತ್ತೆಗೆ ಶೋಧ ನಡೆಸಿದ್ದಾರೆ.

ಕರ್ನಾಟಕವನ್ನು ಮಾದರಿ ರಾಜ್ಯವನ್ನಾಗಿಸಿ

ರಾಜ್ಯ ಸರ್ಕಾರಿ ನೌಕರರ ಜಿಲ್ಲಾ ಸಂಘದ ನವೀಕೃತ ಕಟ್ಟಡ ಉದ್ಘಾಟಿಸಿ ಸರ್ಕಾರಿ ನೌಕರರಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಸಲಹೆ



ಮೈಸೂರಿನ ಧನ್ವಂತರಿ ರಸ್ತೆಯ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಜಿಲ್ಲಾ ಸಂಘದ ನವೀಕೃತ ಕಟ್ಟಡವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೋಮವಾರ ಉದ್ಘಾಟಿಸಿದರು.

ಮೈಸೂರು, ಸೆ.9(ಬಿಎಲ್‌ಯು)– ಸರ್ಕಾರದ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಮೂಲಕ ಕರ್ನಾಟಕವನ್ನು ದೇಶದಲ್ಲೇ ಮಾದರಿ ರಾಜ್ಯವನ್ನಾಗಿ ಮಾಡಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸರ್ಕಾರಿ ನೌಕರರಿಗೆ ಸಲಹೆ ನೀಡಿದ್ದಾರೆ.

ನಗರದ ಧನ್ವಂತರಿ ರಸ್ತೆಯ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಜಿಲ್ಲಾ ಸಂಘದ ನವೀಕೃತ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯವನ್ನು ಮತ್ತಷ್ಟು ಅಭಿವೃದ್ಧಿ ಮಾಡಲು ಸರ್ಕಾರಿ ನೌಕರರು ಶ್ರಮ ವಹಿಸಿ ಕೆಲಸ ಮಾಡಬೇಕು ಎಂದರು.

ರಾಜ್ಯದ ಅಭಿವೃದ್ಧಿಯ ನೊಗ ಹೊತ್ತಿರುವ ನೀವು ಜವಾಬ್ದಾರಿಯುತ ಸ್ಥಾನದಲ್ಲಿದ್ದೀರಾ. ನಿಮ್ಮ ಜವಾಬ್ದಾರಿ ಹಾಗೂ ಹೊಣೆಗಾರಿಕೆಯನ್ನು ಜನರ ಹಕ್ಕು ಮತ್ತು ರಕ್ಷಣೆಗೆ ಸಮರ್ಪಣೆ ಮಾಡಿ ಎಂದು ಸರ್ಕಾರಿ ನೌಕರರಿಗೆ ಕಿವಿಮಾತು ಹೇಳಿದರು.

ಸಂವಿಧಾನದ ಆಶಯಕ್ಕೆ ತಕ್ಕಂತೆ ಕೆಲಸ ಮಾಡಬೇಕು. ಸಾಮಾನ್ಯ ಜನರ ಏಳಿಗೆಗೆ ದುಡಿಯಬೇಕು, ಕಾನೂನಿ ನನ್ವಯ ನೀವು ಮಾಡುವ ಕೆಲಸ ಜನ ಪರವಾಗಿರಬೇಕು ಎಂದರು. ಬಸವಣ್ಣನವರ ಕಾಲದಿಂದಲೂ ಪ್ರಜಾಪ್ರಭುತ್ವ ಅಸ್ತಿತ್ವದಲ್ಲಿದೆ. ಜನರಿಂದ, ಜನರಿಗಾಗಿ, ಜನರಿಗೋಸ್ಕರ ಆಡಳಿತ ನಡೆಸುವ ಪ್ರಜಾಪ್ರಭುತ್ವದ ಧ್ಯೇಯೋದ್ದೇಶ ಈಡೇರಬೇಕು. ಸರ್ಕಾರ ರೂಪಿಸುವ ಕಾಯ್ದೆಯನ್ನು ಜಾರಿಗೊಳಿಸುವ ಪ್ರಮುಖ ಜವಾಬ್ದಾರಿಯನ್ನು ಕಾರ್ಯಾಂಗ ಹೊತ್ತಿದ್ದು, ಈ ಕಾರ್ಯವನ್ನು ಪರಿಣಾಮಕಾರಿಯಾಗಿ ಮಾಡಬೇಕು ಎಂದರು.

ಸರ್ಕಾರ ರೂಪಿಸುವ ಯೋಜನೆ ಜಾರಿಯಾಗಲು ಸರ್ಕಾರಿ ನೌಕರರು ಕೇಂದ್ರಬಿಂದುವಾಗಿದ್ದಾರೆ. ಈ ಹಿನ್ನೆಲೆ ಸರ್ಕಾರದ ಯೋಜನೆಗಳು ಅನುಷ್ಠಾನಗೊಳ್ಳಲು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು ಎಂದು ಹೇಳಿದರು.

ಈ ವೇಳೆ ಮಾತನಾಡಿದ ಶಾಸಕ ಕೆ.ಹರೀಶ್‌ಗೌಡ, ಸರ್ಕಾರಿ ನೌಕರರ ಪ್ರಮುಖ ಬೇಡಿಕೆಯಾದ 7 ನೇ ವೇತನ ಆಯೋಗವನ್ನು ನಮ್ಮ ಸರ್ಕಾರ ಜಾರಿಗೊಳಿಸಿದೆ. ಈ ಮೂಲಕ ನೌಕರರ ಹಿತ ಕಾಪಾಡುವಲ್ಲಿ ನಮ್ಮ ಸರ್ಕಾರ ಬದ್ಧವಾಗಿದೆ. ಸರ್ಕಾರಿ ನೌಕರರ ಸಂಘಕ್ಕೆ ಅಗತ್ಯವಿರುವ ಎಲ್ಲಾ ರೀತಿಯ ಸಹಕಾರವನ್ನು ನಮ್ಮ ಸರ್ಕಾರ ನೀಡಲಿದೆ ಎಂದು ಭರವಸೆ ನೀಡಿದರು. ಶಾಸಕರಾದ ಟಿ.ಎಸ್.ಶ್ರೀವತ್ಸ, ಡಾ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್, ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಕ್ಷರಿ, ಜಿಲ್ಲಾ ಸಂಘದ ಅಧ್ಯಕ್ಷ ಗೋವಿಂದರಾಜು ಹಾಗೂ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ರಸ್ತೆಬದಿ ವ್ಯಾಪಾರಸ್ಥರಿಗೆ ಸಾಲ ಸೌಲಭ್ಯ: ಮೈಸೂರಿಗೆ ದೇಶದಲ್ಲೇ ಅಗ್ರಸ್ಥಾನ



ಮೈಸೂರು,ಸೆ.9(ಬಿಎಲ್‌ಯು)–ಪಿಎಂ ಸ್ವನಿಧಿ ಯೋಜನೆಯಡಿ ಮೈಸೂರಿನ ರಸ್ತೆಬದಿ ವ್ಯಾಪಾರಸ್ಥರಿಗೆ ಈ ತನಕ 38 ಕೋಟಿ ಸಾಲ ನೀಡಿದ್ದು, ಅತೀ ಹೆಚ್ಚು ರಸ್ತೆಬದಿ ವ್ಯಾಪಾರಸ್ಥರಿಗೆ ಸಾಲ ನೀಡಿರುವ ಪಟ್ಟಿಯಲ್ಲಿ ಮೈಸೂರು ದೇಶದಲ್ಲೇ ಅಗ್ರಸ್ಥಾನದಲ್ಲಿದೆ. ಕೇಂದ್ರ ಸರ್ಕಾರದ ರಾಷ್ಟ್ರೀಯ ಜೀವನೋಪಾಯ ಅಭಿಯಾನ ಕೌಶಲಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯು ಪಿಎಂ ಸ್ವನಿಧಿ ಯೋಜನೆಯಲ್ಲಿ ರಸ್ತೆಬದಿ ವ್ಯಾಪಾರಸ್ಥರಿಗೆ ಹಂತ ಹಂತವಾಗಿ ಸಾಲ ನೀಡುತ್ತಿದೆ.

ರಸ್ತೆಬದಿ ವ್ಯಾಪಾರಸ್ಥರು ಖಾಸಗಿಯಾಗಿ ಸಾಲ ಪಡೆದು ಶೋಷಣೆಗೊಳಗಾಗುವುದನ್ನು ತಪ್ಪಿಸಲು ಸರ್ಕಾರ ಈ ಯೋಜನೆ ಜಾರಿಗೊಳಿಸಿದೆ. ಈ ಯೋಜನೆಯಲ್ಲಿ ಮೊದಲ ಹಂತದಲ್ಲಿ 18,600, 93 ಜನರಿಗೆ 10 ಸಾವಿರ ರೂ., 2ನೇ ಹಂತದಲ್ಲಿ 6,314 ಜನರಿಗೆ 20 ಸಾವಿರ ರೂ. ಹಾಗೂ 3ನೇ ಹಂತದಲ್ಲಿ 1,447 ಜನರಿಗೆ 50 ಸಾವಿರ ರೂ. ನೀಡಲಾಗಿದೆ. ಈ ಮೂಲಕ ಮೈಸೂರಿನ 26,124 ಜನರಿಗೆ 38 ಕೋಟಿ ರೂ. ಸಾಲ ನೀಡಲಾಗಿದೆ. ಪ್ರಾಮಾಣಿಕವಾಗಿ ಸಾಲ ಮರು ಪಾವತಿ ಮಾಡಿದರೆ ಮೂರು ಹಂತದಲ್ಲಿ ಸಾಲ ಪಡೆಯಲು ಅರ್ಹರಾಗಿರುತ್ತಾರೆ. ನಾಲ್ಕನೇ ಹಂತದಲ್ಲಿ 1 ಲಕ್ಷ ಸಾಲ ನೀಡಲಿದ್ದು, ಇದನ್ನು ಕೂಡ ಮರು ಪಾವತಿ ಮಾಡಿದರೆ ಸರ್ಕಾರದ ಬೇರೆ ಬೇರೆ ಯೋಜನೆಯಲ್ಲಿ ಅಧಿಕ ಸಾಲ ಪಡೆಯಲು ಅರ್ಹತೆವುಳ್ಳವರಾಗಿರುತ್ತಾರೆ.

ಮೈಸೂರಿನ ಶೇ.10ರಷ್ಟು ವ್ಯಾಪಾರಸ್ಥರು ಸಾಲ ಮರು ಪಾವತಿಸಿಲ್ಲ

ಪಿಎಂ ಸ್ವನಿಧಿ ಯೋಜನೆಯಲ್ಲಿ ಮೈಸೂರಿನ ಶೇಕಡ 10ರಷ್ಟು ರಸ್ತೆಬದಿ ವ್ಯಾಪಾರಸ್ಥರು ಸಾಲವನ್ನು ಮರುಪಾವತಿ ಮಾಡಿಲ್ಲ. ಸಾಲ ಮರು ಪಾವತಿ ಮಾಡದವರು ಸರ್ಕಾರದ ಇನ್ನಿತರೆ ಯೋಜನೆಯಡಿ ಸಾಲ ಪಡೆಯಲು ಅರ್ಹರಾಗಿರುವುದಿಲ್ಲ. ಸಾಲ ಮರುಪಾವತಿ ಮಾಡಲು ಕಡೆಯದಾಗಿ ಮೂರು ತಿಂಗಳ ಕಾಲಾವಕಾಶ ನೀಡಲಾಗುತ್ತದೆ. ಈ ವೇಳೆ ಸಾಲ ಮರು ಪಾವತಿ ಮಾಡದಿದ್ದರೆ ಆ ಹಣವನ್ನು ಸರ್ಕಾರವೇ ಪಾವತಿ ಮಾಡುತ್ತದೆ. ಆದರೆ ಸಾಲ ಮರು ಪಾವತಿ ಮಾಡದೆ ಅನರ್ಹಗೊಂಡ ವ್ಯಾಪಾರಿಗೆ ಸರ್ಕಾರದ ಇನ್ನಿತರೆ ಯಾವುದೇ ಯೋಜನೆಯಡಿ ಸಾಲ ಸೌಲಭ್ಯ ದೊರೆಯದೆ ಆತನ ಹೆಸರನ್ನು ಕಪ್ಪುಪಟ್ಟಿಗೆ ಸೇರಿಸಲಾಗುತ್ತದೆ ಎಂದು ಅಭಿಯಾನದ ವ್ಯವಸ್ಥಾಪಕ ಡಾ.ಜೆ.ಎಸ್.ಭೈರಲಿಂಗಯ್ಯ ತಿಳಿಸಿದ್ದಾರೆ.

ಹೂಟಗಳ್ಳಿಯಲ್ಲಿ ಬೇಕರಿಗೆ ಬೆಂಕಿ



ಬೇಕರಿಗೆ ಬಿದ್ದ ಬೆಂಕಿಯನ್ನು ಅಗ್ನಿಶಾಮಕ ದಳದ ಸಿಬ್ಬಂದಿ ನಂದಿಸುತ್ತಿರುವುದು.

ಮೈಸೂರು, ಸೆ. 9(ಆರ್‌ಕೆ)–ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೇಕರಿಗೆ ಬೆಂಕಿ ಬಿದ್ದು ಲಕ್ಷಾಂತರ ರೂ. ಮೌಲ್ಯದ ಪದಾರ್ಥಗಳು ಸುಟ್ಟು ಹೋಗಿರುವ ಘಟನೆ ಮೈಸೂರಿನ ಹೂಟಗಳ್ಳಿಯಲ್ಲಿ ಕಳೆದ ಮಧ್ಯರಾತ್ರಿ ಸಂಭವಿಸಿದೆ.

ಅಲ್ಲಿನ ವಾಟರ್ ಟ್ಯಾಂಕ್ ಮುಖ್ಯ ರಸ್ತೆಯಲ್ಲಿರುವ ಲಕ್ಷ್ಮಿ ನರಸಿಂಹ ಬೇಕರಿ ಬೆಂಕಿಯಿಂದ ಸಂಪೂರ್ಣ ಹಾನಿಗೀಡಾಗಿದ್ದು, ಇದರಿಂದ ಲಕ್ಷಾಂತರ ರೂ. ನಷ್ಟವಾಗಿದೆ ಎಂದು ಮಾಲೀಕ ಸ್ವಾಮಿ ತಿಳಿಸಿದ್ದಾರೆ.

ಕಳೆದ ಮಧ್ಯರಾತ್ರಿ ಇದ್ದಕ್ಕಿದ್ದಂತೆ ಬೆಂಕಿ ಹೊತ್ತಿ ಉರಿಯುತ್ತಿದ್ದರಿಂದ ಎಚ್ಚರಗೊಂಡ ಸ್ಥಳೀಯರು ನೀಡಿದ ಮಾಹಿತಿ ಮೇರೆಗೆ ತಕ್ಷಣ ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿ ಅಕ್ಕಪಕ್ಕದ ಮಳಿಗೆಗಳಿಗೆ ಜ್ವಾಲೆ ಹರಡದಂತೆ ನಿಯಂತ್ರಿಸಿದರು. ವಿಷಯ ತಿಳಿಯುತ್ತಿದ್ದಂತೆಯೇ ವಿಜಯನಗರ ಠಾಣೆ ಪೊಲೀಸರು, ಸೆಸ್ಕ್ ಅಧಿಕಾರಿಗಳು ಘಟನಾ ಸ್ಥಳಕ್ಕೆ ಧಾವಿಸಿ ಮಹಜರು ನಡೆಸಿದರು. ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಬೇಕರಿಯಲ್ಲಿ ಬೆಂಕಿ ಅನಾಹುತ ಸಂಭವಿಸಿದೆ ಎಂದು ತಿಳಿದುಬಂದಿದೆ.

ಈ ನೆಲದ ಪ್ರತಿಯೊಬ್ಬರೂ ಕನ್ನಡವನ್ನು ಉಸಿರಾಗಿಸಿಕೊಳ್ಳಬೇಕು

ಅಪರ ಜಿಲ್ಲಾಧಿಕಾರಿ ಎಂ.ಐಶ್ವರ್ಯ ಕರೆ



ಮಡಿಕೇರಿಗೆ ಆಗಮಿಸಿದ ಕನ್ನಡ ಜ್ಯೋತಿ ರಥವನ್ನು ಮಡಿಕೇರಿಯ ಜನರಲ್ ತಿಮ್ಮಯ್ಯ ವೃತ್ತದ ಬಳಿ ಬರಮಾಡಿಕೊಂಡರು.

ಮಡಿಕೇರಿ,ಸೆ.9– ಅತ್ಯಂತ ಪ್ರಾಚೀನವಾದ 'ಕನ್ನಡ' ಭಾಷೆಯನ್ನು ಈ ನೆಲದ ಪ್ರತಿಯೊಬ್ಬರೂ ತಮ್ಮ ಬದುಕಿನ ಉಸಿರಾಗಿ ಅಳವಡಿಸಿಕೊಳ್ಳಬೇಕೆಂದು ಕೊಡಗು ಜಿಲ್ಲಾ ಅಪರ ಜಿಲ್ಲಾಧಿಕಾರಿ ಎಂ.ಐಶ್ವರ್ಯ ಕರೆ ನೀಡಿದ್ದಾರೆ.


ಮೈಸೂರು ರಾಜ್ಯ 'ಕರ್ನಾಟಕ' ಎಂದು ನಾಮಕರಣಗೊಂಡು 50 ವರ್ಷ ತುಂಬಿದ ಈ ಸಂದರ್ಭದಲ್ಲಿ ನಮ್ಮ ನಾಡಿನ ಬಹು ಸಂಸ್ಕೃತಿಯನ್ನು ಸಾರುವ 'ಕರ್ನಾಟಕ ಸುವರ್ಣ ಸಂಭ್ರಮ–50 'ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ' ಎಂಬ ಘೋಷವಾಕ್ಯದಡಿ ರಾಜ್ಯದ ವಿವಿಧ ಜಿಲ್ಲೆಗಳನ್ನು ಹಾದು ಕೊಡಗಿನ ಕೇಂದ್ರ ಸ್ಥಾನವಾದ ಮಡಿಕೇರಿಗೆ ಆಗಮಿಸಿದ ಸಂದರ್ಭ ಕನ್ನಡ ಜ್ಯೋತಿ ರಥವನ್ನು ನಗರದ ಜನರಲ್ ತಿಮ್ಮಯ್ಯ ವೃತ್ತದ ಬಳಿ ಗೌರವಯುತವಾಗಿ ಬರಮಾಡಿಕೊಳ್ಳಲಾಯಿತು.

ಗಣೇಶೋತ್ಸವದಂದು ದಕ್ಷಿಣ ಕೊಡಗಿನ ಆನೆಚೌಕೂರು ಮೂಲಕ ಕೊಡಗನ್ನು ಪ್ರವೇಶಿಸಿದ ಕನ್ನಡ ರಥಯಾತ್ರೆ ಪೊನ್ನಂಪೇಟೆ, ವಿರಾಜಪೇಟೆ ತಾಲೂಕನ್ನು ಹಾದು ಇಂದು ಬೆಳಗ್ಗೆ ಮಡಿಕೇರಿಗೆ ಆಗಮಿಸಿತು. ಕನ್ನಡ ಧ್ವಜದೊಂದಿಗೆ ಅಧಿಕಾರಿಗಳು, ಕಸಾಪ ಪದಾಧಿಕಾರಿಗಳು ಸದಸ್ಯರು ಹಾಗೂ ನಾಗರಹೊಳೆಯ ಗಿರಿಜನ ಅಭಿವೃದ್ಧಿ ಸಂಘದ ಕಲಾತಂಡದ ಸದಸ್ಯರು ವಾದ್ಯ ಮತ್ತು ಕುಣಿತಗಳೊಂದಿಗೆ ಕನ್ನಡ ರಥವನ್ನು ಜ.ತಿಮ್ಮಯ್ಯ ವೃತ್ತದಿಂದ ಹಳೇ ಖಾಸಗಿ ಬಸ್ ನಿಲ್ದಾಣದವರೆಗೆ ಮೆರವಣಿಗೆ ನಡೆಸಿದರು. ಬಳಿಕ ಶಾಲಾ ವಿದ್ಯಾರ್ಥಿಗಳೊಂದಿಗೆ ಇದೇ ಮಾರ್ಗದಲ್ಲಿ ಹಿಂತೆರಳಿ ಜ.ತಿಮ್ಮಯ್ಯ ವೃತ್ತದಲ್ಲಿ ಜಾಥಾ ಕೊನೆಗೊಂಡಿತು. ಮಂಗಳವಾರ ರಥಯಾತ್ರೆ ಕುಶಾಲನಗರದದತ್ತ ತೆರಳಲಿದೆ.

ಈ ಸಂದರ್ಭ ಮಾತನಾಡಿದ ಅಪರ ಜಿಲ್ಲಾಧಿಕಾರಿ ಎಂ.ಐಶ್ವರ್ಯ, ಕನ್ನಡ ನಾಡು ಬಹು ಸಂಸ್ಕೃತಿಯ ಶ್ರೀಮಂತ ನಾಡಾಗಿದೆ. ಇಲ್ಲಿನ ಕನ್ನಡ ಭಾಷೆಯನ್ನು ಪ್ರತಿಯೊಬ್ಬರು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವ ಮೂಲಕ, ಭಾಷಾ ಬೆಳವಣಿಗೆಗೆ ಮುಂದಾಗಬೇಕೆನ್ನುವ ಚಿಂತನೆಗಳಡಿ ಕನ್ನಡ ಜ್ಯೋತಿ ರಥ ಯಾತ್ರೆ ನಡೆಯುತ್ತಿರುವುದಾಗಿ ತಿಳಿಸಿದರು.

ಈ ಸಂದರ್ಭ ತಹಶೀಲ್ದಾರ್ ಪ್ರವೀಣ್, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಟಿ.ಪಿ. ರಮೇಶ್, ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಎಸ್.ಐ. ಮುನೀರ್ ಅಹಮ್ಮದ್, ರೇವತಿ ರಮೇಶ್, ಮಡಿಕೇರಿ ತಾಲೂಕು ಕಸಾಪ ಅಧ್ಯಕ್ಷೆ ಕಡ್ಲೇರ ತುಳಸಿ ಮೋಹನ್, ನೆರವಂಡ ಉಮೇಶ್, ತಾಲೂಕು ಕಸಾಪ ನಿಕಟ ಪೂರ್ವ ಅಧ್ಯಕ್ಷ ಅಂಬೆಕಲ್ಲು ನವೀನ್, ಸಿದ್ದರಾಜು ಬೆಳ್ಳಪ್ಪ ಸೇರಿದಂತೆ ಅಧಿಕಾರಿಗಳು, ಕನ್ನಡಾಭಿಮಾನಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಗೃಹ ರಕ್ಷಕರ ತರಬೇತಿಯಲ್ಲಿ ಕೊಡಗಿನ ಕುವರಿ ಲವಿಗೆ ಬೆಳ್ಳಿ ಪದಕ



ಮಡಿಕೇರಿಯಲ್ಲಿ ಗೃಹ ರಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಲವಿ ಅವರನ್ನು ನಗರ ಸಂಚಾರ ಪೊಲೀಸ್ ಠಾಣೆ ವತಿಯಿಂದ ಸನ್ಮಾನಿಸಿದರು.

ಮಡಿಕೇರಿ,ಸೆ.9– ಗೃಹ ರಕ್ಷಕ ದಳದ ಮಹಿಳಾ ಸಿಬ್ಬಂದಿಗಳಿಗೆ ಬೆಂಗಳೂರಲ್ಲಿ ಇತ್ತೀಚೆಗೆ ಆಯೋಜಿಸಲಾಗಿದ್ದ ವಿಶೇಷ ತರಬೇತಿ ಶಿಬಿರದಲ್ಲಿ ಪಾಲ್ಗೊಂಡಿದ್ದ ಮಡಿಕೇರಿಯಲ್ಲಿ ಗೃಹ ರಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಲವಿ ಅವರು ಬೆಳ್ಳಿ ಪದಕ ಪಡೆದಿದ್ದಾರೆ. ಇವರು ಮಡಿಕೇರಿ ನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಲವಿ ಅವರ ಸಾಧನೆ ಮತ್ತು ಪ್ರಾಮಾಣಿಕ ಸೇವೆಯನ್ನು ಪರಿಗಣಿಸಿ ನಗರ ಸಂಚಾರ ಠಾಣೆ ವತಿಯಿಂದ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಈ ಸಂದರ್ಭ ಸಂಚಾರ ಠಾಣಾಧಿಕಾರಿ ಶ್ರೀಧರ್, ತಮ್ಮಯ್ಯ, ಎಎಸ್ಐ ನಂದ ಐ.ಪಿ, ಸಂಚಾರಿ ಠಾಣೆ ಸಿಬ್ಬಂದಿ ಹಾಜರಿದ್ದರು.

ಗೋಣಿಕೊಪ್ಪ ದಸರಾ ಸಮಿತಿ ಅಧ್ಯಕ್ಷರಾಗಿ ಅಜ್ಜಿಕುಟ್ಟೀರ ರಿಶಿ ಕಾವೇರಪ್ಪ


ರಿಶಿ ಕಾವೇರಪ್ಪ


ಬಿ.ಎನ್. ಸುದರ್ಶನ್

ಗೋಣಿಕೊಪ್ಪ: ಗೋಣಿಕೊಪ್ಪ ದಸರಾ ನಾಡ ಹಬ್ಬ ಸಮಿತಿ ಅಧ್ಯಕ್ಷರಾಗಿ ಅಜ್ಜಿಕುಟ್ಟೀರ ರಿಶಿ ಕಾವೇರಪ್ಪ ಆಯ್ಕೆಯಾಗಿದ್ದಾರೆ.

ಸಮಿತಿ ಸಭಾಂಗಣದಲ್ಲಿ ಕಂಜಿತಂಡ ಪ್ರವೀಣ್ ಅಧ್ಯಕ್ಷತೆ ಆಯೋಜಿಸಿದ್ದ ಸಭೆಯಲ್ಲಿ ಈ ಆಯ್ಕೆ ನಡೆಯಿತು. ಗೌರವ ಅಧ್ಯಕ್ಷರಾಗಿ ಪ್ರಭಾಕರ್ ನೆಲ್ಲಿತ್ತಾಯ, ಕಂಜಿತಂಡ ಪ್ರವೀಣ್, ಕಾರ್ಯದರ್ಶಿಯಾಗಿ ಬಿ.ಎನ್. ಸುದರ್ಶನ್, ಉಪಾಧ್ಯಕ್ಷರಾಗಿ ಸುನಿಲ್ ಪ್ರಭಾಕರ್, ಖಜಾಂಚಿಯಾಗಿ ಶ್ರೀಜ ಕುಟ್ಟಿ ಆಯ್ಕೆಯಾದರು. ಆರ್ಥಿಕ ಸಮಿತಿ, ಸ್ತಬ್ದ ಚಿತ್ರ ಸಮಿತಿ ರಚಿಸಲಾಯಿತು.

ಕೊಡಗು ವಿವಿ ಪ್ರಶಿಕ್ಷಣಾರ್ಥಿಗಳ ಫಲಿತಾಂಶ ಪ್ರಕಟ

ಕುಶಾಲನಗರ: ಕೊಡಗು ವಿಶ್ವವಿದ್ಯಾಲಯದ ಸಂಯೋಜಿತ ಮಹಾವಿದ್ಯಾಲಯಗಳಾದ ಸರ್ವೋದಯ ಬಿಎಡ್ ಕಾಲೇಜು ಮತ್ತು ಸಾಯಿ ಶಂಕರ ಬಿಎಡ್ ಕಾಲೇಜುಗಳಲ್ಲಿ 2024–25ನೇ ಶೈಕ್ಷಣಿಕ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ಬಿಎಡ್ ಪ್ರಶಿಕ್ಷಣಾರ್ಥಿಗಳ ಪ್ರಥಮ ಸೆಮಿಸ್ಟರ್ ಫಲಿತಾಂಶವನ್ನು ಸೋಮವಾರದಂದು ಪ್ರಕಟಿಸಲಾಗಿದೆ.

ಕೊಡಗು ವಿಶ್ವವಿದ್ಯಾಲಯವು ಸ್ನಾತಕ ಪದವಿಗಳ ಫಲಿತಾಂಶವನ್ನು ಅತ್ಯಂತ ಕಡಿಮೆ ಅವಧಿಯಲ್ಲಿ ಪ್ರಕಟಿಸಿದಂತೆಯೇ ಬಿಎಡ್ ಪ್ರಶಿಕ್ಷಣಾರ್ಥಿಗಳ ಫಲಿತಾಂಶವನ್ನು ಯುಜಿಸಿ ನಿಯಮಾನುಸಾರ ಪ್ರಕಟಿಸುವ ಮೂಲಕ ಪರೀಕ್ಷಾ ಮತ್ತು ಮೌಲ್ಯಮಾಪನ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದೆ.ಕುಲಪತಿ ಪ್ರೊ. ಅಶೋಕ ಸಂಗಪ್ಪ ಆಲೂರರವರು ಕೊಡಗು ವಿವಿ ಚೊಚ್ಚಲ ಪ್ರಶಿಕ್ಷಣಾರ್ಥಿಗಳ ಫಲಿತಾಂಶವನ್ನು ಪ್ರಕಟಿಸಿದರು.

ಇದೇ ಸಂದರ್ಭದಲ್ಲಿ ಕೊಡಗು ವಿವಿ ಕುಲಸಚಿವ(ಮೌಲ್ಯಮಾಪನ) ಪ್ರೊ.ಎಂ ಸುರೇಶ್, ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳ ಸಂಯೋಜಕ ಪ್ರೊ. ರವಿಶಂಕರ್, ಯಯುಸಿಎಂಎಸ್ ನೋಡಲ್ ಅಧಿಕಾರಿ ಎಚ್.ಎಸ್.ಗಗನ್ ಉಪಸ್ಥಿತರಿದ್ದರು.

ಇಂದು ತಾಲೂಕು ಮಟ್ಟದ ಅಂತರ ಪ್ರಾಥಮಿಕ, ಪ್ರೌಢಶಾಲಾ ಕೀಡಾಕೂಟ

ಮಡಿಕೇರಿ, ಸೆ.9– ಕೊಡಗು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಹಾಗೂ ಕೋಡಂಬೂರು ಜ್ಞಾನಜ್ಯೋತಿ ಎಜುಕೇಷನ್ ಸೊಸೈಟಿ ಇವರ ಸಂಯುಕ್ತ ಆಶ್ರಯದಲ್ಲಿ ಮಡಿಕೇರಿ ತಾಲೂಕು ಮಟ್ಟದ ಅಂತರ ಪ್ರಾಥಮಿಕ ಹಾಗೂ ಪ್ರೌಢಶಾಲಾ ಬಾಲಕ, ಬಾಲಕಿಯರ 2024–25 ನೇ ಸಾಲಿನ ಕ್ರೀಡಾಕೂಟವು ಸೆ.10 ರಂದು ಬೆಳಗ್ಗೆ 9.30 ಗಂಟೆಗೆ ಮೂರ್ನಾಡು ವಿದ್ಯಾಸಂಸ್ಥೆ ಕ್ರೀಡಾಂಗಣದಲ್ಲಿ ನಡೆಯಲಿದೆ.

ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು, ಶಾಸಕರಾದ ಡಾ.ಮಂತರ್ ಗೌಡ, ಎ.ಎಸ್.ಪೊನ್ನಣ್ಣ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ವಿಧಾನಪರಿಷತ್ ಸದಸ್ಯರಾದ ಎಂ.ಪಿ.ಸುಜಾ ಕುಶಾಲಪ್ಪ ಎಸ್.ಎಲ್. ಭೋಜೇಗೌಡ, ಡಾ.ಧನಂಜಯ ಸರ್ಜಿ, ಮೂರ್ನಾಡು ಗ್ರಾಪಂ ಅಧ್ಯಕ್ಷ ಬಿ.ಎಸ್. ಕುಶನ್ ರೈ, ಉಪಾಧ್ಯಕ್ಷೆ ಬಿ.ಎಸ್.ರೇಖಾ, ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎನ್.ವಿ.ಪ್ರಸಾದ್, ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿ.ಪಂ ಸಿಇಒ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಕೋಡಂಬೂರು ಜ್ಞಾನ ಜ್ಯೋತಿ ಎಜುಕೇಷನ್ ಸೊಸೈಟಿಯ ಅಧ್ಯಕ್ಷರಾದ ಮುಕ್ಕಾಟೀರ ರವಿ ಚೀಯಣ್ಣ, ಮೂರ್ನಾಡು ವಿದ್ಯಾ ಸಂಸ್ಥೆಯ ಅಧ್ಯಕ್ಷ ಡಾ.ಚೌರೀರ ಜಗತ್ ತಿಮ್ಮಯ್ಯ, ಜ್ಞಾನಜ್ಯೋತಿ ಎಜುಕೇಷನ್ ಸೊಸೈಟಿಯ ನಿವೃತ್ತ ಮುಖ್ಯೋಪಾಧ್ಯಾಯರಾದ ಶೀಲಾ ಅಬ್ದುಲ್ಲಾ ಇತರರು ಪಾಲ್ಗೊಳ್ಳಲಿದ್ದಾರೆ.

ಸೆ.14, 15 ರಂದು ಗಗನಚುಕ್ಕಿ ಜಲಪಾತೋತ್ಸವ



ಮಂಡ್ಯ,ಸೆ.9–ಮಂಡ್ಯ ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆ ಹಾಗೂ ಕನ್ನಡ ಸಂಸ್ಕೃತಿ ಇಲಾಖೆಯವರ ಸಂಯುಕ್ತಾಶ್ರಯದಲ್ಲಿ ಗಗನಚುಕ್ಕಿ ಜಲಪಾತೋತ್ಸವ ಕಾರ್ಯಕ್ರಮವನ್ನು ಸೆಪ್ಟಂಬರ್ 14 ಮತ್ತು 15 ರಂದು ಬೆಳಿಗ್ಗೆ 11 ರಿಂದ ರಾತ್ರಿ 10.30 ಗಂಟೆಯವರೆಗೆ ಮಳವಳ್ಳಿ ತಾಲೂಕಿನ ಗಗನಚುಕ್ಕಿ ಜಲಪಾತದಲ್ಲಿ ಹಮ್ಮಿಕೊಳ್ಳಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಕೇಂದ್ರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಕಾನೂನು, ಪ್ರವಾಸೋದ್ಯಮ ಇಲಾಖೆ ಸಚಿವ ಹೆಚ್.ಕೆ.ಪಾಟೀಲ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ಸಂಗಪ್ಪ ತಂಗಡಗಿ ಹಾಗೂ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಶಾಸಕ ಎ.ಬಿ.ರಮೇಶ್ ಬಂಡಿಸಿದ್ದೇಗೌಡ ಅವರುಗಳು ಕಾರ್ಯಕ್ರಮದ ಗೌರವ ಉಪಸ್ಥಿತಿ ವಹಿಸುವರು.

ಮಳವಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಶಾಸಕರಾದ ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ವಿವೇಕಾನಂದ, ಪಿ.ರವಿಕುಮಾರ್, ದರ್ಶನ್ ಪುಟ್ಟಣ್ಣಯ್ಯ, ಹೆಚ್.ಟಿ.ಮಂಜು, ಕೆ.ಎಂ. ಉದಯ, ಮಂಡ್ಯ ಮೈಶುಗರ್ ಕಂಪನಿ ಲಿಮಿಟೆಡ್‌ನ ಅಧ್ಯಕ್ಷ ಸಿ.ಡಿ.ಗಂಗಾಧರ್, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ನಯೀಮ್ ಖಾನ್, ಮಳವಳ್ಳಿ ತಾಲೂಕಿನ ಹೊಸಹಳ್ಳಿ ಗ್ರಾಮ ಪಂಚಾಯಿತಿಯ ಅಧ್ಯಕ್ಷೆ ಮಹದೇವಮ್ಮ ಅವರುಗಳು ಕಾರ್ಯಕ್ರಮಕ್ಕೆ ಆಗಮಿಸಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ಪ್ರವಾಸೋದ್ಯಮ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಸಲ್ಮಾ.ಕೆ ಫಾಹಿಮ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಡಾ.ಎಂ.ಎನ್.ಅಜಯ್ ನಾಗಭೂಷಣ್, ಮಂಡ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ವಿ.ಅನ್ಬುಕುಮಾರ್, ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕ ಡಾ ರಾಜೇಂದ್ರ.ಕೆ.ವಿ ಹಾಗೂ ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಡಾ.ಕೆ ಧರಣೀದೇವಿ ಮಾಲಗತ್ತಿ ಅವರುಗಳು ಕಾರ್ಯಕ್ರಮಕ್ಕೆ ಆಗಮಿಸಲಿದ್ದಾರೆ.

ನಾಳೆ ಹಿರಿಯ ನಾಗರಿಕರಿಗಾಗಿ ಜಿಲ್ಲಾ ಮಟ್ಟದಲ್ಲಿ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆ


ಮಂಡ್ಯ,ಸೆ.9– ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಅಂಗವಾಗಿ 2024–25 ನೇ ಸಾಲಿನ ಸೆ.11 ರಂದು ಹಿರಿಯ ನಾಗರಿಕರಿಗಾಗಿ ಜಿಲ್ಲಾ ಮಟ್ಟದಲ್ಲಿ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.

ಕ್ರೀಡಾ ಸ್ಪರ್ಧೆಗಳಾದ ಮ್ಯೂಸಿಕಲ್ ಚೇರ್, ಬಿರುಸಿನ ನಡಿಗೆ, ಬಕೆಟ್‌ನಲ್ಲಿ ಬಾಲ್ ಎಸೆಯುವುದು ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಾದ ಗಾಯನ ಸ್ಪರ್ಧೆ, ಏಕಪಾತ್ರಾಭಿನಯ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು (ಪುರುಷರು ಹಾಗೂ ಮಹಿಳೆಯರು) ಇದರಲ್ಲಿ ಭಾಗವಹಿಸಬಹುದಾಗಿದೆ.

ಆಸಕ್ತ ಹಿರಿಯ ನಾಗರಿಕರು ಸೆ.11 ಬೆಳಗ್ಗೆ 10 ಗಂಟೆಗೆ ಸರ್.ಎಂ.ವಿ ಒಳಾಂಗಣ ಕ್ರೀಡಾಂಗಣ ಆವರಣ, ಕಲಾಮಂದಿರ ಹಿಂಭಾಗ ಮಂಡ್ಯ ಇಲ್ಲಿಗೆ ಹಾಜರಾಗಲು ಕೋರಿದೆ. ಭಾಗವಹಿಸುವ ಹಿರಿಯ ನಾಗರಿಕರು ಅವರ ಗುರುತಿನ ಚೀಟಿ/ವಯಸ್ಸಿನ ದಾಖಲೆ ಸಹಿತ ಹಾಜರಾಗುವುದು. ಹೆಚ್ಚಿನ ವಿವರಗಳಿಗೆ ಮೊ.ಸಂ. 7026223664 ಸಂಪರ್ಕಿಸಬಹುದು.

ಹೆಣ್ಣು ಭ್ರೂಣ ಹತ್ಯೆ ಪ್ರಕರಣ: ಮತ್ತೆ ಮೂವರ ಬಂಧನ

ಬಂಧಿತರ ಸಂಖ್ಯೆ 18ಕ್ಕೆ ಏರಿಕೆ


ಶಂಕರ್


ನವೀನ್


ಜಬ್ಬರ್

ಮಂಡ್ಯ: ಪಾಂಡವಪುರ, ಬೆಳ್ಳೂರು, ಮೇಲುಕೋಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೆ ಮೂವರನ್ನು ಪೊಲೀಸರು ಬಂಧಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ 15 ಮಂದಿ ಆರೋಪಿಗಳನ್ನು ಬಂಧಿಸಲಾಗಿದ್ದು, ಇದೀಗ ಮತ್ತೆ ಮೂವರನ್ನು ವಶಕ್ಕೆ ಪಡೆದಿದ್ದು, ಘಟನೆ ಸಂಬಂಧ ಬಂಧಿತರ ಸಂಖ್ಯೆ 18ಕ್ಕೇರಿದೆ. ಕಳೆದ ಭಾನುವಾರ ಆರೋಪಿಗಳಾದ ಶಂಕರ್, ನವೀನ್ ಮತ್ತು ಜಬ್ಬರ್ ಎಂಬುವವರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ಬಂಧಿತರಿಂದ ಕೃತ್ಯಕ್ಕೆ ಉಪಯೋಗಿಸಲಾಗಿದ್ದ ತವೇರಾ ಕಾರನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ.

ನೀರಾವರಿ ನಿಗಮದ ಅಧಿಕಾರಿಗಳ ಲೋಪದಿಂದ ಕಡೆ ಭಾಗಕ್ಕೆ ನೀರಿಲ್ಲ

ಮಾಜಿ ಶಾಸಕ ಅನ್ನದಾನಿ ಆರೋಪ

ಮಳವಳ್ಳಿ,ಸೆ.9– ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಸರಿಯಾಗಿ ನಿರ್ವಹಣೆ ಮಾಡದ ಹಿನ್ನೆಲೆಯಲ್ಲಿ ತಾಲೂಕಿನಲ್ಲಿ ನೀರಿನ ಸಮಸ್ಯೆ ಉದ್ಭವವಾಗಿದೆ ಎಂದು ಮಾಜಿ ಶಾಸಕ ಡಾ.ಕೆ.ಅನ್ನದಾನಿ ಆರೋಪಿಸಿದರು.

ಸೋಮವಾರ ತಾಲೂಕಿನ ತಳಗವಾದಿ, ಹೂವಿನಕೊಪ್ಪಲು, ರಾಗಿಬೊಮ್ಮನಹಳ್ಳಿ, ಮಾರೇಹಳ್ಳಿ, ಹೊಸಹಳ್ಳಿ, ಕಂದೇಗಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆರೆ–ಕಟ್ಟೆಗಳು ಹಾಗೂ ನಾಲೆಗಳನ್ನು ವೀಕ್ಷಿಸಿದ ಸಂದರ್ಭದಲ್ಲಿ ಮಾತನಾಡಿದ ಅವರು, ಮುಂದಿನ 15 ದಿನದೊಳಗೆ ಭತ್ತದ ನಾಟಿಯಾಗದಿದ್ದರೆ ಸಮರ್ಪಕವಾಗಿ ಬೆಳೆ ಬರುವುದಿಲ್ಲ, ಹೀಗಾಗಿ ಆಗಿರುವ ಲೋಪದೋಷಗಳನ್ನು ಸರಿಪಡಿಸಿಕೊಂಡು ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಜವಾಬ್ದಾರಿಯಿಂದ ಕೆಲಸ ಮಾಡಬೇಕು.

ನಾಲೆಗಳಲ್ಲಿ ನೀರಲ್ಲದೇ ರೈತರು ಬೆಳೆ ಬೆಳೆಯಲು ಸಾಧ್ಯವಾಗುತ್ತಿಲ್ಲ, ನಾಲೆಗಳಲ್ಲಿ ಗಿಡಗಂಟಿಗಳನ್ನು ತೆಗೆಯುವುದು ಹಾಗೂ ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡುವಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ ಎಂದು ಅರೋಪಿಸಿದರು.

ಸಂದರ್ಭದಲ್ಲಿ ಜೆಡಿಎಸ್ ಮುಖಂಡರಾದ ಚಂದಹಳ್ಳಿ ಶ್ರೀಧರ್, ಹನುಮಂತು, ಜಯರಾಜು, ಮಹೇಶ್ ಇನ್ನಿತರರಿದ್ದರು.

ಅಲಂಬಾಡಿ ಕಾವಲು ಡೇರಿ ಅಧ್ಯಕ್ಷರಾಗಿ ದಿವಾಕರ್.ಕೆ.ಮಾಸ್ತಿಗೌಡ


ಅಲಂಬಾಡಿ ಕಾವಲು ಡೇರಿ ಅಧ್ಯಕ್ಷ, ದಿವಾಕರ್ ಕೆ.ಮಾಸ್ತಿಗೌಡ, ಉಪಾಧ್ಯಕ್ಷ ಅಬ್ದುಲ್ ಪಜ್ಲು, ಆಡಳಿತ ಮಂಡಳಿಯ ನಿರ್ದೇಶಕರು ಹಾಗೂ ಗ್ರಾಮದ ಮುಖಂಡರೊಂದಿಗೆ ವಿಜಯೋತ್ಸವ ಆಚರಿಸಿದರು.

ಕೆಆರ್.ಪೇಟೆ,ಸೆ.9– ನೂತನವಾಗಿ ಆರಂಭಿಸಲಾದ ಕೆ.ಆರ್.ಪೇಟೆ ತಾಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಅಲಂಬಾಡಿ ಕಾವಲು ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ದಿವಾಕರ್ ಕೆ. ಮಾಸ್ತಿಗೌಡ ಹಾಗೂ ಉಪಾಧ್ಯಕ್ಷರಾಗಿ ಅಬ್ದುಲ್ ಪಜ್ಲು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಮಾಜ ಸೇವಕ ಆರ್‌ಟಿಓ ಅಧಿಕಾರಿಗಳ ಸಂಘದ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ್ ಹಾಗೂ ಗ್ರಾಮದ ಹಿರಿಯ ಮುಖಂಡರು, ಯುವಕರ ಸಹಕಾರದಿಂದ ಅಲಂಬಾಡಿ ಕಾವಲು ಗ್ರಾಮದಲ್ಲಿ ನೂತನವಾಗಿ ಅಸ್ತಿತ್ವಕ್ಕೆ ಬಂದ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಈಗಾಗಲೇ 13 ನಿರ್ದೇಶಕರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿತ್ತು. ಅಧ್ಯಕ್ಷ ಸ್ಥಾನ ಬಯಸಿ ದಿವಾಕರ್ ಕೆ.ಮಾಸ್ತಿಗೌಡ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಅಬ್ದುಲ್‌ಪಜ್ಲು ಒಮ್ಮತದ ಅಭ್ಯರ್ಥಿಗಳಾಗಿ ನಾಮಪತ್ರ ಸಲ್ಲಿಸಿದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿ ಭರತ್‌ಕುಮಾರ್ ಅವಿರೋಧ ಆಯ್ಕೆಯನ್ನು ಘೋಷಿಸಿದರು.

ಈ ಸಂದರ್ಭದಲ್ಲಿ ತಾ.ಪಂ. ಮಾಜಿ ಸದಸ್ಯ ಸಂಜೀವಪ್ಪ, ನಂಜುಂಡೇಗೌಡ, ಸಿದ್ದಿಕ್ ಅಹ್ಮದ್, ಬಸವರಾಜು, ಗ್ರಾಪಂ ಸದಸ್ಯ ಎ.ರಾಜು, ಗೌಸ್ ಅಹಮದ್, ರವಿ, ನಾಗರಾಜು, ವಿಜಯ್ ಕುಮಾರ್, ಸುರೇಶ್, ಚಂದ್ರಶೇಖರ್, ಜ್ಞಾನನಂದ, ಮಹೇಶ್, ಪ್ರಮೋದ್ ಕುಮಾರ್, ಸಂಘದ ನಿರ್ದೇಶಕರಾದ ಮೆಹಬೂಬ್ ಖಾನ್, ಮಂಜುನಾಥ್, ಕೃಷ್ಣೇ ಗೌಡ, ಚನ್ನಕೃಷ್ಣಯ್ಯ, ಪ್ರಭಾಕರ್, ಯಶೋಧಮ್ಮ, ಭಾನುಮತಿ, ಮೋಹನ್, ಕೃಷ್ಣೇಗೌಡ, ಸಂತೋಷ ಕುಮಾರ್, ಜಗದೀಶ್ ಸೇರಿದಂತೆ ಹಲವಾರು ಗ್ರಾಮದ ಮುಖಂಡರು ಭಾಗವಹಿಸಿದ್ದರು.

ಗುಣಮಟ್ಟದ ಹಾಲು ಪೂರೈಕೆಯಿಂದ ಹೆಚ್ಚಿನ ಲಾಭ ಪಡೆದುಕೊಳ್ಳಿ

ಚಾಮುಲ್ ನಿರ್ದೇಶಕ ಎಚ್.ಎಸ್.ಬಸವರಾಜು ಸಲಹೆ



ಮೂಡ್ನಾಕೂಡು ಹಾಲು ಉತ್ಪಾದಕರ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಚಾಮುಲ್ ನಿರ್ದೇಶಕ ಎಚ್.ಎಸ್. ಬಸವರಾಜು ಮಾತನಾಡಿದರು.

ಚಾಮರಾಜನಗರ, ಸೆ.9– ಮುಡ್ನಾಕೂಡು ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘವು ಹಾಲು ಉತ್ಪಾದಕರು ಗುಣಮಟ್ಟದ ಹಾಲು ಸರಬರಾಜು ಮಾಡಿದ ಪರಿಣಾಮ 8,31,720 ರೂ.ಗಳ ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಎಂ.ಬಿ.ಬಾಲಸುಬ್ರಮಣ್ಯ ಸ್ವಾಮಿ ತಿಳಿಸಿದರು.

ತಾಲೂಕಿನ ಮುಡ್ನಾಕೂಡು ಹಾಲು ಉತ್ಪಾದಕರ ಸಹಕಾರ ಸಂಘದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗ್ರಾಮದ ಸಹಕಾರ ಸಂಘವು ಬಿಎಂಸಿ ಕೇಂದ್ರವಾಗಿದ್ದು, ಪ್ರಸಕ್ತ ವರ್ಷದಲ್ಲಿ ಹಾಲು ಉತ್ಪಾದಕರು ಗುಣಮಟ್ಟದ ಹಾಲು ಸರಬರಾಜು ಮಾಡಿರುವುದು ಹಾಗೂ ನೌಕರರ ಪರಿಶ್ರಮದಿಂದ ಹೆಚ್ಚಿನ ಲಾಭ ಗಳಿಸಲು ಸಾಧ್ಯವಾಗಿದೆ. ಹಾಲು ಉತ್ಪಾದಕ ಸದಸ್ಯರಿಗೆ 3.91,300 ರೂ. ಬೋನಸ್ ಅನ್ನು ಇನ್ನು ಹದಿನೈದು ದಿನಗಳಲ್ಲಿ ವಿತರಣೆ ಮಾಡಲಾಗುವುದು. ಮುಂದಿನ ವರ್ಷವು ಇದಕ್ಕಿಂತ ಹೆಚ್ಚಿನ ಹಾಲು ಸರಬರಾಜು ಮಾಡಿದರೆ ಇನ್ನು ಹೆಚ್ಚಿನ ಲಾಭ ಪಡೆದುಕೊಳ್ಳಲು ಸಾಧ್ಯ ಎಂದರು.

ಒಕ್ಕೂಟದ ಸೌಲಭ್ಯ ಪಡೆದುಕೊಳ್ಳಿ: ಚಾಮುಲ್ ಹಿರಿಯ ನಿರ್ದೇಶಕ ಎಚ್.ಎಸ್. ಬಸವರಾಜು ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿ, ಜಿಲ್ಲೆಯಲ್ಲಿ ಗುಣಮಟ್ಟದ ಹಾಲು ಪೂರೈಕೆ ಮಾಡಿದ್ದರಿಂದ ಹೆಚ್ಚಿನ ಲಾಭ ಬಂದಿದೆ. ಇದೇ ರೀತಿ ಒಕ್ಕೂಟ ಹಾಗೂ ಸರ್ಕಾರ ಸವಲತ್ತುಗಳನ್ನು ಪಡೆದು ಕೊಂಡು ರೈತರು ಅಭಿವೃದ್ದಿ ಹೊಂದ ಬೇಕು. ಜಿಲ್ಲೆಯಲ್ಲಿ ಹಾಲು ಒಕ್ಕೂಟ ರಚನೆ ಯಾಗಿರುವ ಕಾರಣದಿಂದ ರೈತರು ಹಾಗೂ ನೌಕರರಿಗೆ ಹೆಚ್ಚಿನ ಲಾಭವಾಗಿದೆ. ಇದನ್ನು ಸದ್ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಹಾಲು ಉತ್ಪಾದಕರು ಹಾಗೂ ನೌಕರರು ಗುಣಮಟ್ಟಕ್ಕೆ ಹೆಚ್ಚಿನ ಒತ್ತು ನೀಡಬೇಕು ಎಂದರು.

ಮತ್ತೋರ್ವ ನಿರ್ದೇಶಕ ಸದಾಶಿವ ಮೂರ್ತಿ ಮಾತನಾಡಿ, ರೈತರು ವೈಜ್ಞಾನಿಕ ವಿಧಾನಗಳನ್ನು ಅನುಸರಿಸಿ, ಹೈನುಗಾರಿಕೆ ಮಾಡಿದರೆ, ಹಾಲನ್ನು ಡೇರಿಗೆ ಹಾಕಿ ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕು ಎಂದರು.

ಚಾಮುಲ್ ಸಹಾಯಕ ವ್ಯವಸ್ಥಾಪಕ ಡಾ.ಎನ್.ಅಮರ್ ಮಾತನಾಡಿ, ರಾಸುಗಳ ನಿರ್ವಹಣೆ ಹಾಗೂ ಹಾಲಿನಲ್ಲಿ ಜಿಡ್ಡು, ಫ್ಯಾಟ್ ಅಂಶಗಳನ್ನು ಹೆಚ್ಚಿಸುವ ಕುರಿತು ಮಾಹಿತಿಗಳನ್ನು ನೀಡಿದರು. ವೈಜ್ಞಾನಿಕ ಮಾದರಿಯಲ್ಲಿ ಹಸುಗಳನ್ನು ಸಾಕುವ ಮೂಲಕ ಹೆಚ್ಚಿನ ಲಾಭವನ್ನು ಪಡೆದುಕೊಳ್ಳಬೇಕು ಎಂದರು.

ಸಂಘದ ಕಾರ್ಯನಿರ್ವಾಹಕ ಅಧಿಕಾರಿ ಎಂ.ಎಸ್. ಬಸವಣ್ಣ ವಾರ್ಷಿಕ ವರದಿಯನ್ನು ಓದಿ ಅನುಮತಿ ಪಡೆದುಕೊಂಡರು. ಕಾರ್ಯಕ್ರಮದಲ್ಲಿ ಚಾಮುಲ್ ವಿಸ್ತರಣಾಧಿಕಾರಿ ನಂಜುಂಡಸ್ವಾಮಿ, ಸಂಘದ ಉಪಾಧ್ಯಕ್ಷ ಚಿನ್ನಸ್ವಾಮಿ, ನಿರ್ದೇಶಕರಾದ ಎಂ.ಎನ್. ಪ್ರಭುಸ್ವಾಮಿ, ಎಂ.ಎನ್. ನಟರಾಜು, ಆರ್.ಸುರೇಶ್, ಮಹೇಶ್, ಎಂ.ಸಿ. ಪ್ರಕಾಶ್, ಲೋಕೇಶ್, ಶಿವಕುಮಾರ್, ಎಂ.ಸಿ. ರಾಜು, ನಾಗಮ್ಮ, ಸುಂದ್ರಮ್ಮ, ನೌಕರರಾದ ಎಸ್.ನಾಗೇಂದ್ರ ಮಹೇಶ್, ಎಲ್. ನಟರಾಜು ಹಾಗೂ ಸಂಘದ ಸದಸ್ಯರು ಉಪಸ್ಥಿತರಿದ್ದರು.

ಹೊಂಗನೂರು ಗ್ರಾಪಂ ಅಧ್ಯಕ್ಷರಾಗಿ ರೂಪ ಮೋಹನ್ ಅವಿರೋಧ ಆಯ್ಕೆ


ಹೊಂಗನೂರು ಗ್ರಾಪಂ ಅಧ್ಯಕ್ಷರಾಗಿ ಆಯ್ಕೆಯಾದ ರೂಪ ಮೋಹನ್ ಅವರನ್ನು ಚಾಟೀಪುರ ಗ್ರಾಮಸ್ಥರು ಅಭಿನಂದಿಸಿದರು.

ಚಾಮರಾಜನಗರ, ಸೆ.9– ತಾಲೂಕಿನ ಹೊಂಗನೂರು ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ ರೂಪ ಮೋಹನ್ ಅವಿರೋಧವಾಗಿ ಆಯ್ಕೆಯಾದರು.

ಮಾಜಿ ಶಾಸಕರೂ ಆದ ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷ ಎಸ್.ಜಯಣ್ಣ ನೂತನ ಅಧ್ಯಕ್ಷರಿಗೆ ಶುಭಾಶಯ ಕೋರುವ ಮೂಲಕ ಗ್ರಾಮ ಪಂಚಾಯಿತಿ ಅಭಿವೃದ್ದಿಗೆ ಹೆಚ್ಚಿನ ಒತ್ತು ನೀಡಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಜೆ. ಯೋಗೇಶ್, ಮುಖಂಡರಾದ ವೀರಣ್ಣ, ಸಿ. ಮಹದೇವ್, ಶಂಕರ್, ಮೋಹನ್, ಉಪಾಧ್ಯಕ್ಷರಾದ ನವೀನ್, ಜಯರಾಜು, ಇರಸವಾಡಿ ಮೋಹನ್, ಸದಸ್ಯರಾದ ಮಣಿಕಂಠ, ನಿರ್ಮಲಾ ರಾಮು, ವಿಶಾಲಾಕ್ಷಿ, ರಂಗಸ್ವಾಮಿ ನಾಯಕ, ಕವಿತಾ ನಟರಾಜ್, ಶಿವಣ್ಣೇಗೌಡ, ಮಹದೇವ ಶೆಟ್ಟಿ, ಸಿದ್ದರಾಜು, ರಾಜಮ್ಮ, ಪದ್ಮಚೈತ್ರ, ನಾಗರತ್ನ, ಬಂಗಾರಸ್ವಾಮಿ, ಶೈಲಜ, ನಟರಾಜ್, ದಿವಾಕರ್ ಇತರರು ಹಾಜರಿದ್ದರು.

ಮನೆಗಳ್ಳನ ಬಂಧನ: ಚಿನ್ನಾಭರಣ, ನಗದು ವಶ

ಚಾಮರಾಜನಗರ, ಸೆ.9– ಸಂತೇಮರಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮನೆಕಳ್ಳತನ ಪ್ರಕರಣದ ಆರೋಪಿಯನ್ನು ಪತ್ತೆ ಹಚ್ಚಿ ಆತನಿಂದ 1,31,500 ರೂ. ಮೌಲ್ಯದ ಚಿನ್ನಾಭರಣ ಹಾಗೂ ನಗದನ್ನು ವಶಪಡಿಸಿಕೊಳ್ಳಲಾಗಿದೆ.

ಸಂತೇಮರಹಳ್ಳಿ ಠಾಣೆಯಲ್ಲಿ ಸೆ.7ರಂದು ದಾಖಲಾದ ಮನೆಕಳ್ಳತನ ಪ್ರಕರಣದ ಆರೋಪಿಯ ಪತ್ತೆ ಸಂಬಂಧ ಸಿಪಿಐ ಬಸವರಾಜು ಅವರ ನೇತೃತ್ವದ ತಂಡದಲ್ಲಿ ಪಿಎಸ್ಐ ಟಿ.ಎಂ. ತಾಜುದ್ದೀನ್ ಹಾಗೂ ಚಂದ್ರಶೇಖರ(ಅಪರಾಧ) ಅವರು ಸೆ.8 ರಂದು ಆರೋಪಿಯನ್ನು ವಶಕ್ಕೆ ಪಡೆದು ಕಳುವಾಗಿದ್ದ 1,31,500 ರೂ. ಮೌಲ್ಯದ 21.5 ಗ್ರಾಂ.ನ ಒಂದು ಚಿನ್ನದ ಸರ ಮತ್ತು ಡಾಲರ್, 5 ಗ್ರಾಂ.ನ ಒಂದು ಉಂಗುರ, 21,500 ರೂ. ನಗದು ಹಣ ವಶಕ್ಕೆ ಪಡೆದಿದ್ದಾರೆ. ಕಾರ್ಯಾಚರಣೆಯಲ್ಲಿ ಎಸ್.ಮಾದೇಶ, ರಮೇಶ, ಕೆ.ಜಿ.ಸುಂದ್ರಪ್ಪ ಮತ್ತು ಆರ್. ಯಶವಂತ್ ಪಾಲ್ಗೊಂಡಿದ್ದರು. ಪತ್ತೆ ಕಾರ್ಯದಲ್ಲಿ ಭಾಗವಹಿಸಿದ್ದ ಎಲ್ಲಾ ಅಧಿಕಾರಿ, ಸಿಬ್ಬಂದಿಗಳ ಕಾರ್ಯವನ್ನು ಪೊಲೀಸ್ ಅಧೀಕ್ಷಕರಾದ ಡಾ. ಬಿ.ಟಿ. ಕವಿತಾ ಪ್ರಶಂಸಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ಹಿರಿಯ ನಾಗರಿಕರಿಗೆ ಜಿಲ್ಲಾ ಮಟ್ಟದ ಕ್ರೀಡಾಕೂಟ, ಸಾಂಸ್ಕೃತಿಕ ಸ್ಪರ್ಧೆ

ಚಾಮರಾಜನಗರ: ವಿಕಲಚೇತನರ ಹಾಗೂ ಹಿರಿಯ ನಾಗರಿಕ ಸಬಲೀಕರಣ ಇಲಾಖೆ ವತಿಯಿಂದ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಅಂಗವಾಗಿ 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಜಿಲ್ಲಾ ಮಟ್ಟದ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಸೆ.10ರಂದು ಬೆಳಿಗ್ಗೆ 10 ಗಂಟೆಗೆ ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಆಯೋಜಿಸಲಾಗಿದೆ.

ವಯೋಮಿತಿ ಆಧಾರದ ಮೇಲೆ ಎರಡು ವಿಭಾಗಗಳಲ್ಲಿ ಪುರುಷ ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ಸ್ಪರ್ಧೆ ಏರ್ಪಡಿಸಲಾಗಿದೆ. 60 ರಿಂದ 70 ವರ್ಷದವರಿಗೆ ಮ್ಯೂಸಿಕಲ್ ಚೇರ್ ಮತ್ತು 60 ರಿಂದ 70 ವರ್ಷ ಮೇಲ್ಪಟ್ಟವರಿಗೆ ಬಿರುಸಿನ ನಡಿಗೆ, ಬಕೆಟ್‌ನಲ್ಲಿ ಬಾಲ್ ಎಸೆಯುವುದು ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಾದ ಗಾಯನ ಮತ್ತು ಏಕ ಪಾತ್ರಾಭಿನಯ ಸ್ಪರ್ಧೆಗಳನ್ನು ನಡೆಸಲಾಗುವುದು.

ವಿಜೇತರಾದವರಿಗೆ ಜಿಲ್ಲಾಮಟ್ಟದ ಹಿರಿಯ ನಾಗರಿಕರ ದಿನಾಚರಣೆಯಂದು ಸನ್ಮಾನಿಸಿ, ಬಹುಮಾನ ನೀಡಲಾಗುವುದು. ಮಾಹಿತಿಗಾಗಿ ದೂ.ಸಂ.08226–223688 ನ್ನು ಸಂಪರ್ಕಿಸಿ.



ಗುಂಡ್ಲುಪೇಟೆಯಲ್ಲಿ ಗಣೇಶೋತ್ಸವ

ಗುಂಡ್ಲುಪೇಟೆ ಪಟ್ಟಣದ ದ.ರಾ.ಬೇಂದ್ರೆ ನಗರದಲ್ಲಿರುವ ಶ್ರೀ ಸರ್ವಸಿದ್ಧಿ ವಿನಾಯಕ ದೇವಾಲಯದಲ್ಲಿ ಪರಿಸರ ಸ್ನೇಹಿ ಜೇಡಿಮಣ್ಣಿನ ಗೌರಿ ಮತ್ತು ಗಣಪತಿ ಮೂರ್ತಿಯನ್ನು ಪ್ರತಿಷ್ಠಾಪಿಸಿ ಪೂಜಿಸಲಾಯಿತು. ಈ ಪೂಜಾ ಕಾರ್ಯಕ್ರಮದಲ್ಲಿ ಬಡಾವಣೆಯ ನಿವಾಸಿಗಳು ಭಾಗವಹಿಸಿದ್ದರು.

ಒಂದನೇ ಪುಟದಿಂದ

ಸೆ.12ಕ್ಕೆ ಮುಂದೂಡಿಕೆ

ಮೇಲ್ಮಟ್ಟದಲ್ಲಿ ಇಡಲಾಗಿದೆ. ತನಿಖಾಧಿಕಾರಿ ತನಗೆ ಬರುವ ಮಾಹಿತಿ ಪರಿಶೀಲಿಸುತ್ತಾನೆ. ಆದರೆ, ಖಾಸಗಿ ದೂರುದಾರರ ವಿಷಯದಲ್ಲಿ ಹೀಗಾಗುವುದಿಲ್ಲ. ಎಲ್ಲಾ ನಾಗರಿಕರು ಎಲ್ಲರ ವಿರುದ್ಧ ದೂರು ನೀಡಿದರೆ ಸಮಸ್ಯೆ ಆಗಲಿದೆ. ಹೀಗಾಗಿಯೇ ಡಾ.ಅಶೋಕ್ ಪ್ರಕರಣದಲ್ಲಿ ಮಾರ್ಗಸೂಚಿ ರೂಪಿಸಲಾಗಿದೆ ಎಂದು ವಾದ ಮಂಡಿಸಿದರು.

ವರದಿಯ ಬಲವಿಲ್ಲದೆ, ರಾಜಭವನ ಅನುಮತಿ ನೀಡಿದೆ. ಮುಖ್ಯಮಂತ್ರಿ ಕೈಗೊಂಡ ನಿರ್ಧಾರ ಶಿಫಾರಸ್ಸಿನಲ್ಲಿ ಅವರ ಪಾತ್ರದ ಅಂಶವಿರಬೇಕು. 17ಎ ಅಡಿ ಅನುಮತಿ ನೀಡುವಾಗ ಕೃತ್ಯ ಕರ್ತವ್ಯದ ಭಾಗವಾಗಿತ್ತೇ ನೋಡಬೇಕು ಎಂದು, ಚಂದ್ರಬಾಬು ನಾಯ್ಡು ವರ್ಸಸ್ ಆಂಧ್ರ ಪ್ರದೇಶ ಸರ್ಕಾರ ಹಾಗೂ ಬಿ.ಎಸ್.ಯಡಿಯೂರಪ್ಪ ಪ್ರಕರಣಗಳನ್ನು ಉಲ್ಲೇಖಿಸಿದ ಅವರು ಡಿ-ನೋಟಿಫಿಕೇಷನ್ ವಿಷಯದಲ್ಲಿ ಬಿಎಸ್‌ವೈ ತೀರ್ಮಾನ ಕೈಗೊಂಡಿದ್ದರು. ಆದರೆ, ಈ ಪ್ರಕರಣದಲ್ಲಿ ಸಿದ್ದರಾಮಯ್ಯ ಯಾವುದೇ ತೀರ್ಮಾನ ಕೈಗೊಂಡಿಲ್ಲ. ರಾಜಭವನದ ಪರ ವಕೀಲರು ಮೂರು ಸಂಪುಟಗಳ ದಾಖಲೆ ನೀಡಿದ್ದಾರೆ. ಆದರೆ, ಶೋಕಾಸ್ ನೋಟಿಸ್ ನೀಡುವ ಮುನ್ನ ಪ್ರಾಥಮಿಕ ವರದಿ ಇಲ್ಲ.

17ಎ ಅಡಿ ರಾಜಭವನ ಪ್ರಾಥಮಿಕ ತನಿಖೆ ನಡೆಸಬಹುದಿತ್ತು. ಆದರೆ, ರಾಜ್ಯಪಾಲರು ತನಿಖಾಧಿಕಾರಿಯಂತೆ ವರ್ತಿಸಿದ್ದಾರೆ. ರಾಜ್ಯಪಾಲರು ಖಾಸಗಿ ದೂರುದಾರರಿಗೆ ಅವಕಾಶವನ್ನೇ ನೀಡಬಾರದಿತ್ತು. ಸಚಿವ ಸಂಪುಟದ ನಿರ್ಧಾರವನ್ನು ತಿರಸ್ಕರಿಸುವ ಅನಿಯಂತ್ರಿತ ಅಧಿಕಾರವಿಲ್ಲ. ತಿರಸ್ಕಾರಕ್ಕೂ ಮುನ್ನ ಇದರಲ್ಲಿ ಕಾರಣ ವಿವರಿಸಬೇಕು ಎಂದರು. ನಂತರ ಸ್ನೇಹಮಯಿ ಕೃಷ್ಣ ಪರ ವಕೀಲರಾದ ಲಕ್ಷ್ಮಿ ಐಯ್ಯಂಗಾರ್ ವಾದ ಮಂಡಿಸಿ, ಅರ್ಜಿದಾರರು 1996 ರಿಂದ 1999ರ ಅವಧಿಯಲ್ಲಿ ಕರ್ನಾಟಕದ ಉಪಮುಖ್ಯಮಂತ್ರಿ ಆಗಿದ್ದರು. ಆ ಸಮಯದಲ್ಲಿ ಡಿ-ನೋಟಿಫಿಕೇಷನ್ ಆಗಿದೆ, ಪುನಃ 2004ರಿಂದ 2007 ರವರೆಗೆ ಇದೇ ಹುದ್ದೆಯಲ್ಲಿದ್ದರು. ಆಗ ಭೂ ಪರಿವರ್ತನೆಯಾಗಿದೆ. 2013ರಿಂದ 2018ರವರೆಗೆ ಮುಖ್ಯಮಂತ್ರಿ ಆಗಿದ್ದಾಗ, ಭೂಸ್ವಾಧೀನಕ್ಕೆ ಪರಿಹಾರವಾಗಿ ನಿವೇಶನ ಕೋರಿ ಅರ್ಜಿ ಸಲ್ಲಿಸಲಾಗಿದೆ. 2018 ರಿಂದ 2022ರವರೆಗೆ ಸಿದ್ದರಾಮಯ್ಯ ಶಾಸಕರಾಗಿದ್ದರು. ಆ ಸಂದರ್ಭದಲ್ಲಿ ಸರ್ಕಾರಿ ಅತಿಥಿ ಗೃಹದಲ್ಲಿ ಮುಡಾದಿಂದ ಸೇಲ್ ಡೀಡ್ ನೋಂದಣಿಯಾಗಿದೆ. ಫಲಾನುಭವಿ ಉಪಮುಖ್ಯಾಧಿಕಾರಿ ಜಿಕೆಗಿಡೆ ಹೋಗಡೆ ಸೇಲ್‌ಡೀಡ್ ಮಾಡಲಾಗಿದೆ. ಸಿದ್ದರಾಮಯ್ಯ ಅಧಿಕಾರದಲ್ಲಿದ್ದಾಗಲೇ ಈ ಎಲ್ಲಾ ಚಟುವಟಿಕೆಗಳು ನಡೆದಿವೆ. ಅವರ ಪತ್ನಿಗೆ ಬೇನಾಮಿಯಾಗಿ ಆದಾಯ ಇದರಲ್ಲಿ ಇಲ್ಲ ಆದಾಯ ತೆರಿಗೆ ರಿಟರ್ನ್ಸ್ ಸಹಾ ಸಲ್ಲಿಸಿಲ್ಲ. ಹೀಗಾಗಿ ಪತ್ನಿ ಅಷ್ಟೊಂದು ಪಾಲು ಆಸ್ತಿಯಿಂದೇ ಪರಿಗಣಿಸಬೇಕು. ಅಲ್ಲದೆ, ಸಿದ್ದರಾಮಯ್ಯ ಅವರ ವಿರುದ್ಧದ ಆರೋಪಗಳಿಗೆ ಪುರಾವೆಗಳಿವೆ ಎಂದು ವಾದಿಸಿದರು.

ಸೆ.12ರವರೆಗೆ ವಿಸ್ತರಣೆ

ವಕೀಲರ ಬಗ್ಗೆ ನ್ಯಾಯಾಧೀಶರು ವಿವರ ಪಡೆದರು. ನ್ಯಾಯಾಲಯದಲ್ಲಿ ಹಾಜರಿದ್ದ ಎಸ್‌ಪಿಪಿ ಪ್ರಸನ್ನಕುಮಾರ್, ಪ್ರಕರಣಕ್ಕೆ ಸಂಬಂಧಿಸಿದ ಡಿಜಿಟಲ್ ಸಾಕ್ಷ್ಯಗಳಾದ ಹಾರ್ಡ್‌ಡಿಸ್ಕ್, ಪೆನ್‌ಡ್ರೈವ್ ಸೇರಿದಂತೆ ಒಟ್ಟು 60 ಡಿಜಿಟಲ್ ಸಾಕ್ಷ್ಯಗಳನ್ನು ನ್ಯಾಯಾಲಯಕ್ಕೆ ಸಲ್ಲಿಕೆ ಮಾಡುತ್ತಿರುವುದಾಗಿ ತಿಳಿಸಿದಾಗ, ತನಿಖಾಧಿಕಾರಿ ಎಸಿಪಿ ಚಂದನ್ ಪೆನ್‌ಡ್ರೈವ್, ಸಿಡಿ, ಡಿವಿಡಿ, ಹಾರ್ಡ್‌ಡಿಸ್ಕ್ ಕಂ ಪೆನ್‌ಡ್ರೈವ್ ಸೇರಿದಂತೆ ಒಟ್ಟು 60 ಡಿಜಿಟಲ್ ಸಾಕ್ಷ್ಯಗಳನ್ನು ಕೋರ್ಟ್‌ಗೆ ಸಲ್ಲಿಸಿದರು. ಆರೋಪಿಗಳಿಗೆ ನೀಡಬೇಕಾದ ದೋಷಾರೋಪ ಪಟ್ಟಿ ಪ್ರತಿಗಳನ್ನು ಎರಡು ದಿನಗಳಲ್ಲಿ ನೀಡುವುದಾಗಿ ನ್ಯಾಯಾಲಯಕ್ಕೆ ತಿಳಿಸಲಾಯಿತು. ಪೇಪರ್ ದೋಷಾರೋಪ ಪಟ್ಟಿ ಪ್ರತಿಗಳನ್ನು ಇಂದೇ ನೀಡಿ, ಡಿಜಿಟಲ್ ಸಾಕ್ಷ್ಯಗಳ ಪ್ರತಿಯನ್ನು ಎರಡು ವಾರಗಳಲ್ಲಿ ನೀಡುವಂತೆ ನ್ಯಾಯಾಧೀಶರು ಸೂಚಿಸಿ, ಆರೋಪಿಗಳ ನ್ಯಾಯಾಂಗ ಬಂಧನ ಅವಧಿಯನ್ನು ಈ ತಿಂಗಳ 12ರವರೆಗೆ ವಿಸ್ತರಿಸಿ ಆದೇಶ ನೀಡಿದರು.

ಬಿಜೆಪಿ ತೆಕ್ಕೆಗೆ ಚಾ.ನಗರ ನಗರಸಭೆ

ಕಾಂಗ್ರೆಸ್ 8, ಎಸ್‌ಡಿಪಿಐ 6, ಬಿಜೆಪಿ 15, ಓರ್ವ ಪಕ್ಷೇತರ ಸದಸ್ಯರಿದ್ದು, ಕಾಂಗ್ರೆಸ್, ಎಸ್‌ಡಿಪಿಐ, ಪಕ್ಷೇತರ ಸದಸ್ಯರೊಂದಿಗೆ ಸಂಸದರು ಹಾಗೂ ಶಾಸಕರು ಸೇರಿ ಕಾಂಗ್ರೆಸ್ ಬಲ 17 ಆಗಿದ್ದು, ಈ ಪಕ್ಷ ಅಧಿಕಾರಕ್ಕೇರುವ ಎಲ್ಲಾ ಸಾಧ್ಯತೆ ಇತ್ತು. ಆದರೆ ಇಂದು ಚುನಾವಣೆಗೆ 27 ಸದಸ್ಯರು ಹಾಜರಾಗಿದ್ದರು. ಕಾಂಗ್ರೆಸ್‌ನ ಆರ್.ಪಿ. ನಂಜುಂಡಸ್ವಾಮಿ, ನೀಲಮ್ಮ, ಭಾಗ್ಯಮ್ಮ ಗೈರು ಹಾಜರಾಗಿದ್ದರು. ಸಂಸದ ಸುನೀಲ್‌ಬೋಸ್, ಸ್ಥಳೀಯ ಶಾಸಕ ಸಿ.ಪುಟ್ಟರಂಗಶೆಟ್ಟಿ ಹಾಜರಾಗಿದ್ದರು. ಚುನಾವಣೆ ನಡೆದಾಗ ಬಿಜೆಪಿ 15 ಮತ, ಕಾಂಗ್ರೆಸ್ 14 ಮತಗಳು ದೊರೆತವು. ಹೀಗಾಗಿ ಚುನಾವಣಾಧಿಕಾರಿಗಳೂ ಆದ ಉಪವಿಭಾಗಾಧಿಕಾರಿ ಮಹೇಶ್, ಅಧ್ಯಕ್ಷರಾಗಿ ಸುರೇಶ್, ಉಪಾಧ್ಯಕ್ಷರಾಗಿ ಮಮತಾ ಆಯ್ಕೆಯಾಗಿದ್ದಾರೆ ಎಂದು ಘೋಷಣೆ ಮಾಡಿದರು.

ಅಡ್ಡ ಮತದಾನ: ಬಿಜೆಪಿ ಸದಸ್ಯ ಮಹದೇವಯ್ಯ ಕಾಂಗ್ರೆಸ್ ಪರವಾಗಿ ಮತ ಚಲಾಯಿಸಿದರೆ, ಕಾಂಗ್ರೆಸ್ ಸದಸ್ಯೆ ಚಂದ್ರಕಲಾ ಬಿಜೆಪಿ ಪರವಾಗಿ ಮತ ಚಲಾಯಿಸಿದರು. ಜಿಲ್ಲೆಯ ಗುಂಡ್ಲುಪೇಟೆ, ಕೊಳ್ಳೇಗಾಲ, ಯಳಂದೂರು ಸ್ಥಳೀಯ ಸಂಸ್ಥೆಗಳಲ್ಲಿ ಕಾಂಗ್ರೆಸ್ ಅಧಿಕಾರ ಹಿಡಿದಿದೆ. ಆದರೆ, ಜಿಲ್ಲಾ ಕೇಂದ್ರವಾದ ಚಾಮರಾಜನಗರ ನಗರಸಭೆಯ ಅಧಿಕಾರ ಹಿಡಿಯುವಲ್ಲಿ ಕಾಂಗ್ರೆಸ್ ವಿಫಲವಾಗಿದೆ. ಕಾಂಗ್ರೆಸ್‌ಗೆ ಸ್ವ ಪಕ್ಷದ ಮೂವರು ಸದಸ್ಯರೇ ಕೈ ಕೊಡುವ ಮೂಲಕ ಬಿಜೆಪಿಗೆ ಅಧಿಕಾರ ಸಿಗುವಂತೆ ಮಾಡಿದ್ದಾರೆ. ಈ ಮೂಲಕ ಸ್ಥಳೀಯ ಶಾಸಕ ಸಿ. ಪುಟ್ಟರಂಗಶೆಟ್ಟಿ ಮತ್ತು ಸಂಸದ ಸುನೀಲ್ ಬೋಸ್ ಅವರಿಗೆ ಮುಖ ಭಂಗವಾದಂತಾಗಿದೆ.

ವಿಜಯೋತ್ಸವ: ಬಿಜೆಪಿ ನಗರಸಭೆಯ ಅಧಿಕಾರ ಹಿಡಿಯುತ್ತಿದ್ದಂತೆ ಬಿಜೆಪಿ ಕಾರ್ಯಕರ್ತರು ಹಾಗು ಮುಖಂಡರು ನಗರಭೆ ಕಚೇರಿ ಮುಂದೆ ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಣೆ ಮಾಡಿದರು. ನೂತನ ಅಧ್ಯಕ್ಷ-ಉಪಾಧ್ಯಕ್ಷರನ್ನು ಬಿಜೆಪಿ ರಾಜ್ಯ ವಕ್ತಾರ ಅಶ್ವಥ್ ನಾರಾಯಣ್, ಕೇಂದ್ರ ಬರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ, ಜಿಲ್ಲಾಧ್ಯಕ್ಷ ಸಿ.ಎಸ್. ನಿರಂಜನ್ ಕುಮಾರ್, ಮಾಜಿ ಶಾಸಕ ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ,, ಕಾಪೋಸ್ಟ್ ಮಾಜಿ ಅಧ್ಯಕ್ಷ ಎಸ್. ಮಹದೇವಯ್ಯ, ಕಾಡಾ ಮಾಜಿ ಅಧ್ಯಕ್ಷ ನಿಜಗುಣರಾಜು, ಡಾ. ಎ.ಆರ್. ಬಾಬು ಅಭಿನಂದಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಪಿ. ವೃಷಬೇಂದ್ರಪ್ಪ, ಮುಡ್ನಾಕೂಡು ಪ್ರಕಾಶ್, ಹೊನ್ನೂರು ಮಹದೇವಸ್ವಾಮಿ, ನಟರಾಜು ಇನ್ನಿತರರಿದ್ದರು.

'ಮನೆ ಭಾಗ್ಯ' ನೀಡಿ, ಮನೆ ಮಾತಾಗಿ

ಕಾಯುತ್ತಿರುವ ನಿವೇಶನಾಕಾಂಕ್ಷಿಗಳಿಗೆ ಸ್ವಂತ ಮನೆಯಲ್ಲಿ ಬದುಕಲು ಅವಕಾಶ ನೀಡಿದಂತಾಗುತ್ತದೆ. ಇದರಿಂದ ಮುಡಾದಲ್ಲಿರುವ ಭ್ರಷ್ಟರು ಬೇರೆ ಯೋಜನೆ ರೂಪಿಸಿ ನಿವೇಶನ ಕಬಳಿಸುವುದಕ್ಕೆ ಕಡಿವಾಣ ಹಾಕಿದಂತಾಗುತ್ತದೆ. ಇದ ರಿಂದ ಮುಡಾ ಅಕ್ರಮಗಳಿಗೆ ಕಡಿವಾಣ ಹಾಕಿದಂತಾಗುತ್ತದೆ ಎಂದು ಮಾದೇಗೌಡರು ಅಭಿಪ್ರಾಯಪಟ್ಟಿದ್ದಾರೆ.

ಮುಖ್ಯಮಂತ್ರಿಯಂತಹ ಪರಮೋಚ್ಚ ಅಧಿಕಾರದಲ್ಲಿದ್ದೀರಾ, ನಿಮ್ಮ ಐದು ಗ್ಯಾರಂಟಿಗಳ ಜೊತೆಗೆ ಈ ಗ್ಯಾರಂಟಿ ಕೂಡ ನೀಡಿದರೆ ನಾಡಿನ ನಿರ್ವಸಿತ ಜನರ ನೋವು, ಹತಾಶೆ ಶಮನ ಮಾಡಿದಂತಾಗುತ್ತದೆ ಎಂದು ಸಿದ್ದರಾಮಯ್ಯ ಅವರಿಗೆ ಸಲಹೆ ನೀಡಿದ್ದಾರೆ. ಸೂರಿಲ್ಲದ ಜನರಿಗೆ ಸೂರು ನೀಡುವುದು ನಿಮ್ಮೆಲ್ಲಾ ಐದು ಭಾಗ್ಯಗಳಿಗಿಂತ ಉತ್ತಮ ವಾಗಿದೆ. ಇದನ್ನು ಮೈಸೂರಿಗೆ ಮಾತ್ರ ಸೀಮಿತಗೊಳಿಸದೆ ಇಡೀ ರಾಜ್ಯಕ್ಕೂ ವಿಸ್ತರಿಸಿ ಎಂದು ಮನವಿ ಮಾಡಿದ್ದಾರೆ.

ಮೈಸೂರಿನ ಚಾಮುಂಡಿಬೆಟ್ಟ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡಿರುವ ಹಾಗೂ ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿ ನಿರ್ಮಾಣವಾಗುತ್ತಿರುವ ವಿವೇಕ ಸ್ಮಾರಕಕ್ಕೆ ಅನುದಾನ ನೀಡಲು ಒಪ್ಪಿರುವ ನಿಮ್ಮ ಸರ್ಕಾರದ ನಿರ್ಧಾರ ಸ್ವಾಗತಾರ್ಹ ಎಂದು ಮಾದೇಗೌಡರು ತಿಳಿಸಿದ್ದಾರೆ.

ಭೂ ಚಕ್ರದ ಸುಳಿಗೆ ನೀವೇ ಸಿಲುಕಿದಂತಾಗಿದೆ

ಮುಡಾದಲ್ಲಿ ನಡೆದಿರುವ ಹಗರಣದಲ್ಲಿ ಭೂಮಾಫಿಯಾ ಕೈವಾಡವಿದೆ. ಇದರಿಂದ ಮುಖ್ಯಮಂತ್ರಿಯಾಗಿ ನೀವೇ ಭೂ ಚಕ್ರದ ಸುಳಿಗೆ ಸಿಲುಕವಂತಾಗಿದೆ ಎಂದು ಮಾದೇಗೌಡರು ಸಿದ್ದರಾಮಯ್ಯ ಅವರಿಗೆ ಹೇಳಿದ್ದಾರೆ. ಇಂತಹ ಕೆಟ್ಟ ಚಾಳಿಗೆ ನಿಮ್ಮ ಮುಖ್ಯಮಂತ್ರಿ ಪದವಿ ಹೋಗುವುದನ್ನು ತಪ್ಪಿಸಲು ಈ ಕೂಡಲೇ ಶೇಕಡ 50:50 ಅನುಪಾತದ ನಿವೇಶನ ಹಂಚಿಕೆ ರದ್ದು ಮಾಡಿ ಎಂದು ಸಲಹೆ ನೀಡಿದ್ದಾರೆ. ಮುಡಾ ಶುದ್ಧಿಕರಣ ಮಾಡುವ ನಿಟ್ಟಿನಲ್ಲಿ ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿಗಳನ್ನು ನೇಮಕ ಮಾಡಿ. ಈ ಮೂಲಕ ನಿವೇಶನರಹಿತರಿಗೆ ನಿವೇಶನ ಹಂಚಿಕೆ ಮಾಡಿ. ಸ್ವಂತ ಮನೆ ಹೊಂದುವ ಕನಸನ್ನೆ ಕಾಣದ ಬಡ ಜನರು ನೆಮ್ಮದಿಯ ಸೂರು ಕಟ್ಟಿಕೊಳ್ಳುವಂತಾಗಲಿ ಎಂದು ಮಾದೇಗೌಡರು ಸಲಹೆ ನೀಡಿದ್ದಾರೆ.

ಮುಡಾ ಹಗರಣ ನಿಮಗೆ ಶಾಪವಲ್ಲ, ವರ

ಮುಡಾ ಹಗರಣವನ್ನು ಶಾಪವೆಂದು ಭಾವಿಸದೆ ವರವೆಂದು ಪರಿಗಣಿಸಿ ಎಂದು ಮಾದೇಗೌಡರು ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಸಲಹೆ ನೀಡಿದ್ದಾರೆ.

ಮುಡಾದಲ್ಲಿ ಆಗಿರುವ ಎಲ್ಲಾ ಹಗರಣಗಳನ್ನು ತನಿಖೆ ಮೂಲಕ ಸರಿಪಡಿಸಿ, ಶೇಕಡ 50:50 ಅನುಪಾತದ ನಿವೇಶನ ಸೇರಿದಂತೆ ಅಕ್ರಮ ನಿವೇಶನಗಳ ಹಂಚಿಕೆಯನ್ನು ವಾಪಾಸು ಪಡೆಯಿರಿ. ಇದನ್ನು ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡಿ. ಇದರಿಂದ ನಿವೇಶನಗಳನ್ನು ಅಕ್ರಮವಾಗಿ ವಿತರಿಸುವ ಭ್ರಷ್ಟರ ಜಾಲ ನಿಷ್ಕ್ರಿಯವಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಈ ಪ್ರಕರಣದ ಮೂಲಕ ಮುಡಾ ಶುದ್ಧಿಕರಣಕ್ಕೆ ಯತ್ನಿಸಿ, ಇಂತಹ ಪುಣ್ಯ ಕಾರ್ಯ ಮಾಡಿದರೆ ಮೈಸೂರಿನ ಜನರು ನಾಲ್ವಡಿ ಕೃಷ್ಣರಾಜ ಒಡೆಯರ್ ನೆನಪಿಸಿದಂತೆ ನೂರಾರು ಕಾಲ ನಿಮ್ಮನ್ನು ಕೂಡ ನೆನೆಯುತ್ತಾರೆ ಎಂದು ಹೇಳಿದ್ದಾರೆ. ಈ ಕಾರ್ಯಕ್ಕೆ ಜನೋದ್ಧಾರದ ಬಗ್ಗೆ ಕಾಳಜಿ ಇರುವ ತಜ್ಞರ ಸಮಿತಿ ರಚಿಸಿ, ಅವರಿಂದ ಬರುವ ಉತ್ತಮ ಸಲಹೆಗಳನ್ನು ಪಾಲಿಸಿ, ಈ ಮೂಲಕ ಮುಡಾದಲ್ಲಿರುವ ಅಧ್ವಾನವನ್ನು ಸರಿಪಡಿಸಿ. ಈ ಕಾರ್ಯದಿಂದ ಮುಡಾ ಉಳಿಸಿ, ಬೆಳೆಸುವ ಕಾರ್ಯ ಮಾಡಿ ಎಂದು ಮಾದೇಗೌಡರು ಸಿದ್ದರಾಮಯ್ಯಗೆ ಮನವಿ ಮಾಡಿದ್ದಾರೆ.

ಕಟ್ಟಡ ನಿರ್ಮಾಣದಲ್ಲಿ ಸುಸ್ಥಿರ ಅಭಿವೃದ್ಧಿ ಸಾಧಿಸುವ ಸಂಶೋಧನೆಯಲ್ಲಿ

ಮೈಸೂರು ಪಾರಂಪರಿಕ ಕಟ್ಟಡಗಳ ಅಧ್ಯಯನ

57ನೇ ಇಂಜಿನಿಯರ್‌ಗಳ ದಿನದ ಪ್ರಯುಕ್ತದ ವಿಚಾರ ಸಂಕಿರಣದಲ್ಲಿ ಮುಕ್ತ ವಿವಿ ಪ್ರಾಧ್ಯಾಪಕ ಡಾ.ಶಲ್ವಪಿಳ್ಳೆ ಅಯ್ಯಂಗಾರ್



ಮೈಸೂರಿನ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಕುರಿತ ವಿಚಾರ ಸಂಕಿರಣದಲ್ಲಿ ಮುಕ್ತ ವಿವಿ ಪ್ರಾಧ್ಯಾಪಕ ಡಾ.ಶಲ್ವಪಿಳ್ಳೆ ಅಯ್ಯಂಗಾರ್ ಮಾತನಾಡಿದರು.

ಮೈಸೂರು,ಸೆ.9(ಪಿಎಂ)- ಆಧುನಿಕ ತಂತ್ರಜ್ಞಾನದೊಂದಿಗೆ ಸಾಂಪ್ರದಾಯಿಕ ಶೈಲಿಯ ನೈಸರ್ಗಿಕ ಸಾಮಗ್ರಿ ಬಳಕೆ ಮೂಲಕ ಕಟ್ಟಡ ನಿರ್ಮಾಣದಲ್ಲಿ ಸುಸ್ಥಿರ ಅಭಿವೃದ್ಧಿ ಸಾಧಿಸುವ ಸಂಬಂಧ ನಡೆಯುತ್ತಿರುವ ಸಂಶೋಧನೆಗೆ ಮೈಸೂರಿನ ಪಾರಂಪರಿಕ ಕಟ್ಟಡಗಳನ್ನು ಅಧ್ಯಯನ ಮಾಡಲಾಗುತ್ತಿದೆ ಎಂದು ಮುಕ್ತ ವಿವಿಯ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥ ಡಾ.ಶಲ್ವಪಿಳ್ಳೆ ಅಯ್ಯಂಗಾರ್ ಹೇಳಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಸಂಸ್ಥೆಯ ಮೈಸೂರು ಘಟಕದ ವತಿಯಿಂದ 57ನೇ ಇಂಜಿನಿಯರ್‌ಗಳ ದಿನದ (ಸರ್ ಎಂ.ವಿಶ್ವೇಶ್ವರಯ್ಯ ಅವರ ಜಯಂತಿ-ಸೆ.15) ಪ್ರಯುಕ್ತ ಸೋಮವಾರ ಹಮ್ಮಿಕೊಂಡಿದ್ದ ರಾಯಲ್ ಚಾರ್ಟರ್ ಡೇ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಕುರಿತ ವಿಚಾರ ಸಂಕಿರಣದಲ್ಲಿ ಅವರು ಮುಖ್ಯಭಾಷಣ ಮಾಡಿದರು.

ಆಧುನಿಕ ತಂತ್ರಜ್ಞಾನ ಹಾಗೂ ಸಿಮೆಂಟ್, ಕಾಂಕ್ರಿಟ್ ಬಳಸಿದ ಕಟ್ಟಡಗಳಿಗೆ 40 ವರ್ಷಕ್ಕೂ ಅಧಿಕ ಲೈಫ್ ಅಷ್ಟೇ ಇದೆಯೆಂದು ಸಂಶೋಧನೆಯಲ್ಲಿ ಹೇಳಲಾಗಿದೆ. ಸಿಮೆಂಟ್ ಮತ್ತು ಕಾಂಕ್ರಿಟ್ ಬಳಸಿ ನಿರ್ಮಿಸಿದ ಕಟ್ಟಡಗಳು 100 ವರ್ಷ ಪೂರೈಸಿರುವುದು ವಿರಳ. ಒಂದು ವೇಳೆ 100 ವರ್ಷ ಪೂರೈಸಿದರೂ ವಾಸ ಹಾಗೂ ಯಾವುದೇ ಚಟುವಟಿಕೆಗಳಿಗೆ ಅವು ಯೋಗ್ಯವಲ್ಲ ಎಂದೇ ಉಲ್ಲೇಖಿಸಲಾಗಿದೆ. ಆದರೆ ಸುಣ್ಣದ ಗಾರೆ ಬಳಸಿ ಸಾಂಪ್ರದಾಯಿಕ ವಿಧಾನದಲ್ಲಿ ಕಟ್ಟಿರುವ ಕಟ್ಟಡಗಳು 300 ವರ್ಷಗಳಾದರೂ ಸದೃಢವಾಗಿ ಉಳಿಯುತ್ತವೆ ಎಂದೂ ಉಲ್ಲೇಖಿಸಲಾಗಿದೆ ಎಂದು ತಿಳಿಸಿದರು.

ಇಂಜಿನಿಯರಿಂಗ್ ಎಂದರೆ ಮೊದಲಿಗೆ ತಲೆಗೆ ಬರುವುದು ಸಿವಿಲ್ ಇಂಜಿನಿಯರಿಂಗ್. ಮೈಸೂರು ನಗರ ನೋಡಿದಾಗ, ವಿಶೇಷವಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಾಲಘಟ್ಟದ ಅನೇಕ ಪಾರಂಪರಿಕ ಕಟ್ಟಡಗಳು ಕಣ್ಮುಂದೆ ಬರುತ್ತವೆ. ಮೈಸೂರಿನಲ್ಲಿ ಸಮುದ್ರ ಇದ್ದರೆ ಅದು ಪ್ರವಾಸೋದ್ಯಮದ ಆಕರ್ಷಣೆ ಯಾಗುತ್ತಿತ್ತು. ಅದಿಲ್ಲವಾದರೂ ಮೈಸೂರಿನ ಹೆಸರು ಇಡೀ ಪ್ರಪಂಚಕ್ಕೆ ಗೊತ್ತಿದೆ. ಮೈಸೂರು ನೋಡಲು ಪ್ರವಾಸಿಗರ ದಂಡೇ ಹರಿದು ಬರುತ್ತದೆ. ಇಂತಹ ಆಕರ್ಷಣೆ ಮೈಸೂರಿಗೆ ದೊರೆಯಲು ಕಾರಣ ಇಲ್ಲಿನ ಪಾರಂಪರಿಕ ಕಟ್ಟಡಗಳು ಹಾಗೂ ಅವುಗಳ ಇತಿಹಾಸವಾಗಿದ್ದು, ಜೊತೆಗೆ ಇಲ್ಲಿನ ಸಂಸ್ಕೃತಿ-ಪರಂಪರೆಯೂ ಕಾರಣವಾಗಿದೆ. ಇಂತಹ ಕೊಡುಗೆಗಳನ್ನು ಮೈಸೂರಿಗೆ ಕೊಟ್ಟ ಮೈಸೂರು ರಾಜ ಪರಂಪರೆ, ವಿಶೇಷವಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಇಲ್ಲಿನ ಇಂಜಿನಿಯರ್ ಸಮುದಾಯ ನಿಜಕ್ಕೂ ಸ್ಮರಣೀಯ ಎಂದು ಸ್ಮರಿಸಿದರು.

ಕಳೆದ 10 ವರ್ಷಗಳನ್ನು ನೋಡಿದರೆ, ಇಡೀ ದೇಶದಲ್ಲಿ ತಾಜ್ ಮಹಲ್ ಮೊಟ್ಟ ಮೊದಲ ಪ್ರವಾಸಿಗರ ಆಕರ್ಷಕ ಕೇಂದ್ರವಾಗಿತ್ತು. ಆದರೆ ಈಗ ಮೈಸೂರು ಅರಮನೆ ಭಾರತದಲ್ಲಿ ಟಾಪ್ ಒನ್ ಪ್ರವಾಸಿಗರ ಆಕರ್ಷಣೆಯ ಕೇಂದ್ರವಾಗಿದೆ. ಮೈಸೂರು ಮಹಾರಾಜರು ಅಂತಹ ನಗರವನ್ನು ನಿರ್ಮಿಸಿದ್ದು, ವಿಶೇಷವಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ಕೊಡುಗೆ ಅಪಾರ ಎಂದರು.

ನಾಲ್ವಡಿ, ಸರ್ ಎಂವಿ ನೆನೆಯಬೇಕು: ನಾಲ್ವಡಿಯವರನ್ನು ಪ್ರಾತಃಸ್ಮರಣೀಯರಾಗಿ ನೆನೆಪಿಕೊಳ್ಳುತ್ತೇವೆಯೋ ಅದೇ ರೀತಿ ಸರ್ ಎಂ.ವಿಶ್ವೇಶ್ವರಯ್ಯ ಅವರನ್ನೂ ನೆನೆಯಬೇಕು. ಮೈಸೂರು ಸಂಸ್ಥಾನಕ್ಕೆ ವಿಶ್ವೇಶ್ವರಯ್ಯನವರು ಬಂದ ನಂತರ ಪ್ರಗತಿಯಾಗಿದೆ. ಅವರಿಂದಾಗಿ ಮೈಸೂರಿನ ಇಂಜಿನಿಯರಿಂಗ್ ವಲಯದಲ್ಲಿ ಇನ್ನಷ್ಟು ಹೊಸ ಐಡಿಯಾಲಜಿ, ಆಧುನಿಕ ತಂತ್ರಜ್ಞಾನ ಅಳವಡಿಕೆಯಾಯಿತು ಎಂದು ತಿಳಿಸಿದರು.

ಬಹಳ ಜನ ವಿಶ್ವೇಶ್ವರಯ್ಯನವರ ಪಾತ್ರ ಏನು. ಅವರು ಕೇವಲ ಮೈಸೂರು ಸಂಸ್ಥಾನದಲ್ಲಿ ಒಬ್ಬ ಅಧಿಕಾರಿಯಾಗಿದ್ದವರು ಎನ್ನುತ್ತಾರೆ. ಹಾಗೆ ನೋಡಿದರೆ ಭಾರತ ಸರ್ಕಾರದಲ್ಲಿ ಕೆಲಸ ಮಾಡುವ ಎಲ್ಲಾ ಇಂಜಿನಿಯರ್‌ಗಳು ಸರ್ಕಾರದ ಸೇವಕರೇ. ಅವರ ಕೊಡುಗೆಯನ್ನು ಪರಿಗಣಿಸದೇ ಇರಲು ಸಾಧ್ಯವೇ. ಇಸ್ರೋದಲ್ಲಿ ಎಷ್ಟೋ ವಿಜ್ಞಾನಿಗಳು ಚಂದ್ರಯಾನ, ಆದಿತ್ಯಯಾನ ಸಫಲಗೊಳಿಸಿದರು. ಆ ಎಲ್ಲರ ಕೊಡುಗೆಗೆ ಶ್ರೇಯಸ್ಸು ಸಲ್ಲಬೇಕಲ್ಲವೇ? ಹಾಗಾಗಿ ಸರ್ ಎಂವಿಯವರ ಕೊಡುಗೆಯನ್ನು ಸ್ಮರಿಸದೇ ಇರುವುದು ಸರಿಯಲ್ಲ. ಸರ್ ಎಂವಿ ಅವರ ಬಗೆಗಿನ ಆಕ್ಷೇಪ ಕೆಲವರ ಅಭಿಪ್ರಾಯವಷ್ಟೇ. ಒಂದು ಸರ್ಕಾರ ಅಂದರೆ ಎಲ್ಲರ ಸಹಕಾರದಿಂದ ನಡೆಯುತ್ತದೆಯೇ ಹೊರತು, ಒಬ್ಬ ವ್ಯಕ್ತಿಯಿಂದ ಅಲ್ಲವೇ ಅಲ್ಲ ಎಂದು ಹೇಳಿದರು.

ಇಂಜಿನಿಯರ್‌ಗಳ ಸಂಸ್ಥೆಯ ಮೈಸೂರು ಘಟಕದ ಗೌರವ ಕಾರ್ಯದರ್ಶಿ ಡಾ.ಎಸ್.ಎ.ಮೋಹನ್ ಕೃಷ್ಣ, ಮಾಜಿ ಅಧ್ಯಕ್ಷರಾದ ಬಿ.ಎಸ್.ಪ್ರಭಾಕರ್, ಚಿನ್ನಸ್ವಾಮಿ, 57ನೇ ಇಂಜಿನಿಯರ್‌ಗಳ ದಿನಾಚರಣೆ ಸಂಚಾಲಕ ಎ.ಎಸ್. ಸತೀಶ್ ಮತ್ತಿತರರು ಹಾಜರಿದ್ದರು.

ಸಂಗೀತ ಪ್ರಿಯರ ರಂಜಿಸಿದ ವಿದ್ವಾನ್ ತಿರುವಾರೂರು ಗಿರೀಶ್‌ರ ಶಾಸ್ತ್ರೀಯ ಗಾಯನ


63ನೇ ಪಾರಂಪರಿಕ ಸಂಗೀತೋತ್ಸವ ಹಾಗೂ ಗಣೇಶೋತ್ಸವ ಮೂರನೇ ದಿನ ಕಾರ್ಯಕ್ರಮದಲ್ಲಿ ವಿದ್ವಾನ್ ತಿರುವಾರೂರು ಗಿರೀಶ್ ಸಂಗೀತ ಪ್ರಿಯರನ್ನು ರಂಜಿಸಿದರು.

ಮೈಸೂರು, ಸೆ.9(ಎಸ್‌ಪಿಎನ್)- ವಿದ್ವಾನ್ ತಿರುವಾರೂರು ಗಿರೀಶ್ ಅವರ ಶಾಸ್ತ್ರೀಯ ಗಾಯನ ಮೋಡಿಗೆ ಸಂಗೀತ ಪ್ರಿಯರು ತಲೆದೂಗಿದರು.

ಮೈಸೂರಿನ ವಿವಿ ಮೊಹಲ್ಲಾ 8ನೇ ಅಡ್ಡರಸ್ತೆಯಲ್ಲಿ ಎಸ್.ಪಿ.ವಿ.ಜಿ.ಎಂ.ಸಿ ಟ್ರಸ್ಟ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದ 63ನೇ ಪಾರಂಪರಿಕ ಸಂಗೀತೋತ್ಸವ ಹಾಗೂ ಗಣೇಶೋತ್ಸವ ಮೂರನೇ ದಿನ ಕಾರ್ಯಕ್ರಮದಲ್ಲಿ ಸಂಗೀತ ಪ್ರಿಯರನ್ನು ರಂಜಿಸಿದರು.

ಮೊದಲಿಗೆ ವಿಘ್ನವಿನಾಯಕನ ಕುರಿತು ಗಾಯನ ಆರಂಭಿಸಿದ ವಿದ್ವಾನ್ ಗಿರೀಶ್ ಅವರು, ನಂತರ ಕರಿರಾಜ ನಮೋ, ನಮೋ ಕಂಠದಲ್ಲಿ ನಾಗರಾಜ ಸೇರಿದಂತೆ ಇತರೆ ಗೀತೆಗಳನ್ನು ಮನೋಜ್ಞವಾಗಿ ಹಾಡಿದರು.

ಈ ವೇಳೆ ವಿದ್ವಾನ್ ಆರ್.ಕೆ. ಶ್ರೀರಾಂಕುಮಾರ್ (ವಯೋಲಿನ್), ವಿದ್ವಾನ್ ತಿರುವಾರೂರು ಭಕ್ತವತ್ಸಲ (ಮೃದಂಗ), ವಿದ್ವಾನ್ ವ್ಯಾಸವಿಠಲ (ಖಂಜಿರಾ) ನುಡಿಸಿ, ತಿರುವಾರೂರು ಗಿರೀಶ್ ಅವರ ಗಾಯನಕ್ಕೆ ಸಾಥ್ ನೀಡಿದರು. ಇದಕ್ಕೂ ಮುನ್ನ ವಿದುಷಿ ಶುಭಾ ರಾಘವೇಂದ್ರ ಅವರು 'ಗಣೇಶ ಪುರಾಣ' ವಾಚಿಸಿದರು. ಈ ಕುರಿತು ಎ.ನಿರಂಜನ ಅವರು ವ್ಯಾಖ್ಯಾನಿಸಿದರು.

ವಾರ್ಡ್ ನಂ.62ರಲ್ಲಿ ಇಂದು ಶಾಸಕ ಶ್ರೀವತ್ಸ ಪಾದಯಾತ್ರೆ



ಮೈಸೂರು, ಸೆ.9- ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರು ಮಂಗಳವಾರ 62ನೇ ವಾರ್ಡ್‌ನಲ್ಲಿ ಪಾದಯಾತ್ರೆ ನಡೆಸಲಿದ್ದಾರೆ.

ಜೆ.ಪಿ.ನಗರದ ಸ್ಪೋರ್ಟ್ಸ್ ಕ್ಲಬ್ ರಸ್ತೆ, 10ನೇ ಬ್ಲಾಕ್, 3ನೇ ಕ್ರಾಸ್‌ನಿಂದ ಬೆಳಗ್ಗೆ 7.30ಕ್ಕೆ ಪಾದಯಾತ್ರೆ ಆರಂಭಿಸಿ, ವಾರ್ಡ್‌ನ ವಿವಿಧೆಡೆ ಸಂಚರಿಸುವ ಮೂಲಕ ಸಾರ್ವಜನಿಕರ ಕುಂದು-ಕೊರತೆ ಆಲಿಸಲಿದ್ದಾರೆ.

ಗಣೇಶೋತ್ಸವದಲ್ಲಿ ಭಾಗಿ: ಮಧ್ಯಾಹ್ನ 1ಕ್ಕೆ ವಿದ್ಯಾರಣ್ಯಪುರಂ 16ನೇ ಕ್ರಾಸ್‌ನಲ್ಲಿ ಗಣೇಶ ಉತ್ಸವ, ಮಧ್ಯಾಹ್ನ 3ಕ್ಕೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಸಾಮೂಹಿಕ ಗಣೇಶ ವಿಸರ್ಜನೆ ಮೆರವಣಿಗೆ, ಸಂಜೆ 4ಕ್ಕೆ ಪಾಲಿಕೆಯಲ್ಲಿ ಕ್ಷೇತ್ರದ ಕೆಡಿಪಿ ಸಭೆ, ಸಂಜೆ 6.30ಕ್ಕೆ ಇಟ್ಟಿಗೆಗೂಡಿನಲ್ಲಿ, ನಂತರ ಜಯಲಕ್ಷ್ಮಿ ವಿಲಾಸ ರಸ್ತೆ, ಜಯನಗರ ಅಯ್ಯಪ್ಪಸ್ವಾಮಿ ರಸ್ತೆ, ಜೆ.ಸಿ.ನಗರ 8ನೇ ಕ್ರಾಸ್, ಕುವೆಂಪುನಗರ ಬೋಧಿಸತ್ವ ಪಾರ್ಕ್ ಹಾಗೂ ನಜರ್‌ಬಾದ್ ಸುದಿಕೇರಿಯಲ್ಲಿನ ಗಣೇಶೋತ್ಸವದಲ್ಲಿ ಭಾಗವಹಿಸಲಿದ್ದಾರೆ.

ಮನೆಯಲ್ಲಿ ಕಳ್ಳತನ: ಇಬ್ಬರು ಅಪ್ರಾಪ್ತರು ಸೇರಿ ಮೂವರು ಪೊಲೀಸ್ ವಶಕ್ಕೆ

ಮೈಸೂರು, ಸೆ.9(ಎಸ್‌ಬಿಡಿ)- ಮನೆಗಳ್ಳತನ ಪ್ರಕರಣವೊಂದರ ಸಂಬಂಧ ಇಬ್ಬರು ಅಪ್ರಾಪ್ತರು ಸೇರಿ ಮೂವರನ್ನು ಮೈಸೂರಿನ ಉದಯಗಿರಿ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ. ರಾಜೀವ್‌ನಗರ ಕ್ರಿಶ್ಚಿಯನ್ ಕಾಲೋನಿಯ ಮನೆಯೊಂದರಲ್ಲಿ ಕಳವು ಮಾಡಿದ್ದ ಈ ಮೂವರಿಂದ ಸುಮಾರು 1.50 ಲಕ್ಷ ರೂ. ಮೌಲ್ಯದ 24 ಗ್ರಾಂ ಚಿನ್ನದ ನೆಕ್ಲೆಸ್ ಹಾಗೂ 50 ಸಾವಿರ ರೂ. ನಗದು ವಶಪಡಿಸಿಕೊಳ್ಳಲಾಗಿದೆ.

ಮನೆಗಳವು ಪ್ರಕರಣದ ಹಿನ್ನೆಲೆಯಲ್ಲಿ ಉದಯಗಿರಿ ಠಾಣೆಯ ಸಿಬ್ಬಂದಿ, ರಾಜೀವ್ ನಗರದ ಈಡನ್ ಗಾರ್ಡನ್ ಲೇಔಟ್ ಬಳಿ ಗಸ್ತು ನಡೆಸುವ ವೇಳೆ ಮೂವರು ಅನುಮಾನಾಸ್ಪದವಾಗಿ ಓಡಾಡುವುದನ್ನು ಗಮನಿಸಿದ್ದಾರೆ. ಅವರನ್ನು ವಿಚಾರಿಸಿದಾಗ ಗಾಬರಿಯಿಂದ ತಡಬಡಾಯಿಸಿದ್ದಲ್ಲದೆ ಯಾವುದಕ್ಕೂ ಸಮಂಜಸ ಉತ್ತರ ನೀಡದ ಕಾರಣ ಪೊಲೀಸರ ಅನುಮಾನ ಗಟ್ಟಿಯಾಗಿದೆ.

ಅಲ್ಲಿಂದ ಠಾಣೆಗೆ ಕರೆತಂದು ವಿಚಾರಣೆ ನಡೆಸಿದಾಗ ಮೂವರಲ್ಲಿ ಓರ್ವ ವಯಸ್ಕ ಹಾಗೂ ಇಬ್ಬರು ಅಪ್ರಾಪ್ತ ಬಾಲಕರೆಂಬುದು ತಿಳಿದಿದೆ. ಹಾಗಾಗಿ ಅವರನ್ನು ಆಪ್ತ ಸಮಾಲೋಚನೆಗೆ ಒಳಪಡಿಸಿದಾಗ ಕ್ರಿಶ್ಚಿಯನ್ ಕಾಲೋನಿಯ ಮನೆಯೊಂದರಲ್ಲಿ ಕಳ್ಳತನ ಮಾಡಿರುವುದಾಗಿ ತಿಳಿಸಿದ್ದಾರೆ. ನಂತರ ಅವರು ಕಳವು ಮಾಡಿದ್ದ ಚಿನ್ನದ ನೆಕ್ಲೆಸ್ ಹಾಗೂ ಹಣವನ್ನು ವಶಪಡಿಸಿಕೊಂಡಿದ್ದಾರೆ.

ನಗರದ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಸ್.ಜಾಹ್ನವಿ ಮಾರ್ಗದರ್ಶನದಂತೆ ದೇವರಾಜ ವಿಭಾಗದ ಎಸಿಪಿ ಶಾಂತಮಲ್ಲಪ್ಪ ನೇತೃತ್ವದಲ್ಲಿ ಉದಯಗಿರಿ ಠಾಣೆ ಇನ್ಸ್‌ಪೆಕ್ಟರ್ ಕೆ.ಎನ್. ಸುಧಾಕರ್, ಸಬ್‌ಇನ್ಸ್‌ಪೆಕ್ಟರ್ ಬಿ.ಜಿ.ನಾಗರಾಜು ನಾಯ್ಕ, ಸಿಬ್ಬಂದಿ ಜಿ.ಶಿವಪ್ರಸಾದ್, ಪಿ.ಎನ್.ಸುಹೀಲ್, ಪ್ರಕಾಶ್ ರಾಥೋಡ್, ರಾಜೇಸಾಬ, ಕೆ.ಕರಿಯಪ್ಪ ಹಾಗೂ ನಾಜಿಯಾ ಷರೀಫ್ ಕಾರ್ಯಾಚರಣೆ ನಡೆಸಿ, ಪ್ರಕರಣ ಭೇದಿಸಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಗಣಪತಿ ಪೂಜೆ


ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಹಂಸ ಗಣಪತಿಯನ್ನು ಪ್ರತಿಷ್ಠಾಪಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ಈ ವೇಳೆ ಮುಕ್ತ ವಿವಿಯ ಕುಲಸಚಿವ ಡಾ.ಕೆ.ಬಿ ಪ್ರವೀಣ್, ಶಿಕ್ಷಕೇತರ ಸಂಘದ ಅಧ್ಯಕ್ಷ ಸತೀಶ್, ದೀಪಕ್, ಪ್ರದೀಪ್ ಗಿರಿ, ನಾಗೇಂದ್ರ ಜನಾರ್ದನ್, ಜಗದೀಶ್, ಬಸವರಾಜ, ಉಪ ಕುಲಸಚಿವ, ಸಹಾಯಕ ಕುಲಸಚಿವ, ಅಧೀಕ್ಷಕರು ಹಾಗೂ ಅರ್ಚಕ ಟಿ.ಎಸ್ ಅರುಣ್ ಉಪಸ್ಥಿತರಿದ್ದರು.

ಸಾಧಿಸುವ ತುಡಿತವುಳ್ಳ ವ್ಯಕ್ತಿಯ ಯಾರಿಂದಲೂ ತಡೆಯಲು ಸಾಧ್ಯವಿಲ್ಲ

- ಅಂತರರಾಷ್ಟ್ರೀಯ ಅಥ್ಲೀಟ್ ಅರ್ಜುನ್ ದೇವಯ್ಯ ಅಭಿಮತ
- ರೋಟರಿ ಮಿಡ್‌ಟೌನ್ ಶಾಲೆಯಲ್ಲಿ ಕ್ರೀಡಾ ಪ್ರಶಸ್ತಿ ಸಮಾರಂಭದಲ್ಲಿ ಭಾಗಿ


ರೋಟರಿ ಮಿಡ್‌ಟೌನ್, ವಿ ಕ್ರಿಯೇಟ್ ಸ್ಪೇಸ್ ವತಿಯಿಂದ ರಾಷ್ಟ್ರೀಯ ಷಟ್ಲರ್ ಪಟು ದಿಯಾ ಭೀಮಯ್ಯ ಅವರಿಗೆ ಸ್ಪೋರ್ಟ್ ಅವಾರ್ಡ್-2024 ನೀಡಿ ಅಭಿನಂದಿಸಲಾಯಿತು. ಅಂತರರಾಷ್ಟ್ರೀಯ ಅಥ್ಲೀಟ್ ಅರ್ಜುನ್ ದೇವಯ್ಯ ತೀತಮಾಡ, ರೋಟರಿ ಮಿಡ್‌ಟೌನ್ ಅಧ್ಯಕ್ಷ ಎಸ್.ಕುಮಾರಸ್ವಾಮಿ, ಕಾರ್ಯದರ್ಶಿ ಎಲಿಜರ್ ಮಿಲ್ಟನ್ ಮತ್ತಿತರರಿದ್ದರು.

ಮೈಸೂರು, ಸೆ.9(ಎಂಕೆ)- ಸಾಧಿಸುವ ತವಕ-ತುಡಿತವುಳ್ಳ ವ್ಯಕ್ತಿಯನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಸಾಧನೆಯು ಸಾಮಾಜಿಕ ಜಾಲತಾಣದಲ್ಲಿ ಮಾಡುವ ಕಾಮೆಂಟ್‌ನಷ್ಟು ಸುಲಭವೂ ಅಲ್ಲ. ಅದೊಂದು ತಪಸ್ಸು ಎಂದು ಅಭಿಮನ್ಯು ಅಕಾಡೆಮಿ ಸಿಇಓ ಹಾಗೂ ಅಂತರರಾಷ್ಟ್ರೀಯ ಅಥ್ಲೀಟ್ ಅರ್ಜುನ್ ದೇವಯ್ಯ ತೀತಮಾಡ ಸಾಧನೆಯ ಮಹತ್ವ ತಿಳಿಸಿದರು.

ಮೈಸೂರಿನ ಹೂಟಗಳ್ಳಿಯಲ್ಲಿರುವ ರೋಟರಿ ಮಿಡ್‌ಟೌನ್ ಶಾಲೆಯಲ್ಲಿ ವಿ ಕ್ರಿಯೇಟ್ ಸ್ಪೇಸ್ ಸಹಯೋಗದೊಂದಿಗೆ ಆಯೋಜಿಸಿದ್ದ ಸ್ಪೋರ್ಟ್ ಅವಾರ್ಡ್-2024 ಸಮಾರಂಭದಲ್ಲಿ ಮಾತನಾಡಿದ ಅವರು, ಶಾಲೆಯೊಂದರಲ್ಲಿ ಈ ವರ್ಷ ಯಾರು ಪ್ರಥಮ ರ್‍ಯಾಂಕ್ ಪಡೆಯಬಹುದು ಎಂದರೆ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಂದಲೂ ಉತ್ತರ ಬರಲ್ಲ. ಏಕೆಂದರೆ ಬಹುತೇಕರು ಪ್ರಥಮ ರ್‍ಯಾಂಕ್ ಪಡೆಯುತ್ತಾರೆ. ಆದರೆ, ಕ್ರೀಡೆಯಲ್ಲಿ ತಾಲೂಕು ಮಟ್ಟ, ಜಿಲ್ಲಾ ಮಟ್ಟ, ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿದರೂ ಇರುವುದು ಒಂದೇ ಗೋಲ್ಡ್ ಮೆಡಲ್. ಅದನ್ನು ಗೆಲ್ಲಲು ಕಠಿಣ ಪರಿಶ್ರಮ ಮತ್ತು ಶೇ.100 ರಷ್ಟು ಏಕಾಗ್ರತೆ ಅವಶ್ಯವಾಗಿದೆ ಎಂದರು.

> ಸಾಧನೆಗೂ ಮುನ್ನ ನಮ್ಮನ್ನು ಯಾರೂ ನಮ್ಮವರೆನ್ನುವುದಿಲ್ಲ. ಸಾಧನೆ ಮಾಡಿದ ಬಳಿಕ ಎಲ್ಲರಿಗೂ ನಮ್ಮವರೇ ಆಗಿರುತ್ತೇವೆ. ಬೇರೆಯವರ ಕನಸುಗಳಿಗೆ ಬಣ್ಣ ಹಚ್ಚುವುದಕ್ಕಿಂತ, ನಿಮ್ಮದೆ ಬಣ್ಣದ ಕನಸು ಕಟ್ಟಿ ಸಾಧನೆಯತ್ತಾ ಸಾಗಿ. ಎಲ್ಲಿಯವರೆಗೆ ಬಡತನ ಎಂದು ಬಡಿದುಕೊಳ್ಳುತ್ತೀರಿ. ಬಡತನವೆಂದು ಹೇಳುವವರನ್ನೇ ಬಡಿದು ತಿನ್ನುವ ಜನರಿರುತ್ತಾರೆ. ನಿಮ್ಮನ್ನು ಶಿಕ್ಷಣ ಮಾತ್ರ ಬದಲಾಯಿಸಲು ಸಾಧ್ಯ.
>
> - ಅರ್ಜುನ್ ದೇವಯ್ಯ ತೀತಮಾಡ, ಅಂತರರಾಷ್ಟ್ರೀಯ ಅಥ್ಲೀಟ್

ಜೀವನವೂ ಏಳು ಕ್ರೀಡೆಗಳ ಚಕ್ರವಾಗಿದ್ದು, ಭಾವನಾತ್ಮಕತೆಯೊಳಗೆ ದೈಹಿಕ, ಮಾನಸಿಕ, ಕೌಟುಂಬಿಕ, ಸಾಮಾಜಿಕ, ಆರ್ಥಿಕ ಮತ್ತು ಆಧ್ಯಾತ್ಮಿಕವೆಂಬ ಆರು ವಿಚಾರಗಳು ಅಡಗಿರುತ್ತವೆ. ಒಬ್ಬ ವ್ಯಕ್ತಿಯ ಬುದ್ಧಿ ನೋಡಿ ಆತನ ಸಾಮರ್ಥ್ಯ ಅಳೆಯುವುದಲ್ಲ. ಸಂಸಾರದಲ್ಲಿ ಸಂಸ್ಕಾರ ಇಲ್ಲದಿದ್ದರೆ, ಆ ಸಂಸಾರ ನಿರ್ಮೂಲವಾಗುತ್ತೆ. ಯಾವ ವ್ಯಕ್ತಿಯಲ್ಲಿ ಸಂಸ್ಕಾರವಿಲ್ಲ, ಆ ವ್ಯಕ್ತಿ ನಿರ್ಮೂಲವಾಗುತ್ತಾನೆ. ಆದ್ದರಿಂದ ನಾವು ಹೇಗಿರುತ್ತೇವೆ, ನಮ್ಮ ನಡೆ-ನುಡಿ ಹೇಗಿರಬೇಕು ಎಂಬುದೆಲ್ಲವೂ ಮುಖ್ಯವಾಗುತ್ತದೆ ಎಂದು ತಿಳಿಹೇಳಿದರು.

ಮೊಬೈಲ್ ಬಿಟ್ಟರೆ ಸಾಧನೆ ಸಾಧ್ಯ: ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಯೂ ಮುಖ್ಯವಾಗುತ್ತದೆ. ಶಿಕ್ಷಕರು ಮತ್ತು ಪೋಷಕರು ಆರಂಭದಲ್ಲೇ ಪ್ರತಿಭೆ ಗುರ್ತಿಸಿ ಪ್ರೋತ್ಸಾಹಿಸಬೇಕು. 3 ರಿಂದ 4 ವರ್ಷ ಕಠಿಣ ಶ್ರಮಪಟ್ಟರೆ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲೂ ಸಾಧನೆ ಮಾಡಬಹುದು ಎಂದು ನನ್ನ ಗುರುಗಳು ಹೇಳುತ್ತಿದ್ದರು ಎಂದು ಸ್ಮರಿಸಿದ ಅವರು, ಇವತ್ತು ಮೊಬೈಲ್ ಬಿಟ್ಟರಷ್ಟೇ ಸಾಧನೆ ಸಾಧ್ಯ. ಮೊಬೈಲ್ ನಮ್ಮನ್ನಾಳುತ್ತಿದೆ. ಮೊಬೈಲ್ ದಾಸರಾದವರು ಇವತ್ತು ಇತಿಹಾಸ ನಿರ್ಮಿಸಲು ಸಾಧ್ಯವಿಲ್ಲ ಎಂದು ಕಿವಿಮಾತು ಹೇಳಿದರು.

ಇದಕ್ಕೂ ಮುನ್ನ ಪ್ರತಿಭಾನ್ವಿತ ರಾಷ್ಟ್ರಮಟ್ಟದ ಷಟ್ಲರ್ ಪಟು ದಿಯಾ ಭೀಮಯ್ಯ ಅವರಿಗೆ ಸ್ಪೋರ್ಟ್ ಅವಾರ್ಡ್-2024 ನೀಡಿ ಅಭಿನಂದಿಸಲಾಯಿತು. ರೋಟರಿ ಮಿಡ್‌ಟೌನ್ ಅಧ್ಯಕ್ಷ ಎಸ್.ಕುಮಾರಸ್ವಾಮಿ, ಕಾರ್ಯದರ್ಶಿ ಎಲಿಜರ್ ಮಿಲ್ಟನ್ ಮತ್ತಿತರು ಉಪಸ್ಥಿತರಿದ್ದರು.

ಹುಣಸೂರು ನಗರಸಭೆ ಮೈತ್ರಿಕೂಟದ ಪಾಲು

● ಅಧ್ಯಕ್ಷರಾಗಿ ಜೆಡಿಎಸ್‌ನ ಶರವಣ, ಉಪಾಧ್ಯಕ್ಷೆಯಾಗಿ ಆಶಾ ಆಯ್ಕೆ ● ಶಾಸಕ ಜಿ.ಡಿ.ಹರೀಶ್‌ಗೌಡರ ನೇತೃತ್ವದಲ್ಲಿ ನಗರಸಭೆ ಗದ್ದುಗೆ ಹಿಡಿದ ಎನ್‌ಡಿಎ

ಹುಣಸೂರು, ಸೆ.9– ಹುಣಸೂರು ನಗರಸಭೆ ಅಧಿಕಾರ ಬಿಜೆಪಿ, ಜೆಡಿಎಸ್ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಪಾಲಾಗಿದ್ದು, ಅಧ್ಯಕ್ಷರಾಗಿ 7ನೇ ವಾರ್ಡ್ ಜೆಡಿಎಸ್‌ನ ಶರವಣ ಆಯ್ಕೆಯಾದರೇ, ಉಪಾಧ್ಯಕ್ಷೆಯಾಗಿ 2ನೇ ವಾರ್ಡ್‌ನ ಆಶಾಕೃಷ್ಣ ಅವಿರೋಧವಾಗಿ ಆಯ್ಕೆಯಾದರು.

ಸೋಮವಾರ ಉಪವಿಭಾಗಾಧಿಕಾರಿ ಹೆಚ್.ಬಿ. ವಿಜಯ್ ಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಚುನಾವಣೆಯಲ್ಲಿ ನಗರಸಭೆ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್‌ನ ಸ್ವಾಮಿಗೌಡ, ಮೈತ್ರಿ ಅಭ್ಯರ್ಥಿಯಾಗಿ ಜೆಡಿಎಸ್‌ನ ಶರವಣ, ಉಪಾಧ್ಯಕ್ಷ ಸ್ಥಾನಕ್ಕೆ ಎಸ್‌ಟಿ ಮಹಿಳಾ ಏಕೈಕ ಅಭ್ಯರ್ಥಿ ಆಶಾ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ, ಸಂಸದ ಯದುವೀರ್ ಸೇರಿದಂತೆ ಜೆಡಿಎಸ್ 7, ಬಿಜೆಪಿ 3 ಹಾಗೂ ಐವರು ಪಕ್ಷೇತರರು ಸೇರಿದಂತೆ 17 ಮತಗಳಿಂದ ಶರವಣ ಅಧ್ಯಕ್ಷರಾಗಿ ಆಯ್ಕೆಯಾದರೇ, ಪ್ರತಿಸ್ಪರ್ಧಿ ಸ್ವಾಮಿಗೌಡ ಅವರು ಕಾಂಗ್ರೆಸ್‌ನ 13, ಎಸ್‌ಡಿಪಿಐನ 2 ಮತಗಳು ಸೇರಿದಂತೆ 15 ಮತ ಪಡೆದು ಪರಾಭವಗೊಂಡರು. ಇನ್ನು ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಆಶಾ ಅವಿರೋಧವಾಗಿ ಆಯ್ಕೆಯಾದರು.

ಒಟ್ಟಾಗಿ ಬಂದ ಸದಸ್ಯರು: ಮಧ್ಯಾಹ್ನ 12 ಗಂಟೆಗೆ ಚುನಾವಣೆ ನಿಗದಿಯಾಗಿತ್ತು. 11.45ರ ವೇಳೆಗೆ ಶಾಸಕ ಹರೀಶ್‌ಗೌಡರೊಂದಿಗೆ ಮೈತ್ರಿಕೂಟದ ಸದಸ್ಯರು ನಗರಸಭೆ ಆವರಣಕ್ಕೆ ಬಸ್‌ನಲ್ಲಿ ಬಂದಿಳಿದರು. ಅದಕ್ಕೂ ಮುನ್ನಾ ಕಾಂಗ್ರೆಸ್ ಸದಸ್ಯರು ಒಟ್ಟಾಗಿ ಚುನಾವಣೆ ಸಭಾಂಗಣಕ್ಕೆ ಬಂದಿದ್ದರು.

ಚುನಾವಣೆಯಲ್ಲಿ ಕಾಂಗ್ರೆಸ್ ಸದಸ್ಯರಾದ ಅನುಷಾ, ಭವ್ಯ, ಸಮೀನಾ ಪರ್ವೀನ್, ಸೌರಭ, ಮನು, ರಮೇಶ್, ಜಬೀಉಲ್ಲಾ, ರಂಜಿತ, ಗೀತಾ, ಮಂಜು, ಶ್ವೇತಾ, ಪ್ರಿಯಾಂಕ, ಎಸ್‌ಡಿಪಿಐನ ಶಮೀನಾ ಬಾನು, ಸೈಯದ್ ಯುನೂಸ್ ಹಾಜರಾದರೇ, ಕಾಂಗ್ರೆಸ್ ಸದಸ್ಯ ದೇವಾನಾಯ್ಕ ಅನಾರೋಗ್ಯದ ನೆಪವೊಡ್ಡಿ ಗೈರಾಗಿದ್ದರು.

ಜೆಡಿಎಸ್ ಸದಸ್ಯರಾದ ಸಿ.ದೇವರಾಜು, ಸಾಯಿನ್ ತಾಜ್, ಕೃಷ್ಣರಾಜಗುಪ್ತ, ಶ್ರೀನಾಥ್, ರಾಣಿ, ರಾಧಮ್ಮ, ಬಿಜೆಪಿ ಸದಸ್ಯರಾದ ಹರೀಶ್, ವಿವೇಕ, ಗಣೇಶ್ ಕುಮಾರಸ್ವಾಮಿ ಹಾಗೂ ಪಕ್ಷೇತರರಾದ ಹೆಚ್.ಪಿ.ಸತೀಶ, ರಮೇಶ್, ಮಾಲೀಕ್ ಪಾಷ, ಪರ್ವೀನ್ ತಾಜ್ ಹಾಜರಿದ್ದರು. ಚುನಾವಣೆಯನ್ನು ಉಪವಿಭಾಗಾಧಿಕಾರಿ ಹೆಚ್.ಬಿ.ವಿಜಯಕುಮಾರ್, ಪೌರಾಯುಕ್ತೆ ಮಾನಸ ನಡೆಸಿಕೊಟ್ಟರು.

ಸ್ವಪಕ್ಷದ ಸದಸ್ಯನ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ: ಕಾಂಗ್ರೆಸ್ ಸದಸ್ಯ ದೇವನಾಯಕ ಚುನಾವಣೆಗೆ ಗೈರಾಗಿದ್ದು, ಆ ಪಕ್ಷದ ಕಾರ್ಯಕರ್ತರನ್ನು ಕೆರಳಿಸಿತು. ಚುನಾವಣೆ ಬಳಿಕ ನಗರಸಭೆ ಆವರಣದಲ್ಲಿ ಜೆಡಿಎಸ್, ಬಿಜೆಪಿ ಸದಸ್ಯರು ಪಟಾಕಿ ಸಿಡಿಸಿ, ಸಿಹಿ ಹಂಚಿ ಬಾವುಟ ಬೀಸುತ್ತಾ ಸಂಭ್ರಮಾಚರಣೆಯಲ್ಲಿ ತೊಡಗಿದ್ದರೇ, ಅತ್ತ ಕಾಂಗ್ರೆಸ್ ಪಕ್ಷದ ಕೆಲ ಕಾರ್ಯಕರ್ತರು ದೇವನಾಯಕನ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.


ಶಾಸಕ ಹರೀಶ್‌ಗೌಡ ಮಾತನಾಡಿ, ಕಳೆದ 16 ತಿಂಗಳಿಂದ ರಾಜ್ಯ ಸರ್ಕಾರ ಸ್ಥಳೀಯ ಸಂಸ್ಥೆ ಚುನಾಯಿತ ಪ್ರತಿನಿಧಿಗಳ ಹಕ್ಕನ್ನು ಕಸಿದುಕೊಂಡಿತ್ತು. ಇದರಿಂದ ನಗರಸಭೆ ವ್ಯಾಪ್ತಿಯಲ್ಲಿ ಅಭಿವೃದ್ಧಿ ಮರೀಚಿಕೆಯಾಗಿದೆ. ಇದೀಗ ನಮ್ಮ ಅಭ್ಯರ್ಥಿ ಆಯ್ಕೆಯಾಗಿದ್ದು, ಅಭಿವೃದ್ಧಿಗೆ ಹೊಸತನ ನೀಡಲು ಉದ್ದೇಶಿಸಲಾಗಿದೆ. ಆಶ್ರಯ ಸಮಿತಿ ಸಭೆ ಆಯೋಜನೆಗೆ ಆದ್ಯತೆ ನೀಡಲಾಗುವುದು. ನಮ್ಮೊಂದಿಗೆ ಸಂಸದರು, ನಗರಸಭೆ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರಿದ್ದು, ಎಲ್ಲರೂ ಜೊತೆಗೂಡಿ ನಗರಸಭೆಯಲ್ಲಿ ಜನಪರ ಆಡಳಿತ ನೀಡಲು ಮುಂದಾಗುತ್ತೇವೆ. ಅಲ್ಲದೇ ನಗರಸಭೆ ವ್ಯಾಪ್ತಿಯಲ್ಲಿರುವ ಸಮಸ್ಯೆಗಳನ್ನು ಬಗೆಹರಿಸುವ ಉದ್ದೇಶ ಹೊಂದಿದ್ದೇವೆ ಎಂದರು.

ನಗರಸಭೆ ಅಧಿಕಾರವಧಿ ಇನ್ನೂ 13 ತಿಂಗಳಿದ್ದು, ಅಧಿಕಾರ ಹಂಚಿಕೆಯಾಗಿದೆಯೇ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಶಾಸಕರು, ಈ ಬಗ್ಗೆ ಯಾವುದೇ ಚರ್ಚೆಯಾಗಿಲ್ಲ. ಬದಲಿಗೆ ಅಭಿ ವೃದ್ಧಿಗೆ ಆದ್ಯತೆ ನೀಡಿದ್ದೇವೆ. ಮುಂದೆ ಆ ರೀತಿಯ ಆಲೋಚನೆ ಬಂದರೆ ಕುಳಿತು ಚರ್ಚಿಸಿ ತೀರ್ಮಾನಿಸುತ್ತೇವೆ ಎಂದರು. ಸಣ್ಣಪುಟ್ಟ ಸಮಾಜಗಳು ಮುಖ್ಯವಾಹಿನಿಗೆ ಬರುವ ಮೂಲಕ ಎಲ್ಲಾ ಅವಕಾಶಗಳನ್ನು ಪಡೆಯಬೇಕೆಂಬುದು ನನ್ನ ಬಯಕೆ. ಅದರಂತೆ ಗಾಣಿಗ ಸಮಾಜದ ಶರವಣ ನಗರಸಭೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.

ಸಂಸದ ಯದುವೀರ್ ಮಾತನಾಡಿ, ಎನ್‌ಡಿಎ ಮೈತ್ರಿಕೂಟದ ಎಲ್ಲಾ ಸದಸ್ಯರ ಬೆಂಬಲದೊಂದಿಗೆ ಹುಣಸೂರು ನಗರಸಭೆ ಅಧ್ಯಕ್ಷರಾಗಿ ಜೆಡಿಎಸ್‌ನ ಶರವಣ ಆಯ್ಕೆಯಾಗಿದ್ದಾರೆ. ಅವರ ಎಲ್ಲಾ ಅಭಿವೃದ್ಧಿ ಕಾರ್ಯಗಳಿಗೆ ನಾವೆಲ್ಲಾ ಬೆಂಬಲವಾಗಿ ನಿಲ್ಲುತ್ತೇವೆ ಎಂದರು. ನೂತನ ಅಧ್ಯಕ್ಷ ಶರವಣ ಮಾತನಾಡಿ, ನಗರಸಭಾ ವ್ಯಾಪ್ತಿ ಕುಡಿಯುವ ನೀರು, ಸ್ವಚ್ಛತೆ, ರಸ್ತೆಗಳು ಸೇರಿದಂತೆ ಮೂಲ ಸೌಕರ್ಯಕ್ಕೆ ಹೆಚ್ಚಿನ ಆದ್ಯತೆ ನೀಡುತ್ತೇನೆ. ನಾನು ಅಧ್ಯಕ್ಷನಾಗಲು ಸಹಕರಿಸಿದ ಶಾಸಕರು, ಸಂಸದರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಅವಿರೋಧವಾಗಿ ಆಯ್ಕೆಯಾದ ಆಶಾ ಮಾತನಾಡಿ, ಅಧ್ಯಕ್ಷರು, ಸದಸ್ಯರ ಸಹಕಾರದೊಂದಿಗೆ ಅಭಿವೃದ್ಧಿ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತೇನೆ ಎಂದರು.

ಸದಸ್ಯೆ ಗೀತಾ ಮಾತನಾಡಿ, ನಾನು ಕಾಂಗ್ರೆಸ್‌ನಿಂದ ಗೆದ್ದು ಕೆಲ ಕಾರಣಗಳಿಂದ ಬೇಸತ್ತು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದಿಂದ ದೂರವಾಗಿ ಜೆಡಿಎಸ್‌ನಲ್ಲಿ ಗುರುತಿಸಿಕೊಂಡಿದ್ದೆ. ಆದರೆ ನಗರಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಮತ ಹಾಕುವ ಮೂಲಕ ಪಕ್ಷದ ಋಣ ತೀರಿಸಿದ್ದೇನೆ ಎಂದರು.





ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಶಾಸಕ ಜಿ.ಡಿ.ಹರೀಶ್‌ಗೌಡ, ಸಂಸದ ಯದುವೀರ್ ಸನ್ಮಾನಿಸಿದರು. ಬಲ ಚಿತ್ರದಲ್ಲಿ ಜೆಡಿಎಸ್, ಬಿಜೆಪಿ ಕಾರ್ಯಕರ್ತರ ಸಂಭ್ರಮಾಚರಣೆ ಕಾಣಬಹುದು.

ವರ್ಷದ ಅಂತ್ಯಕ್ಕೆ ಒಳಚರಂಡಿ ಕಾಮಗಾರಿ ಪೂರ್ಣ



ನಂಜನಗೂಡಿನ ವಿವಿಧೆಡೆ ಶಾಸಕ ದರ್ಶನ್ ಪರಿಶೀಲಿಸಿದರು.

ನಂಜನಗೂಡು, ಸೆ.9– ನನೆಗುದಿಗೆ ಬಿದ್ದಿರುವ ಒಳಚರಂಡಿ ಕಾಮಗಾರಿ ಪೂರ್ಣಗೊಳಿಸಲು 21 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಈ ವರ್ಷದ ಅಂತ್ಯಕ್ಕೆ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ ಶಂಕರಪುರ, ಆನಂದಪುರ, ನೀಲಕಂಠನಗರ ಬಡಾವಣೆಗಳಲ್ಲಿ ನಗರಸಭಾಧ್ಯಕ್ಷ ಶ್ರೀಕಂಠಸ್ವಾಮಿ ಹಾಗೂ ನಗರಸಭಾ ಅಧಿಕಾರಿಗಳ ಜೊತೆ ಸ್ಥಳ ಪರಿಶೀಲಿಸಿ ಬಳಿಕ ಸಾರ್ವಜನಿಕರಿಂದ ಸಮಸ್ಯೆ, ದೂರುಗಳನ್ನು ಆಲಿಸಿ ಮಾತನಾಡಿದ ಅವರು, 2003ರಿಂದಲೂ ಒಳಚರಂಡಿ ಕಾಮಗಾರಿ ಪೂರ್ಣಗೊಳ್ಳದೆ ಜನರಿಗೆ ಸಮಸ್ಯೆಯಾಗಿದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು, ಹೊಸ ಬಡಾವಣೆಗಳಿಗೆ ಸಂಪರ್ಕ ಕಲ್ಪಿಸುವ ಸಲುವಾಗಿ ಮತ್ತೆ 21 ಕೋಟಿ ಅನುದಾನ ನೀಡಲಾಗಿದೆ. ಕಾಮಗಾರಿ ಶೀಘ್ರ ಪೂರ್ಣಗೊಳ್ಳಲಿದೆ. ತಾಲೂಕಿನ ಮಹದೇವನಗರ ಬಳಿ ಒಳಚರಂಡಿ ತ್ಯಾಜ್ಯ ನೀರಿನ ಸಂಸ್ಕರಣೆ ಸಲುವಾಗಿ ಅತ್ಯಾಧುನಿಕ ತಂತ್ರಜ್ಞಾನ ಒಳಗೊಂಡ ವ್ಯವಸ್ಥೆಯನ್ನು ಸಂಸ್ಕರಣಾ ಘಟಕದಲ್ಲಿ ಅಳವಡಿಸಲಾಗಿದೆ. ತ್ಯಾಜ್ಯ ನೀರನ್ನು ಕೃಷಿಗೆ ಬಳಸಲು ಯೋಜನೆ ರೂಪಿಸಲಾಗುವುದು. ತ್ಯಾಜ್ಯ ನೀರು ಮ್ಯಾನ್‌ಹೋಲ್ ಮೇಲೆ ಉಕ್ಕಿ ರಸ್ತೆ ಮೇಲೆ ಹರಿಯುತ್ತಿರುವ ಬಗ್ಗೆ ದೂರು ಕೇಳಿ ಬಂದಿದೆ. ಒಳಚರಂಡಿ ತ್ಯಾಜ್ಯ ನೀರು ಮೇಲೆ ಬರದಂತೆ ಕ್ರಮವಹಿಸಿ ಎಂದು ಈಗಾಗಲೇ ನಗರಸಭಾ ಆಯುಕ್ತರಿಗೆ ಸೂಚಿಸಲಾಗಿದೆ ಎಂದರು.

ಪೌತಿ ಖಾತೆ ಆಂದೋಲನ: ಶಂಕರಪುರ, ಆನಂದಪುರ ಸೇರಿದಂತೆ ಅನೇಕ ಬಡಾವಣೆಗಳಲ್ಲಿ ಮನೆಗಳ ಖಾತೆ ಬದಲಾವಣೆಯಾಗದೆ ಮರಣ ಹೊಂದಿದವರ ಹೆಸರಿನಲ್ಲೇ ಉಳಿದಿರುವುದರಿಂದ ಮನೆ ಕಟ್ಟಲು ಸಾಲ ಸೌಲಭ್ಯ ಅಂಬೇಡ್ಕರ್ ವಸತಿ ಯೋಜನೆ ಫಲಾನುಭವಿಗಳಿಗೆ ತೊಂದರೆಯಾಗಿರುವುದನ್ನು ಗಮನಿಸಿದ್ದೇನೆ. ಮುಂದಿನ ದಿನಗಳಲ್ಲಿ ಪೌತಿ ಖಾತೆ ಆಂದೋಲನ ನಡೆಸಿ ತೊಂದರೆಗಳನ್ನು ನಿವಾರಿಸಿ ಖಾತೆ ಮಾಡಿಕೊಡಲಾಗುವುದು ಎಂದರು.

ಕನಿಷ್ಠ ನೀರಿನ ದರ ನಿಗದಿಗೆ ಕ್ರಮ: ನೀರಿನ ದರದಲ್ಲಿ ಸಾಕಷ್ಟು ನ್ಯೂನತೆ ಕಂಡು ಬಂದಿದೆ. ಈ ಸಮಸ್ಯೆ ಬಗೆಹರಿಸಲು ನಗರಸಭಾಧ್ಯಕ್ಷರು ಮತ್ತು ಆಯುಕ್ತರಿಗೆ ಸೂಚನೆ ನೀಡಲಾಗಿದ್ದು, ನಗರಸಭೆ ಸಾಮಾನ್ಯ ಸಭೆಯಲ್ಲಿ ಚರ್ಚೆ ನಡೆಸಿ ನಿರ್ಣಯ ಕೈಗೊಂಡು ಕನಿಷ್ಠ ಶುಲ್ಕ ನಿಗದಿಗೊಳಿಸಲು ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದರು.

ನಿರುದ್ಯೋಗ ನಿವಾರಣೆಗೆ ಕ್ರಮ: ನಂಜನಗೂಡಿನಲ್ಲಿ ನಿರುದ್ಯೋಗ ಹೆಚ್ಚಾಗಿದ್ದು, ಯುವಕರಿಗೆ ಉದ್ಯೋಗ ಕಲ್ಪಿಸುವ ಸಲುವಾಗಿ ಪ್ರತಿ ವರ್ಷ ಧ್ರುವನಾರಾಯಣ್ ಹುಟ್ಟುಹಬ್ಬದಂದು ಉದ್ಯೋಗ ಮೇಳ ಆಯೋಜಿಸಲಾಗುತ್ತಿದೆ. ಅಲ್ಲದೆ ಪ್ರತಿ ಸೋಮವಾರ ತಾಪಂನಲ್ಲಿರುವ ಶಾಸಕರ ಕಚೇರಿಯಲ್ಲಿ ನಾನು ಲಭ್ಯವಿರುತ್ತೇನೆ. ಉದ್ಯೋಗ ಆಕಾಂಕ್ಷಿಗಳು ತಮ್ಮ ವೈಯಕ್ತಿಕ ವಿವರಗಳೊಂದಿಗೆ ನನ್ನನ್ನು ನೇರವಾಗಿ ಸಂಪರ್ಕಿಸಿದಲ್ಲಿ ವಿವಿಧ ಕಂಪನಿಗಳಲ್ಲಿ ಉದ್ಯೋಗ ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ ನಡೆಸುತ್ತೇನೆ ಎಂದರು.

ಶಾಸಕ ದರ್ಶನ್ ಭರವಸೆ

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ನಗರಸಭಾ ಅಧ್ಯಕ್ಷ ಎನ್.ಶ್ರೀಕಂಠಸ್ವಾಮಿ, ಉಪಾಧ್ಯಕ್ಷೆ ರಿಯಾನಾ ಭಾನು, ಸದಸ್ಯರಾದ ಪ್ರದೀಪ್, ಸಿದ್ದಿಖ್, ರಂಗಸ್ವಾಮಿ, ಸುರೇಶ್, ಮುಖಂಡರಾದ ಅಶೋಕ್, ನಗರಸಭಾ ಆಯುಕ್ತ ನಂಜುಂಡಸ್ವಾಮಿ, ಎಇಇ ಮಹೇಶ್, ಅಧಿಕಾರಿಗಳಾದ ರೇಖಾ ಸೇರಿದಂತೆ ಹಲವರಿದ್ದರು.

ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ ಪ್ರತಿಭಟನೆ

ತಿ.ನರಸೀಪುರ, ಸೆ.9– ಹೈಕೋರ್ಟ್ ಆದೇಶದಂತೆ ಕೂಡಲೇ ಪರಿಶಿಷ್ಟ ಜಾತಿಗೆ ಒಳಮೀಸಲು ಜಾರಿಗೊಳಿಸುವಂತೆ ಒತ್ತಾಯಿಸಿ ಪಟ್ಟಣದಲ್ಲಿ ಸೋಮವಾರ ತಾಲೂಕು ಡಾ.ಬಾಬು ಜಗಜೀವನ್ ರಾಂ ಸಂಘದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ಪಟ್ಟಣದ ಭೈರಾಪುರ ವೃತ್ತದಲ್ಲಿ ಜಮಾಯಿಸಿದ ನೂರಾರು ಪ್ರತಿಭಟನಾಕಾರರು, ಬಾಬೂಜಿ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ತಮಟೆ ನಗಾರಿ ಬಾರಿಸುತ್ತಾ ಪರಿಶಿಷ್ಟ ಜಾತಿಗೆ ಒಳಮೀಸಲು ಜಾರಿಗೊಳಿಸದ ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಅಲ್ಲಿಂದ ಮೆರವಣಿಗೆ ಆರಂಭಿಸಿದ ಅವರು ಕಾಲೇಜು ರಸ್ತೆ ಮೂಲಕ ತಾಲೂಕು ಕಚೇರಿಗೆ ತೆರಳಿ ಪ್ರತಿಭಟನೆ ನಡೆಸಿದರು.

ಸಂಘದ ಅಧ್ಯಕ್ಷ ಸಿ.ಪುಟ್ಟಯ್ಯ ಮಾತನಾಡಿ, ಮಾದಿಗ ಸಮುದಾಯ ಸಾಮಾಜಿಕ, ಆರ್ಥಿಕವಾಗಿ ತೀರಾ ಹಿಂದುಳಿದಿದೆ. ಮಾದಿಗ ಸಮುದಾಯದ ಶ್ರೇಯೋಭಿವೃದ್ಧಿಗೆ ಒಳ ಮೀಸಲು ಅಗತ್ಯವಿದೆ. ಪರಿಶಿಷ್ಟರ ಕೆನೆಪದರು ಮೀಸಲು ಬಗ್ಗೆ ಕಳೆದ ಆ.1 ರಂದು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿದ್ದರೂ ಒಳ ಮೀಸಲಾತಿ ಜಾರಿಗೆ ಸರ್ಕಾರ ಮೀನಾಮೇಷ ಎಣಿಸುತ್ತಿದೆ. ತನ್ನ ಪ್ರಣಾಳಿಕೆಯಲ್ಲಿ ಒಳ ಮೀಸಲಾತಿ ಬಗ್ಗೆ ಪ್ರಸ್ತಾಪಿಸಿದ್ದ ಕಾಂಗ್ರೆಸ್ ಅಧಿಕಾರವಿದ್ದರೂ ಜಾರಿ ಮಾಡದೆ ಸಮುದಾಯವನ್ನು ವಂಚಿಸುತ್ತಿದೆ. ಸರ್ಕಾರ ಇನ್ನಾದರೂ ಒಳ ಮೀಸಲು ಜಾರಿಗೊಳಿಸಬೇಕು. ಇಲ್ಲದಿದ್ದರೇ ನಮ್ಮ ಹೋರಾಟ ತೀವ್ರ ಸ್ವರೂಪ ಪಡೆದುಕೊಳ್ಳಲಿದೆ ಎಂದು ಎಚ್ಚರಿಸಿದರು.

ಸಂಘದ ಮಾಜಿ ಅಧ್ಯಕ್ಷ ಮೂಗೂರು ಎಂ.ಸಿದ್ದರಾಜು ಮಾತನಾಡಿದರು. ಇದೇ ವೇಳೆ ತಹಸೀಲ್ದಾರ್ ಟಿ.ಜಿ. ಸುರೇಶಾಚಾರ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು. ಈ ವೇಳೆ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಡಿ.ವೆಂಕಟೇಶ್, ಖಜಾಂಚಿ ಬಿ.ಎಲ್.ಮಹದೇವ್, ಮುಖಂಡರಾದ ಶೆಟ್ಟಳ್ಳಿ ಗ್ರಾಪಂ ಸದಸ್ಯ ಕೆ.ಶಿವಶಂಕರ್, ಮುತ್ತುರಾಜು, ಎಂ.ಪಿ.ಮಹದೇವಸ್ವಾಮಿ, ಚಿನ್ನಸ್ವಾಮಿ, ನಾರಾಯಣ, ಸೋಮಣ್ಣ, ಉಮೇಶ್, ಬಿ.ಮಹದೇವ್, ಎಸ್.ರಾಜು, ಪುನೀ, ಸುಂದರ್, ಸುಂದರರಾಜು, ಭಾಸ್ಕರ್, ಸೋಮಣ್ಣ, ರಾಜಪ್ಪ, ಮುತ್ತಣ್ಣ, ಲಿಂಗರಾಜು, ಮಹದೇವಣ್ಣ, ಬಸವರಾಜು ಇನ್ನಿತರರಿದ್ದರು.



ತಿ.ನರಸೀಪುರದಲ್ಲಿ ಒಳಮೀಸಲು ಜಾರಿಗೆ ಒತ್ತಾಯಿಸಿ ಪ್ರತಿಭಟನೆ ನಡೆಸಲಾಯಿತು.

ಹೊಸೂರು ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಹೊಸೂರು ಪಿಎಸಿಎಸ್ ಅಧ್ಯಕ್ಷ ಕೃಷ್ಣಮೂರ್ತಿ, ಉಪಾಧ್ಯಕ್ಷ ಕೆಂಪನಾಯಕ ಅವರನ್ನು ಅಭಿನಂದಿಸಲಾಯಿತು.

ಚುಂಚನಕಟ್ಟೆ, ಸೆ.9– ಸಾಲಿಗ್ರಾಮ ತಾಲೂಕಿನ ಹೊಸೂರು ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಹೆಚ್.ಆರ್.ಕೃಷ್ಣಮೂರ್ತಿ, ಉಪಾಧ್ಯಕ್ಷರಾಗಿ ಕೆಂಪನಾಯಕ ಅವಿರೋಧವಾಗಿ ಆಯ್ಕೆಯಾದರು.

ಸಂಘದ ಕಚೇರಿಯಲ್ಲಿ ಸೋಮವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕೃಷ್ಣಮೂರ್ತಿ, ಉಪಾಧ್ಯಕ್ಷ ಸ್ಥಾನಕ್ಕೆ ಕೆಂಪನಾಯಕ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಹಕಾರ ಇಲಾಖೆ ಅಧಿಕಾರಿ ಸಿಡಿಓ ರವಿ ಘೋಷಿಸಿದರು.

ನೂತನ ಅಧ್ಯಕ್ಷ ಕೃಷ್ಣಮೂರ್ತಿ ಮಾತನಾಡಿ, ಸಂಘದ ವ್ಯಾಪ್ತಿಯ ರೈತರಿಗೆ ಸಕಾಲಕ್ಕೆ ಸಾಲದ ನೆರವು ಮತ್ತು ಸಂಘದ ಅಭಿವೃದ್ಧಿಗೆ ಶ್ರಮಿಸುವುದಾಗಿ ತಿಳಿಸಿದರು.

ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಮಾಜಿ ಗ್ರಾಪಂ ಅಧ್ಯಕ್ಷ ಕೃಷ್ಣ, ಮಾಜಿ ಉಪಾಧ್ಯಕ್ಷ ಭಾಸ್ಕರ್, ಮಾಜಿ ಸದಸ್ಯ ಶಿವಣ್ಣ, ಎಪಿಎಂಸಿ ಮಾಜಿ ನಿರ್ದೇಶಕ ಶಿವಸ್ವಾಮಿ, ನಿವೃತ್ತ ಶಿಕ್ಷಕ ಕುಚೇಲ, ಜೆಡಿಎಸ್ ಮುಖಂಡರಾದ ಬಿ.ರಮೇಶ್, ಯಶವಂತ, ರಾಘವೇಂದ್ರ, ರಾಜೇಶ್, ಗಣೇಶ್, ಉಮೇಶ್, ರವಿ ಇತರರು ಅಭಿನಂದಿಸಿದರು.

ಯಾಚೇನಹಳ್ಳಿ ಪಿಎಸಿಎಸ್‌ಗೆ 10.83 ಲಕ್ಷ ನಿವ್ವಳ ಲಾಭ



ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ವೈ.ಎನ್.ಶಂಕರೇಗೌಡ ಉದ್ಘಾಟಿಸಿದರು.

ತಿ.ನರಸೀಪುರ, ಸೆ.9– ಪ್ರಸಕ್ತ ಸಾಲಿನಲ್ಲಿ ಯಾಚೇನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ 10.83 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದು ಸಂಸ್ಥಾಪಕ ಅಧ್ಯಕ್ಷ, ಹಿರಿಯ ಸಹಕಾರಿ ವೈ.ಎನ್.ಶಂಕರೇಗೌಡ ತಿಳಿಸಿದರು.

ಸಂಘದ ಆವರಣದಲ್ಲಿ ನಡೆದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿ ಅವರು, ಸಂಘದಲ್ಲಿ 1608 ಸದಸ್ಯರಿದ್ದು, ಸಂಘದ ಅಧೀನದಲ್ಲಿ ಸಹಕಾರಿ ಜನತಾ ಬಜಾರ್, ನಂದಿನಿ ಉತ್ಪನ್ನಗಳ ಮಾರಾಟ ಕೇಂದ್ರ, ಪ್ರಧಾನಮಂತ್ರಿ ಜನೌಷಧಿ ಕೇಂದ್ರ ಸೇರಿದಂತೆ ಸದಸ್ಯರಿಗೆ ಉಪಯೋಗವಾಗುವ ಕೆಲಸ ಮಾಡಿಕೊಂಡು ಬರಲಾಗಿದೆ ಎಂದರು.

ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಬ್ಯಾಂಕ್‌ನಡಿ ಕಾರ್ಯ ನಿರ್ವಹಿಸುತ್ತಿರುವ ಸಹಕಾರ ಸಂಘಗಳಲ್ಲಿ ನಮ್ಮ ಯಾಚೇನಹಳ್ಳಿ ಸಹಕಾರ ಸಂಘ ಅತಿ ಹೆಚ್ಚು ನೌಕರರಿಗೆ ಉದ್ಯೋಗ ನೀಡಿ ವೇತನ ನೀಡುತ್ತಿದೆ. ಸಂಘದ ಸದಸ್ಯರಿಗೆ 6.97 ಕೋಟಿ ರೂ. ಬಡ್ಡಿ ರಹಿತ ಸಾಲ ನೀಡಲಾಗಿದೆ. ಯಾವುದೇ ಸಂಘ ಅಭಿವೃದ್ಧಿ ಹೊಂದಲು ಸಹಕಾರಿ ಸದಸ್ಯರ ಸಹಕಾರ ಬಹು ಮುಖ್ಯ. ಸಂಘದ ಸರ್ವ ಸದಸ್ಯರು ಸಂಘ ಇನ್ನು ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಹೊಂದಲು ಸಹಕರಿಸಬೇಕು ಎಂದು ಮನವಿ ಮಾಡಿದರು.

ಸಂಘದ ಸಿಇಓ ವೈ.ಕೆ.ಕ್ಯಾತೇಗೌಡ 2023 –24ರ ಆಯವ್ಯಯ ಮಂಡಿಸಿದರು. ಅಲ್ಲದೇ ಸಂಘದಿಂದ ಸದಸ್ಯರಿಗೆ ವೈಯಕ್ತಿಕ ಅಪಘಾತ ವಿಮೆ ಮಾಡಿಸುತ್ತಿರುವುದರಿಂದ 69 ವರ್ಷದ ಸದಸ್ಯರು ತಮ್ಮ ಆಧಾರ್ ನಕಲು ಪ್ರತಿ ಸಂಘದ ಕಚೇರಿಗೆ ತಲುಪಿಸಿ ಇದರ ಸದುಪಯೋಗ ಪಡೆದುಕೊಳ್ಳಿ ಎಂದು ಮನವಿ ಮಾಡಿದರು.

ಈ ವೇಳೆ ಉಪಾಧ್ಯಕ್ಷ ವೈ.ಕೆ.ಬೋರೇಗೌಡ, ನಿರ್ದೇಶಕರಾದ ಪ್ರತಿಭಾ, ಕೆಂಪಮ್ಮ, ಹನುಮಂತಗೌಡ, ಪುಟ್ಟರಾಜು, ಮಹೇಂದ್ರರಾಜು, ನಾಗೇಂದ್ರ, ದುರ್ಗೇಶ್, ಶಿವರಾಮ್, ಆಡಳಿತ ಮಂಡಳಿಯ ಲಕ್ಷ್ಮಿ, ನಂಜೇಗೌಡ, ಮಹದೇವ್, ದಿಲೀಪ್, ನವೀನ್ ಕುಮಾರ್, ಶ್ವೇತ, ಕವನಶ್ರೀ, ಗೀತಾ ಸದಸ್ಯರು, ರೈತರು ಹಾಜರಿದ್ದರು.

ಮೇಗಳಕೊಪ್ಪಲು ಡೈರಿಗೆ 2.19 ಲಕ್ಷ ನಿವ್ವಳ ಲಾಭ



ಸರ್ವ ಸದಸ್ಯರ ವಾರ್ಷಿಕ ಮಹಾ ಸಭೆಯನ್ನು ಅಧ್ಯಕ್ಷ ಸಿದ್ದೇಗೌಡ ಉದ್ಘಾಟಿಸಿದರು

ಬನ್ನೂರು, ಸೆ.9– ಇಲ್ಲಿಗೆ ಸಮೀಪದ ಮೇಗಳಕೊಪ್ಪಲು ಹಾಲು ಉತ್ಪಾದಕರ ಸಹಕಾರ ಸಂಘ ರೈತರ ಸಹಕಾರದಿಂದ ಉತ್ತಮ ಲಾಭಾಂಶದೊಂದಿಗೆ ಯಶಸ್ವಿಯಾಗಿ ಮುನ್ನಡೆಯುತ್ತಿದೆ ಎಂದು ವಿಸ್ತರಣಾಧಿಕಾರಿ ಆರ್.ಪ್ರಮೋದ್ ತಿಳಿಸಿದರು.

ಮೇಗಳಕೊಪ್ಪಲು ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ನಡೆದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಹಾಲು ಉತ್ಪಾದಕರು ಸಂಘಕ್ಕೆ ಗುಣಮಟ್ಟದ ಹಾಲು ಸರಬರಾಜು ಮಾಡಿದ್ದರಿಂದ ಸಹಕಾರ ಸಂಘ ಪ್ರಸಕ್ತ ಸಾಲಿನಲ್ಲಿ 2.19 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ. ಸಂಘದ ಬೆಳವಣಿಗೆಯಲ್ಲಿ ಹಾಲು ಉತ್ಪಾದಕರ ಪಾತ್ರ ಬಹು ದೊಡ್ಡದಿದೆ. ಹೀಗಾಗಿ ಹಾಲು ಉತ್ಪಾದಕರು ಗುಣಮಟ್ಟದ ಹಾಲು ಸರಬರಾಜು ಮಾಡುವ ಮೂಲಕ ಸಂಘವನ್ನು ತಾಲೂಕಿನಲ್ಲೇ ಮಾದರಿಯಾಗಿಸಲು ಸಹಕರಿಸಬೇಕು ಎಂದು ಮನವಿ ಮಾಡಿದರು.

ಡೈರಿ ಅಧ್ಯಕ್ಷ ಸಿದ್ದೇಗೌಡ ಮಾತನಾಡಿ, ರೈತರಿಗೆ ಈಗಾಗಲೇ 1 ಲಕ್ಷಕ್ಕೂ ಹೆಚ್ಚು ಬೋನಸ್ ನೀಡಿದ್ದು ಅದೇ ರೀತಿ ಎಲ್ಲರೂ ಉತ್ತಮ ಹಾಲು ನೀಡಿ ಉಡುಗೊರೆ ಪಡೆಯಬೇಕು ಎಂದರು. ವಾರ್ಷಿಕ ವರದಿಯನ್ನು ಕಾರ್ಯದರ್ಶಿ ಕೆ.ಮಧು ಮಂಡಿಸಿದರು. ಇದೇ ವೇಳೆ ಸಂಘಕ್ಕೆ ಹೆಚ್ಚು ಹಾಲು ಸರಬರಾಜು ಮಾಡಿದ ರೈತರನ್ನು ಸನ್ಮಾನಿಸಲಾಯಿತು. ಉಪಾಧ್ಯಕ್ಷೆ ಜ್ಯೋತಿ, ನಿರ್ದೇಶಕರಾದ ಎಂ.ಎಸ್.ಜಯರಾಮೇಗೌಡ, ಆರ್. ಪುರುಷೋತ್ತಮ, ಕೃಷ್ಣೇಗೌಡ, ಚಿಕ್ಕದಾಸೇಗೌಡ, ಯತಿರಾಜು, ಮಂಜುನಾಥಸ್ವಾಮಿ, ಸಿದ್ದೇಗೌಡ, ಪುಷ್ಪ, ರಾಜೇಶ್ವರಿ, ರೈತರು ಭಾಗವಹಿಸಿದ್ದರು.

ಯುವಕ ಆತ್ಮಹತ್ಯೆ



ನಂಜನಗೂಡು, ಸೆ.9– ಪೋಷಕರು ಬಟ್ಟೆ ಕೊಡಿಸಲಿಲ್ಲವೆಂದು ಯುವಕ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಅಶೋಕಪುರಂನಲ್ಲಿ ಜರುಗಿದೆ.

ಅಶೋಕಪುರಂ ಬಡಾವಣೆ ನಿವಾಸಿ ಮಹದೇವಯ್ಯ ಅವರ ಪುತ್ರ ಎಂ.ಚೇತನ್ (18) ಆತ್ಮಹತ್ಯೆ ಮಾಡಿಕೊಂಡವರು. ಶನಿವಾರ ಪೋಷಕರು ಬೇರೆ ಊರಿಗೆ ತೆರಳಿದ್ದರು. ಚೇತನ್ ಭಾನುವಾರ ತಂದೆಗೆ ಫೋನ್ ಮಾಡಿ ಬಟ್ಟೆ ಕೊಡಿಸುವಂತೆ ಕೇಳಿದ್ದಾನೆ. ತಂದೆ ಮಹದೇವಯ್ಯ ನೀನು ಸಹ ಊರಿಗೆ ಬಾ ಇಲ್ಲೇ ಬಟ್ಟೆ ಕೊಡಿಸುತ್ತೇನೆ ಎಂದಿದ್ದಾರೆ. ಆದರೆ ಚೇತನ್ ಭಾನುವಾರ ರಾತ್ರಿ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಥಳಕ್ಕೆ ಪಟ್ಟಣ ಪೊಲೀಸ್ ಠಾಣೆ ಎಸ್‌ಐ ಪ್ರಕಾಶ್ ಮದ್ಲೂರು ಭೇಟಿ ನೀಡಿ, ಪರಿಶೀಲನೆ ನಡೆಸಿ ಶವವನ್ನು ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಿದರು. ಈ ಸಂಬಂಧ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ವಿದ್ಯುತ್ ಸ್ಪರ್ಶ: ಯುವಕ ಸಾವು

ಹೆಚ್.ಡಿ.ಕೋಟೆ, ಸೆ.9– ವಿದ್ಯುತ್ ಸ್ಪರ್ಶದಿಂದ ಯುವಕ ಸಾವನ್ನಪ್ಪಿರುವ ಘಟನೆ ತಾಲೂಕಿನ ಮೊತ್ತ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ನಿವಾಸಿ ಗುರುಸ್ವಾಮಿ, ದೇವಮಣಿ ದಂಪತಿ ಪುತ್ರ ಆಟೋ ಚಾಲಕ ರವೀಶ್ (21) ಸಾವನ್ನಪ್ಪಿದವರು. ಈತ ಹೊಸ ಮನೆಯ ಸಂಪ್‌ನ ಮೋಟಾರ್‌ಗೆ ವಿದ್ಯುತ್ ಸಂಪರ್ಕ ನೀಡುವ ವೇಳೆ ಆಕಸ್ಮಿಕವಾಗಿ ವಿದ್ಯುತ್ ಸ್ಪರ್ಶವಾಗಿ ಸಾವನ್ನಪ್ಪಿದ್ದಾನೆ.

ಈ ಸಂಬಂಧ ಅಂತರಸಂತೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಹೆಚ್.ಡಿ.ಕೋಟೆ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಶವವನ್ನು ಹಸ್ತಾಂತರಿಸಲಾಯಿತು.

ದೇವಲಾಪುರದಲ್ಲಿ ನೂತನ ಡೈರಿ ಕಟ್ಟಡ ಉದ್ಘಾಟನೆ

ಅಭಿವೃದ್ಧಿ ವಿಚಾರದಲ್ಲಿ ಭೇದಬಾವ ಮಾಡಲ್ಲ: ಶಾಸಕ ಅನಿಲ್

ಹೆಚ್.ಡಿ.ಕೋಟೆ, ಸೆ.9– ನನಗೆ ನನ್ನ ತಾಲೂಕಿನ ಜನತೆ ಮುಖ್ಯ. ನಾನು ಅಭಿವೃದ್ಧಿ ವಿಚಾರದಲ್ಲಿ ಯಾವುದೇ ಕಾರಣಕ್ಕೂ ಭೇದಬಾವ ಮಾಡುವುದಿಲ್ಲ ಎಂದು ಶಾಸಕ ಅನಿಲ್ ತಿಳಿಸಿದರು.

ತಾಲೂಕಿನ ದೇವಲಾಪುರ ಗ್ರಾಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು ಚುನಾವಣೆಯಲ್ಲಿ ನನಗೆ ತಾಲೂಕಿನ ಜನತೆ ಆಶೀರ್ವದಿಸಿದ್ದಾರೆ. ತಾಲೂಕಿನ ಜನತೆ ಕೆಲಸ ಮಾಡುವ ಜೊತೆಗೆ, ಅಭಿವೃದ್ಧಿ ಕಾರ್ಯ ಕೈಗೊಳ್ಳಬೇಕು. ಅದಕ್ಕೆ ಯಾವುದೇ ಭೇದಬಾವ ಮಾಡಬಾರದೆಂದು ನನ್ನ ತಂದೆ ದಿ.ಚಿಕ್ಕಮಾದು ಹಾಗೂ ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಹೇಳಿಕೊಟ್ಟಿದ್ದಾರೆ. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುವ ಮೂಲಕ ಯಾವುದೇ ಭೇದಬಾವ ಮಾಡದೇ ತಾಲೂಕಿನಲ್ಲಿ ಹಂತ ಹಂತವಾಗಿ ಅಭಿವೃದ್ಧಿ ಕಾರ್ಯ ಕೈಗೊಂಡಿದ್ದೇನೆ ಎಂದರು.

ಗ್ರಾಮಕ್ಕೆ ನೂತನ ಡೈರಿ ಕಟ್ಟಡ ಬೇಕು ಎಂದು ನೀವು ಮನವಿ ಸಲ್ಲಿಸಿದ್ದೀರಿ. ಅದರಂತೆ ನೂತನ ಕಟ್ಟಡ ನಿರ್ಮಾಣವಾಗಿದ್ದು, ಮೈಮುಲ್ ನಿರ್ದೇಶಕ ಈರೇಗೌಡರ ಸಮ್ಮುಖದಲ್ಲಿ ಕಟ್ಟಡ ಉದ್ಘಾಟಿಸುತ್ತಿದ್ದೇನೆ. ಹೈನುಗಾರಿಕೆಯಿಂದ ಸಾಕಷ್ಟು ರೈತರ ಬದುಕು ಹಸನುಗೊಂಡಿದೆ. ತಾಲೂಕಿನಲ್ಲಿ ಸಾಕಷ್ಟು ಬಡ ಕುಟುಂಬಗಳು ಹೈನುಗಾರಿಕೆಯಿಂದ ಬದುಕು ಕಟ್ಟಿಕೊಂಡಿವೆ. ಗ್ರಾಮದಲ್ಲಿ ಹಾಲು ಸರಬರಾಜು ಮಾಡುವವರ ಸಂಖ್ಯೆ ಕಡಿಮೆ ಸಂಖ್ಯೆಯಲ್ಲಿದ್ದು, ಮುಂದಿನ ದಿನಗಳಲ್ಲಿ ಹಾಲು ಸರಬರಾಜು ಮಾಡುವವರ ಸಂಖ್ಯೆ ಹೆಚ್ಚಾಗಬೇಕು ಎಂದ ಅವರು, ಸರ್ಕಾರದಿಂದ ದೊರೆಯುವ ಸವಲತ್ತುಗಳನ್ನು ಸದುಪಯೋಗಪಡಿಸಿಕೊಳ್ಳಿ ಎಂದರು.

ನಿಮ್ಮ ಗ್ರಾಮಕ್ಕೆ ಈಗಾಗಲೇ ಸಾಕಷ್ಟು ಅನುದಾನ ನೀಡಿ ಅಭಿವೃದ್ಧಿ ಕಾರ್ಯ ಕೈಗೊಂಡಿದ್ದೇನೆ. ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಅನುದಾನ ನೀಡಿ ಅಭಿವೃದ್ಧಿಗೆ ಮುಂದಾಗುತ್ತೇನೆ. ಇದೀಗ ಗ್ರಾಮದ ಮುಖ್ಯರಸ್ತೆ ಅಭಿವೃದ್ಧಿ ಹಾಗೂ ಸ್ಮಶಾನಕ್ಕೆ ಜಾಗ ನೀಡುವಂತೆ ಬೇಡಿಕೆ ಇಟ್ಟಿದ್ದೀರಿ. ಸದ್ಯದಲ್ಲೇ ಇದನ್ನು ಮಂಜೂರು ಮಾಡಲಾಗುವುದು ಎಂದು ಭರವಸೆ ನೀಡಿದರು.

ಮೈಮುಲ್ ನಿರ್ದೇಶಕ ಈರೇಗೌಡ ಮಾತನಾಡಿ, ಸಹಕಾರ ಸಂಘಕ್ಕೆ ಕಟ್ಟಡ ಇಲ್ಲದ ಕಾರಣ ಶಾಸಕರು, ಒಕ್ಕೂಟದ ಅನುದಾನದಿಂದ ಸುಸಜ್ಜಿತ ನೂತನ ಕಟ್ಟಡ ನಿರ್ಮಿಸಲಾಗಿದ್ದು, ಗ್ರಾಮದ ಹಾಲು ಉತ್ಪಾದಕರು ಗುಣಮಟ್ಟದ ಹಾಲು ಪೂರೈಕೆ ಮಾಡುವ ಮೂಲಕ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು. ಅಲ್ಲದೇ ತಮ್ಮ ರಾಸುಗಳಿಗೆ ವಿಮೆ ಮಾಡಿಸಿಕೊಳ್ಳುವಂತೆ ಸಲಹೆ ನೀಡಿದರು.

ಈ ವೇಳೆ ಡೇರಿ ಅಧ್ಯಕ್ಷ ಡಿ.ಡಿ.ತಿಮ್ಮರಾಜು, ಉಪಾಧ್ಯಕ್ಷ ಕೂಸೇಗೌಡ, ವಿಸ್ತರಣಾಧಿಕಾರಿಗಳಾದ ಆರಿಫ್ ಇಕ್ಬಾಲ್, ರಾಮಪ್ಪ ಬಾರ್ಕಿ, ಪುರಸಭಾ ಸದಸ್ಯ ರಾಜು ಕುಲುಮೆ, ಗ್ರಾಪಂ ಸದಸ್ಯ ಸಣ್ಣೇಗೌಡ, ವಕೀಲ ಕೃಷ್ಣೆಗೌಡ, ಮುಖಂಡರಾದ ನಾಗೇಶ್, ನಿಂಗರಾಜು, ನಾಗರಾಜು, ರಾಜೇಶ್, ಸಣ್ಣಸ್ವಾಮಿ, ಸಿದ್ದಪ್ಪಾಜಿ, ಪಾಪಯ್ಯ, ಗೋವಿಂದೇಗೌಡ, ವಲಸಿರಿ ಉಮೇಶ್, ಗುತ್ತಿಗೆದಾರ ಮಹದೇವು, ಆಡಳಿತ ಮಂಡಳಿ ಸದಸ್ಯರಾದ ಕೂಸೇಗೌಡ, ರಂಗೇಗೌಡ, ಚೆಲುವೇಗೌಡ, ಬೋರೇಗೌಡ, ರವಿ, ಲಕ್ಷ್ಮಮ್ಮ, ಕೆ.ಎಸ್.ಪರಿಮಳ, ಕಾರ್ಯದರ್ಶಿ ಪ್ರದೀಪ್, ಹಾಲು ಪರೀಕ್ಷಕ ರಾಜೇಗೌಡ, ಗ್ರಾಮಸ್ಥರಿದ್ದರು.



ದೇವಲಾಪುರ ಡೈರಿ ನೂತನ ಕಟ್ಟಡವನ್ನು ಶಾಸಕ ಅನಿಲ್ ಉದ್ಘಾಟಿಸಿದರು.

> ತಾಲೂಕಿನಲ್ಲಿ ಹೈನುಗಾರಿಕೆಯಿಂದ ರೈತರ ಜೀವನ ಮಟ್ಟ ಸುಧಾರಿಸಿದೆ ಎಂದರೆ ಅದಕ್ಕೆ ಮೈಮುಲ್ ನಿರ್ದೇಶಕ ಈರೇಗೌಡರ ಪರಿಶ್ರಮವೇ ಕಾರಣ. ಅವರು 4 ಬಾರಿ ನಿರ್ದೇಶಕರಾಗಿ ಉತ್ತಮವಾಗಿ ಸೇವೆ ಸಲ್ಲಿಸಿದ್ದಾರೆ. ಈ ಬಾರಿ ಅವರು ಮೈಮುಲ್ ಅಧ್ಯಕ್ಷರಾಗಬೇಕಿತ್ತು. ಕಾರಣಾಂತರದಿಂದ ಆಗಲಿಲ್ಲ. ಮುಂದಿನ ಬಾರಿ ಅಧ್ಯಕ್ಷರಾಗುತ್ತಾರೆ.
> - ಅನಿಲ್, ಶಾಸಕ.

ಜಯರಾಂ ನಿಧನ

ಸರಗೂರು, ಸೆ.9– ಪಟ್ಟಣದ 9ನೇ ವಾರ್ಡ್ ನಿವಾಸಿ ಜಯರಾಂ(47) ಭಾನುವಾರ ರಾತ್ರಿ ನಿಧನರಾದರು.



ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ನಾಯಕ ಸಮಾಜದ ರುದ್ರಭೂಮಿಯಲ್ಲಿ ಸೋಮವಾರ ಮಧ್ಯಾಹ್ನ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀನಿವಾಸಮೂರ್ತಿ

ತಿ.ನರಸೀಪುರ, ಸೆ.9– ತಾಲೂಕಿನ ಸೋಸಲೆ ಗ್ರಾಮದ ಗೌತಮ ಬುದ್ಧ ಜನಸೇವಾ ಟ್ರಸ್ಟ್ ಅಧ್ಯಕ್ಷ ಶ್ರೀನಿವಾಸಮೂರ್ತಿ (57) ಸೋಮವಾರ ರಾತ್ರಿ ನಿಧನರಾದರು.



ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ನಡೆಯಲಿದೆ.

ಶ್ರೀರಂಗಪಟ್ಟಣ ದಸರೆ ಅಂಬಾರಿ ಹೊಣೆ ಮಹೇಂದ್ರನಿಗೆ



● ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಸೆ.9– ನಾಡಹಬ್ಬ ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ನಡೆಯುವ ದಸರಾದಲ್ಲಿ ಅಂಬಾರಿ ಹೊರುವ ಮೂಲಕ ಮಹೇಂದ್ರ ಆನೆ ಹ್ಯಾಟ್ರಿಕ್ ಸಾಧನೆ ಮಾಡಲಿದೆ. ಎರಡನೇ ತಂಡದಲ್ಲಿ ಅರಮನೆಗೆ ಆಗಮಿಸಿದ್ದರೂ ಮಹೇಂದ್ರ ಅಧಿಕಾರಿಗಳ ವಿಶ್ವಾಸ ಉಳಿಸಿಕೊಂಡು ಮನಗೆದ್ದಿದ್ದಾನೆ. ಈ ಹಿನ್ನೆಲೆಯಲ್ಲಿಯೇ ಶ್ರೀರಂಗಪಟ್ಟಣದ ದಸರೆಯ ಜವಾಬ್ದಾರಿಯನ್ನು ತನ್ನ ಹೆಗಲಿಗೇರಿಸಿಕೊಳ್ಳಲಿದ್ದಾನೆ.

ಸತತ ಮೂರನೇ ವರ್ಷ ದಸರಾ ಮಹೋತ್ಸವದಲ್ಲಿ ಭಾಗವಹಿಸುತ್ತಿರುವ ಮಹೇಂದ್ರ ಕೆಲ ವರ್ಷಗಳ ನಂತರ ಜಂಬೂಸವಾರಿಯಲ್ಲಿ ಪ್ರಮುಖ ಪಾತ್ರ ನಿಭಾಯಿಸುವ ಸಾಮರ್ಥ್ಯ ಹೊಂದಿದ್ದಾನೆ. 41 ವರ್ಷದ ಮಹೇಂದ್ರ 2022 ಮತ್ತು 23ರಲ್ಲಿ ಮೊದಲ ತಂಡದಲ್ಲಿಯೇ ಮೈಸೂರಿಗೆ ಆಗಮಿಸಿ ಅರಮನೆ ಆವರಣದ ಬಿಡಾರ ಸೇರಿತ್ತು. ಆದರೆ, ಈ ಬಾರಿ ಕೆಲ ಗೊಂದಲ ಹಾಗೂ ತಪ್ಪು ನಿರ್ಧಾರದಿಂದಾಗಿ ಎರಡನೇ ತಂಡದಲ್ಲಿ ಆಗಮಿಸಿದ್ದು, ಈಗಾಗಲೇ ಮೊದಲ ತಂಡದ ಗಜಪಡೆಯೊಂದಿಗೆ ತಾಲೀಮಿನಲ್ಲಿ ಪಾಲ್ಗೊಂಡಿದೆ.

ಹ್ಯಾಟ್ರಿಕ್ ಸಾಧನೆ: ಮೈಸೂರು ದಸರಾ ಮಾದರಿಯಲ್ಲಿಯೇ ಶ್ರೀರಂಗಪಟ್ಟಣದಲ್ಲೂ ದಸರಾ ಆಚರಿಸುವ ಪದ್ಧತಿಯಿದ್ದು, ಅಲ್ಲಿ ಆನೆ ಮೇಲೆ ನಾಡದೇವಿ ಚಾಮುಂಡೇಶ್ವರಿಯ ಉತ್ಸವ ಮೂರ್ತಿಯುಳ್ಳ ಮರದ ಅಂಬಾರಿ ಇಟ್ಟು ಮೆರವಣಿಗೆ ಮಾಡಲಾಗುತ್ತದೆ. ಈ ಬಾರಿ ನವರಾತ್ರಿ ಆರಂಭದ ಮರು ದಿನವೇ ಅ.4ರಂದು ಶ್ರೀರಂಗಪಟ್ಟಣ ದಸರಾ ಆಚರಿಸಲು ಉದ್ದೇಶಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರಿಂದ ಯಾವ ಆನೆ ಕಳುಹಿಸಬೇಕು ಎಂದು ಚರ್ಚಿಸಲಾಗುತ್ತಿದ್ದು, ಕಳೆದ ಎರಡು ಬಾರಿ ಶ್ರೀರಂಗಪಟ್ಟಣ ದಸರಾದಲ್ಲಿ ಪಾಲ್ಗೊಂಡು ಸೈ ಎನಿಸಿಕೊಂಡಿರುವ ಮಹೇಂದ್ರನನ್ನೇ ಈ ಬಾರಿಯೂ ಶ್ರೀರಂಗಪಟ್ಟಣಕ್ಕೆ ಕಳುಹಿಸಲು ನಿರ್ಧರಿಸಲಾಗಿದೆ.

ಸುಮಾರು 300ರಿಂದ 400 ಕೆಜಿ ತೂಕದ ಮರದ ಅಂಬಾರಿಯನ್ನು ಕ್ರೇನ್ ಮೂಲಕ ಆನೆ ಮೇಲಿಟ್ಟು ಕಟ್ಟುವ ಪದ್ಧತಿಯಿದೆ. ನಾಲ್ಕು ವರ್ಷದ ಹಿಂದೆ ಪಟಾಕಿ ಶಬ್ದಕ್ಕೆ ಹೆದರಿದ ಅಂಬಾರಿ ಹೊತ್ತಿದ್ದ ಗೋಪಾಲಸ್ವಾಮಿ ಶ್ರೀರಂಗಪಟ್ಟಣ ದಸರೆಯಲ್ಲಿ ಹಿಮ್ಮುಖವಾಗಿ ವೇಗವಾಗಿ ತಿರುಗಿ ಆತಂಕದ ವಾತಾವರಣ ಸೃಷ್ಟಿಸಿತ್ತು. ಮರು ವರ್ಷವೇ ಮೊದಲ ಬಾರಿಗೆ ಆಗಮಿಸಿದ ಮಹೇಂದ್ರನಿಗೆ ಶ್ರೀರಂಗಪಟ್ಟಣ ದಸರೆಯ ಜವಾಬ್ದಾರಿ ವಹಿಸಲಾಗಿತ್ತು. ಮೊದಲ ವರ್ಷವೇ ಅತ್ಯುತ್ತಮವಾಗಿ ವರ್ತಿಸಿದ್ದ ಮಹೇಂದ್ರ ತನ್ನ ಮೇಲೆ ಇಟ್ಟಿದ್ದ ವಿಶ್ವಾಸವನ್ನು ಉಳಿಸಿಕೊಂಡಿತ್ತು. ಇದರಿಂದ ಕಳೆದ ವರ್ಷವೂ ಶ್ರೀರಂಗಪಟ್ಟಣದ ದಸರೆಯಲ್ಲಿ ಯಶಸ್ವಿಯಾಗಿ ಭಾಗವಹಿಸಿತ್ತು ಇದೀಗ ಸತತ ಮೂರನೇ ಬಾರಿಯೂ ಅಂಬಾರಿ ಹೊರುವ ಮೂಲಕ ಹ್ಯಾಟ್ರಿಕ್ ಸಾಧನೆ ಮಾಡಲು ಸಜ್ಜಾಗಿದೆ. ಈ ಹಿಂದೆ ಕ್ಯಾಪ್ಟನ್ ಅಭಿಮನ್ಯು ಶ್ರೀರಂಗಪಟ್ಟಣ ದಸರೆಯಲ್ಲಿ ಅಂಬಾರಿ ಹೊತ್ತು ಹ್ಯಾಟ್ರಿಕ್ ಸಾಧನೆ ಮಾಡಿತ್ತು.



ಶ್ರೀರಂಗಪಟ್ಟಣ ದಸರಾ ಮಹೋತ್ಸವದಲ್ಲಿ ಕಳೆದ ವರ್ಷ ಭಾಗವಹಿಸಿದ್ದ ಮಹೇಂದ್ರ ಆನೆಯನ್ನೇ ಈ ಬಾರಿಯೂ ಕಳುಹಿಸಲಾಗುತ್ತಿದೆ. ಅದರೊಂದಿಗೆ ಯಾವ ಹೆಣ್ಣಾನೆ ಕಳುಹಿಸಬೇಕು ಎಂದು ಇನ್ನು ನಿರ್ಧರಿಸಿಲ್ಲ. ಮಹೇಂದ್ರ ಆನೆ ಸೌಮ್ಯ ಸ್ವಭಾವಿಯಾಗಿದ್ದು, ಜವಾಬ್ದಾರಿ ನಿಭಾಯಿಸಬಲ್ಲ ಸಾಮರ್ಥ್ಯ ಹೊಂದಿದ್ದಾನೆ.

- ಡಾ.ಐ.ಬಿ.ಪ್ರಭುಗೌಡ, ಡಿಸಿಎಫ್

ಮಹೇಂದ್ರನ ಪರಿಚಯ

2018ರಲ್ಲಿ ಸೆರೆ ರಾಮನಗರದ ಜಿಲ್ಲೆಯ ಕಬ್ಬಾಳು ಸೇರಿದಂತೆ ಸುತ್ತಮುತ್ತಲಿನ ಕಾಡಂಚಿನ ಗ್ರಾಮಗಳಲ್ಲಿ ಕಾಣಿಸಿಕೊಂಡು, ಉಪಟಳ ನೀಡುವ ಮೂಲಕ ಸ್ಥಳೀಯರಲ್ಲಿ ಆತಂಕವನ್ನುಂಟು ಮಾಡಿದ್ದ ಕಾಡಾನೆ ಸೆರೆಗೆ ಒತ್ತಡ ಹೆಚ್ಚಾಗಿತ್ತು. ಈ ಹಿನ್ನೆಲೆಯಲ್ಲಿ ಕಾರ್ಯಾಚರಣೆ ಮಾಡಿ ಸೆರೆ ಹಿಡಿದ ಆನೆಯೇ ಮಹೇಂದ್ರನಾಗಿದ್ದು, ನಾಗರಹೊಳೆ ಅಭಯಾರಣ್ಯ ವ್ಯಾಪ್ತಿಯ ಮತ್ತಿಗೂಡು ಕ್ಯಾಂಪ್‌ನಲ್ಲಿ ಪಳಗಿಸಲಾಗಿದೆ. ಮಾವುತ ರಾಜಣ್ಣ ಹಾಗೂ ಕಾವಾಡಿ ಮಲ್ಲಿಕಾರ್ಜುನ ಮಹೇಂದ್ರನನ್ನು ಸಲಹುತ್ತಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಭೀಮಾ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೃಷ್ಣಂ ಪ್ರಣಯ ಸಖಿ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸ್ತ್ರೀ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೀಮಾ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೀಮಾ (ಕ)	4 ಪ್ರದರ್ಶನಗಳು
ರಾಜಕಮಲ್	
ಸರಿಪೋದಾ ಶನಿವಾರಂ (ತೆ)	4 ಪ್ರದರ್ಶನಗಳು
ಸಂಗಂ	
ಗ್ರೇಟೆಸ್ಟ್ ಆಫ್ ಆಲ್ ಟೈಮ್ (ತ)	4 ಪ್ರದರ್ಶನಗಳು
ಲಿಡೋ	
ಕರಿಯಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಭೀಮಾ (ಕ)	4 ಪ್ರದರ್ಶನಗಳು
ಪ್ರಭಾ	
ಅನ್ನ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವಾರ್ಝಾ ಬಯೋಪಿಕ್ ಆಫ್ ಎ ಬಿಲಿಯನ್ ಬಾಯ್ಸ್ (ಮ): ಬೆ.10.20ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.12.55ಕ್ಕೆ, ಸಂ.4ಕ್ಕೆ, ಸರಿಪೋದಾ ಶನಿವಾರಂ (ತೆ): ರಾ.7.10ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಪೆಪೆ (ಕ): ಬೆ.11ಕ್ಕೆ, ಸಂ.4.30ಕ್ಕೆ, ಸ್ತ್ರೀ 2 (ಹಿಂ): ಮ.1.30ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ಅಫ್ರೇಡ್ (ಇಂ): ಬೆ.11.30ಕ್ಕೆ, ರಾ.10ಕ್ಕೆ, ಕೊಟೇಷನ್ ಗ್ಯಾಂಗ್ ಪಾರ್ಟ್ 1 (ತ): ಮ.1.30ಕ್ಕೆ, ಸರಿಪೋದಾ ಶನಿವಾರಂ (ತೆ): ಸಂ.4ಕ್ಕೆ, ಲಾಫಿಂಗ್ ಬುದ್ಧ (ಕ): ರಾ.7.20ಕ್ಕೆ.
ಸ್ಕ್ರೀನ್ 4	ಕೃಷ್ಣಂ ಪ್ರಣಯ ಸಖಿ (ತ): ಬೆ.10.05ಕ್ಕೆ, ರಾ.7.05ಕ್ಕೆ, ರಾ.10.10ಕ್ಕೆ, ಭೀಮಾ (ಕ): ಮ.1.15ಕ್ಕೆ, ಅಹೋ ವಿಕ್ರಮಾರ್ಕ (ತೆ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821-2973519

ಸ್ಕ್ರೀನ್ 1	ಕೃಷ್ಣಂ ಪ್ರಣಯ ಸಖಿ (ಕ): ಬೆ.10.30ಕ್ಕೆ, ಪೆಪೆ (ಕ): ಮ.1.35ಕ್ಕೆ, ಲಾಫಿಂಗ್ ಬುದ್ಧ (ಕ): ಸಂ.4.05ಕ್ಕೆ, ವಾರ್ಝಾ ಬಯೋಪಿಕ್ ಆಫ್ ಎ ಬಿಲಿಯನ್ ಬಾಯ್ಸ್ (ಮ): ಸಂ.6.45ಕ್ಕೆ, ಸ್ತ್ರೀ 2 (ಹಿಂ): ರಾ.9.15ಕ್ಕೆ.
ಸ್ಕ್ರೀನ್ 2	ಕೃಷ್ಣಂ ಪ್ರಣಯ ಸಖಿ (ಕ): ಮ.12.30ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ, ಭೀಮಾ (ಕ): ಮ.3.35ಕ್ಕೆ.
ಸ್ಕ್ರೀನ್ 3	ಭೀಮಾ (ಕ): ಮ.12.45ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.3.45ಕ್ಕೆ, ಸ್ತ್ರೀ 2 (ಹಿಂ): ಸಂ.6.45ಕ್ಕೆ, ದೇವಧೂತನ್ (ಮ): ರಾ.9.30ಕ್ಕೆ.
ಸ್ಕ್ರೀನ್ 4	ಪೆಪೆ (ಕ): ಬೆ.10.40ಕ್ಕೆ, ಮ.3.45ಕ್ಕೆ, ಅಹೋ ವಿಕ್ರಮಾರ್ಕ (ತೆ): ಮ.1.05ಕ್ಕೆ, ಸರಿಪೋದಾ ಶನಿವಾರಂ (ತೆ): ಸಂ.6.15ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಜೆಕೆ ಟೈರ್ಸ್ ಬಳಿ ಹೊಂಡಕ್ಕೆ ಮಗುಚಿ ಬಿದ್ದ ಗೂಡ್ಸ್ ಆಟೋ

ಮೊದಲೇ ಗುಂಡಿಮಯವಾಗಿದ್ದ ರಸ್ತೆ ಈಗ ಜಲಮಯ; ವಾಹನ ಚಾಲಕರು ಹೈರಾಣ



ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿ ಮಳೆ ನೀರು ತುಂಬಿದ್ದ ರಸ್ತೆ ಹೊಂಡಕ್ಕಿಳಿದು ಮಗುಚಿ ಬಿದ್ದಿದ್ದ ಗೂಡ್ಸ್ ಆಟೋವನ್ನು ಸಾರ್ವಜನಿಕರು ಮೇಲೆತ್ತುತ್ತಿರುವುದು.

ಮೈಸೂರು, ಸೆ.9(ಎಸ್‌ಬಿಡಿ)– ಹೊಂಡಮಯ ರಸ್ತೆಯಲ್ಲಿ ಗೂಡ್ಸ್ ಆಟೋ ಮಗುಚಿ ಬಿದ್ದ ಘಟನೆ ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿ ಸಂಭವಿಸಿದೆ.

ಹೆಬ್ಬಾಳು ರಿಂಗ್ ರಸ್ತೆ ಸಂಪರ್ಕಿಸುವ ಜೆ.ಕೆ.ಟೈರ್‌ನ 2ನೇ ರೇಡಿಯಲ್ ಪ್ಲಾಂಟ್ ಪಕ್ಕದ ರಸ್ತೆಯಲ್ಲಿ ಸೋಮವಾರ ಸಂಜೆ 6 ಗಂಟೆ ವೇಳೆಯಲ್ಲಿ ಈ ಘಟನೆ ಸಂಭವಿಸಿದ್ದು, ಅದೃಷ್ಟವಶಾತ್ ಚಾಲಕ ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾಗಿದ್ದಾರೆ.

ಈ ರಸ್ತೆ ಹಾಳಾಗಿ ಹಲವು ವರ್ಷಗಳೇ ಕಳೆದಿವೆ. ಹೆಜ್ಜೆ ಹೆಜ್ಜೆಗೂ ಗುಂಡಿಗಳಿವೆ. ದೊಡ್ಡ ಹೊಂಡಗಳೂ ಸಾಕಷ್ಟಿವೆ. ಬೆಳಗ್ಗೆಯಿಂದ ಮಳೆಯಾಗುತ್ತಿದ್ದು ಹೊಂಡಗಳಲ್ಲಿ ನೀರು ತುಂಬಿದೆ. ಪರಿಣಾಮ ಹೊಂಡಗಳನ್ನು ಗುರುತಿಸುವುದು ಸಾಧ್ಯವಿಲ್ಲ. ಇದೇ ಕಾರಣದಿಂದ ಸೆಂಟ್ರಿಂಗ್ ವಸ್ತುಗಳನ್ನು ತುಂಬಿಕೊಂಡು ಸಾಗುತ್ತಿದ್ದ ಅಪೆ ಗೂಡ್ಸ್ ಆಟೋ ಮಗುಚಿ ಬಿದ್ದಿದೆ. ತಕ್ಷಣ ಸಾರ್ವಜನಿಕರು ದಾವಿಸಿ ಚಾಲಕನನ್ನು ರಕ್ಷಿಸಿದ್ದಾರೆ. ಬಳಿಕ ಆಟೋದಲ್ಲಿದ್ದ ಲೋಡ್ ಅನ್ನು ಕೆಳಗಿಳಿಸಿ, ಆಟೋವನ್ನು ಮೇಲೆತ್ತಿದ್ದಾರೆ.

ನಿತ್ಯ ನರಕಯಾತನೆ: ಈ ರಸ್ತೆಯಲ್ಲಿ ಕಾರ್ಮಿಕರು ಸೇರಿದಂತೆ ನಿತ್ಯ ಸಾವಿರಾರು ಜನ ಓಡಾಡುತ್ತಾರೆ. ಹಲವು ಕೈಗಾರಿಕೆಗಳಿಗೆ ಕಚ್ಚಾ ವಸ್ತು ಹಾಗೂ ಉತ್ಪನ್ನಗಳನ್ನು ಸಾಗಿಸುವ ನೂರಾರು ವಾಹನಗಳು ಸಂಚರಿಸುತ್ತವೆ. ಆದರೆ ಈ ರಸ್ತೆಯಲ್ಲಿ ಸಂಚರಿಸುವುದೇ ಒಂದು ದೊಡ್ಡ ಸವಾಲು. ನಿತ್ಯ ಓಡಾಡುವವರಿಗೆ ನರಕಯಾತನೆ. ಮಳೆಯಲ್ಲಿ ಗುಂಡಿ–ಹೊಂಡಗಳನ್ನು ಗುರುತಿಸಲಾಗದೆ ಸರ್ಕಸ್ ಮಾಡಬೇಕಾಗುತ್ತದೆ. ನಿತ್ಯ ಒಬ್ಬರಾದರೂ ಬಿದ್ದು, ಗಾಯಗೊಳ್ಳುತ್ತಿದ್ದಾರೆ ಎಂದು ಸಾರ್ವಜನಿಕರು ಅಲವತ್ತುಕೊಂಡಿದ್ದಾರೆ.

ತುರ್ತು ದುರಸ್ತಿಗೆ ಮನವಿ: ಕನಿಷ್ಠ ಸೌಕರ್ಯಗಳೂ ಇಲ್ಲವಾದರೆ ಕೈಗಾರಿಕೋದ್ಯಮದ ಅಭಿವೃದ್ಧಿ ಅಸಾಧ್ಯ. ಕೈಗಾರಿಕೆಗಳಿಗೆ ಉತ್ತಮ ಸಂಪರ್ಕ ವ್ಯವಸ್ಥೆ ಬಹಳ ಮುಖ್ಯ. ಆದರೆ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿ ಉತ್ತಮ ರಸ್ತೆಗಳೇ ಇಲ್ಲವಾಗಿವೆ. ಜೆ.ಕೆ.ಟೈರ್ಸ್ ರೇಡಿಯಲ್ ಪ್ಲಾಂಟ್ ಪಕ್ಕದ ರಸ್ತೆಯನ್ನು ಆ ಸಂಸ್ಥೆಯಿಂದಲೇ ಅಭಿವೃದ್ಧಿಪಡಿಸಿದ್ದಾಗಿ ತಿಳಿದಿದ್ದೇನೆ. ನಂತರದಲ್ಲಿ ಸಂಬಂಧಪಟ್ಟವರು ಸರಿಯಾಗಿ ನಿರ್ವಹಣೆ ಮಾಡಿಲ್ಲ. ರಸ್ತೆ ಸಂಪೂರ್ಣ ಹಾಳಾಗಿ ಎರಡು ವರ್ಷಗಳೇ ಕಳೆದಿವೆ. ಇಂದು ಗೂಡ್ಸ್ ಆಟೋ ಮಗುಚಿ ಬಿದ್ದಿದೆ ಎಂದರೆ ದ್ವಿಚಕ್ರ ವಾಹನ ಸವಾರರ ಪಾಡೇನು?. ಮಹಿಳಾ ಕಾರ್ಮಿಕರು ಜೀವ ಭಯದಲ್ಲಿ ಓಡಾಡುವಂತಹ ದುಸ್ಥಿತಿ ನಿರ್ಮಾಣವಾಗಿದೆ. ಗುಂಡಿ–ಹೊಂಡಗಳನ್ನು ತಪ್ಪಿಸಲು ಹೋಗಿ ಯಾವ ವಾಹನಗಳು ಡಿಕ್ಕಿ ಹೊಡೆಯುತ್ತವೇ ಎಂಬ ಆತಂಕದಲ್ಲೇ ಓಡಾಡುತ್ತಾರೆ. ಗಂಭೀರ ಅಪಘಾತದಿಂದ ಸಾವು–ನೋವು ಸಂಭವಿಸುವ ಮುನ್ನ ಈ ರಸ್ತೆ ದುರಸ್ತಿಗೆ ಸಂಬಂಧಪಟ್ಟವರು ತುರ್ತು ಕ್ರಮ ವಹಿಸಬೇಕು. ಈ ಬಗ್ಗೆ ನಮ್ಮ ಕೈಗಾರಿಕಾ ಸಂಘ–ಸಂಸ್ಥೆಗಳು ಒತ್ತಡ ಹೇರಬೇಕು ಎಂದು ಕೈಗಾರಿಕೋದ್ಯಮಿ ಬಿ.ಚರಣ್ ಮನವಿ ಮಾಡಿದ್ದಾರೆ.

ಒಳ ಮೀಸಲಾತಿ ಅನುಷ್ಠಾನಕ್ಕೆ ಆಗ್ರಹಿಸಿ ಕದಸಂಸ ಪ್ರತಿಭಟನೆ

● ಅದುವರೆಗೆ ಯಾವ ನೇಮಕಾತಿ ಮಾಡದಂತೆಯೂ ಒತ್ತಾಯ ● ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಕೆ

ಮೈಸೂರು, ಸೆ.9(ಜಿಎ)–ಸುಪ್ರೀಂ ಕೋರ್ಟ್ ತೀರ್ಪಿನಂತೆ ರಾಜ್ಯ ಸರ್ಕಾರ ಪರಿಶಿಷ್ಟ ಜಾತಿಯವರಿಗೆ ಒಳಮೀಸಲಾತಿ ಅನುಷ್ಠಾನಗೊಳಿಸಬೇಕೆಂದು ಒತ್ತಾಯಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಕದಸಂಸ) ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಟೆರೇಷಿಯನ್ ಕಾಲೇಜು ಬಳಿಯಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆ ನಡೆಸಿ, ಬಳಿಕ ಸಮಾವೇಶಗೊಂಡು ಘೋಷಣೆಗಳನ್ನು ಕೂಗಿ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿದರು.

ಪರಿಶಿಷ್ಟರ ಮೀಸಲಾತಿ ಪರಿಶಿಷ್ಟ ಜನಾಂಗದ ವ್ಯಾಪ್ತಿಯ 101 ಜಾತಿಗಳಲ್ಲಿ ಸಮವಾಗಿ ಹಂಚಿಕೆಯಾಗಿಲ್ಲ ಎಂಬ ಆತಂಕ ಹಾಗೂ ಅಸಹನೆಯಿಂದ ಮೂರು ದಶಕಗಳಿಂದ ರಾಜ್ಯಾದ್ಯಂತ ನಿರಂತರವಾಗಿ ಈಗಾಗಲೇ ಹೋರಾಟ ನಡೆಯುತ್ತಿವೆ. ಹಲವಾರು ಹೋರಾಟಗಾರರು ಜೀವ, ಜೀವನ ಕಳೆದುಕೊಂಡಿದ್ದಾರೆ. ಪರಿಶಿಷ್ಟರ ಮೀಸಲಾತಿ ವರ್ಗೀಕರಣ ಮಾಡಲು ಕರ್ನಾಟಕ, ಆಂಧ್ರ ಪಂಜಾಬ್ ಸೇರಿದಂತೆ ಹಲವು ರಾಜ್ಯಗಳಲ್ಲಿ ನಡೆದ ಹೋರಾಟಗಳ ಹಿನ್ನೆಲೆಯಲ್ಲಿ ಹತ್ತಾರು ರಾಜ್ಯ ಸರಕಾರಗಳು ರಚಿಸಿದ ಆಯೋಗಗಳು ನೀಡಿದ ವರದಿಗಳನ್ನು ಪರಿಶೀಲಿಸಿದ ಸುಪ್ರೀಂ ಕೋರ್ಟ್‌ನ 7 ನ್ಯಾಯಮೂರ್ತಿಗಳ ಸಂವಿಧಾನ ಪೀಠ ಆ.1ರಂದು ಐತಿಹಾಸಿಕ ತೀರ್ಪು ನೀಡಿ ಈ ವಿವಾದಕ್ಕೆ ತೆರೆ ಎಳೆದಿದೆ. ಹೀಗಾಗಿ ರಾಜ್ಯ ಸರಕಾರ ಒಳ ಮೀಸಲಾತಿ ಅನುಷ್ಠಾನಗೊಳಿಸಿ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದರು.

ಹಕ್ಕೊತ್ತಾಯಗಳು: ಸುಪ್ರೀಂ ಕೋರ್ಟ್ 7 ನ್ಯಾಯಾಧೀಶರ ತೀರ್ಪಿನಂತೆ ಪರಿಶಿಷ್ಟರ ಮೀಸಲಾತಿಯಲ್ಲಿ ಒಳ ಮೀಸಲಾತಿ ಅನುಷ್ಠಾನ ಮಾಡಬೇಕು. 2023–24 ಮತ್ತು 2024–25ನೇ ಸಾಲಿನಲ್ಲಿ 25,391 ಕೋಟಿ ಎಸ್‌ಸಿಪಿ, ಟಿಎಸ್‌ಪಿ ಹಣವನ್ನು ದುರ್ಬಳಕೆ ಮಾಡಿಕೊಂಡಿರುವ ರಾಜ್ಯ ಸರ್ಕಾರ ಈ ಸಮಾಜದ ಅಭಿವೃದ್ಧಿಗೆ ವಾಪಸ್ ನೀಡಲಿ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನ ಸ್ಥಗಿತ ಮಾಡಲಾಗಿದೆ. ಮೆರಿಟ್ ವಿದ್ಯಾರ್ಥಿ ವೇತನ ಮತ್ತು ವಿದೇಶ ವ್ಯಾಸಂಗದ ಪ್ರಬುದ್ಧ ಯೋಜನೆ ರದ್ದು ಮಾಡಿದ್ದು, ಕೂಡಲೇ ಪುನರಾರಂಭಿಸಬೇಕು. ಪರಿಶಿಷ್ಟರ ಮೀಸಲಾತಿ ವರ್ಗೀಕರಣವಾಗುವವರೆಗೂ ಸರ್ಕಾರ ಎಲ್ಲಾ ಸರ್ಕಾರಿ ನೇಮಕಾತಿಗಳನ್ನು ಸ್ಥಗಿತಗೊಳಿಸಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ರಾಜ್ಯಾಧ್ಯಕ್ಷ ಡಾ.ಎನ್.ಮೂರ್ತಿ, ಜಿಲ್ಲಾಧ್ಯಕ್ಷ ಶಂಕರ್, ಮೈಸೂರು ತಾಲೂಕು ಅಧ್ಯಕ್ಷ ಸ್ವಾಮಿ, ತಿ.ನರಸೀಪುರ ತಾಲೂಕು ಅಧ್ಯಕ್ಷ ಬಲ್ಲಯ್ಯ, ರವೀಶ್, ಸಿದ್ದಪ್ಪ ಗಿರೀಶ್ ಕುಮಾರ್ ಸೇರಿದಂತೆ ಹಲವರು ಭಾಗವಹಿಸಿದ್ದರು.



ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ಒಳಮೀಸಲಾತಿ ಅನುಷ್ಠಾನಗೊಳಿಸಬೇಕೆಂದು ಜಿಲ್ಲಾಧಿಕಾರಿ ಕಚೇರಿಗೆ ಮನವಿ ಸಲ್ಲಿಸಿದರು.

ಶಾಲೆಗಳಲ್ಲಿ ಮಕ್ಕಳಿಗೆ ಆಧಾರ್ ನೋಂದಣಿ

ಮೈಸೂರು, ಸೆ. 9(ಆರ್‌ಕೆ)– ಶಾಲೆಗಳಲ್ಲಿ ಮಕ್ಕಳಿಗೆ ಆಧಾರ್ ನೋಂದಣಿ ಶಿಬಿರಗಳು ಪ್ರಗತಿಯಲ್ಲಿವೆ.


ಸರ್ಕಾರದ ಸುತ್ತೋಲೆಯಂತೆ ಮೈಸೂರು ಜಿಲ್ಲೆಯಾದ್ಯಂತ ಎಲ್ಲಾ ಸರ್ಕಾರಿ, ಖಾಸಗಿ, ಅನುದಾನಿತ ಶಾಲೆಗಳಲ್ಲಿ 1ರಿಂದ 10ನೇ ತರಗತಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಆಧಾರ್ ನೋಂದಣಿ, ತಿದ್ದುಪಡಿ, ವಿಳಾಸ ಬದಲಾವಣೆಯಂತಹ ಅಪ್‌ಡೇಟ್ ಮಾಡಿಸುವ ಶಿಬಿರಗಳು ಕಳೆದ ಒಂದು ತಿಂಗಳಿಂದ ನಡೆಯುತ್ತಿವೆ ಎಂದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಜವರೇಗೌಡ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಜಿಲ್ಲೆಯ ಬಿಇಓಗಳ ಮೂಲಕ ಎಲ್ಲಾ ಶಾಲೆಗಳಲ್ಲಿ ಶಿಬಿರ ನಡೆಸಲಾಗುತ್ತಿದ್ದು, ಆಧಾರ್ ಸೇವಾ ಕೇಂದ್ರದ ಅಧಿಕಾರಿಗಳು, ಸಿಬ್ಬಂದಿಗಳಿಂದ ಆಧಾರ್ ಅಪ್‌ಡೇಟ್ ಪ್ರಕ್ರಿಯೆ ನಡೆಸುತ್ತಿದ್ದು, ಪೋಷಕರನ್ನು ಕರೆಸಿ ಅದಕ್ಕೆ ನಿಗದಿಯಾಗಿರುವ ಅಧಿಕೃತ ಶುಲ್ಕ ಪಾವತಿಸಿಕೊಂಡು ಮಕ್ಕಳಿಗೆ ನೋಂದಣಿ, ತಿದ್ದುಪಡಿ ಮಾಡಿಸುತ್ತಿದ್ದೇವೆ ಎಂದು ಅವರು ತಿಳಿಸಿದರು.

ಮೈಸೂರಿನ ಆಧಾರ್ ಸೇವಾ ಕೇಂದ್ರದ ವ್ಯವಸ್ಥಾಪಕ ಕರ್ನಲ್ (ನಿವೃತ್ತ) ಎನ್.ಜಿ. ಕೃಷ್ಣಪ್ರಸಾದ್ ಈ ಕುರಿತು ಪ್ರತಿಕ್ರಿಯಿಸಿದ್ದು, ಬೆಂಗಳೂರಿನ ಶಾಲಾ ಶಿಕ್ಷಣ ಇಲಾಖೆ ಆಯುಕ್ತರ ಸುತ್ತೋಲೆ ಹೊರಡಿಸಿರುವುದರಿಂದ ಶಾಲೆಗಳಲ್ಲಿ ಆಧಾರ್ ನೋಂದಣಿ, ಅಪ್‌ಡೇಟ್ ಪ್ರಕ್ರಿಯೆ ನಡೆಸುತ್ತಿದ್ದೇವೆ ಎಂದರು.

ಹಿರಿಯ ಪತ್ರಕರ್ತ ವಸಂತ ನಾಡಿಗೇರ್ ನಿಧನ

ಬೆಂಗಳೂರು: ಹಿರಿಯ ಪತ್ರಕರ್ತ ವಸಂತ ನಾಡಿಗೇರ್ ಸೋಮವಾರ ನಸುಕಿನ ಜಾವ ತೀವ್ರ ಹೃದಯಾಘಾತದಿಂದ ನಿಧನರಾಗಿದ್ದಾರೆ. ಅವರಿಗೆ 59 ವರ್ಷ ವಯಸ್ಸಾಗಿತ್ತು.



ವಿಜಯ ಕರ್ನಾಟಕ ಪತ್ರಿಕೆಯಲ್ಲಿ 1998 ರಿಂದ 2015 ರವರೆಗೆ ಸುದ್ದಿ ಸಂಪಾದಕರಾಗಿದ್ದ ವಸಂತ್ ನಾಡಿಗೇರ್ ಹಲವು ಮಾಧ್ಯಮಗಳಲ್ಲಿ ಕರ್ತವ್ಯ ನಿರ್ವಹಿಸಿದ್ದರು. ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಬಳಗ ಅಗಲಿದ್ದಾರೆ.

ಕಳೆದ ಮೂರೂವರೆ ದಶಕದಿಂದ ಕನ್ನಡ ಪತ್ರಿಕೋದ್ಯಮದಲ್ಲಿ ಕೆಲಸ ಮಾಡುತ್ತಿದ್ದ ವಸಂತ್ ನಾಡಿಗೇರ ಅವರು ಸುದ್ದಿಗಳಿಗೆ ಆಕರ್ಷಕ ತಲೆಬರಹ ನೀಡುವುದರಲ್ಲಿ ಜನಪ್ರಿಯರಾಗಿದ್ದರು. ಅವರು ಕನ್ನಡ ಪ್ರಭ, ವಿಜಯಕರ್ನಾಟಕ, ವಿಶ್ವವಾಣಿ ನಂತರ ಎರಡು ವರ್ಷಗಳಿಂದ ಸಂಯುಕ್ತ ಕರ್ನಾಟಕ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದರು. ವಸಂತ ನಾಡಿಗೇರ್ ಅವರ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಅನೇಕ ಗಣ್ಯರು, ನಾಡಿನ ಹಿರಿಯ ಪತ್ರಕರ್ತರು, ಸಾಹಿತಿಗಳು ಕಂಬನಿ ಮಿಡಿದಿದ್ದಾರೆ.

ಕುಂಬಾರಕೊಪ್ಪಲು ಸರ್ಕಾರಿ ಶಾಲೆಯಲ್ಲಿ ಕಲಿಸು ಫೌಂಡೇಷನ್‌ನ 100ನೇ ಗ್ರಂಥಾಲಯ ಆರಂಭ

ಸಂಸದ ಯದುವೀರರಿಂದ ಉದ್ಘಾಟನೆ

ಮೈಸೂರು, ಸೆ9(ಜಿಎ)– ಸರ್ಕಾರಿ ಶಾಲೆಗಳಲ್ಲೂ ಖಾಸಗಿ ಶಾಲೆಗಳಂತೆ ಉತ್ತಮ ಸೌಲಭ್ಯ, ಗುಣಮಟ್ಟದ ಶಿಕ್ಷಣ ಸಿಗಬೇಕು ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಪ್ರತಿಪಾದಿಸಿದರು.

ಕಲಿಸು ಫೌಂಡೇಷನ್ ವತಿಯಿಂದ ಕುಂಬಾರ ಕೊಪ್ಪಲಿನ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಿರ್ಮಿಸಿರುವ 100ನೇ ಗ್ರಂಥಾಲಯ ಉದ್ಘಾಟಿಸಿ ಮಾತನಾಡಿದ ಅವರು, ಇಂದು ಶಿಕ್ಷಣ ವ್ಯವಸ್ಥೆ ಸಾಕಷ್ಟು ಬದಲಾಗಿದೆ. ಖಾಸಗಿ ಶಾಲೆಗಳಂತೆ ಸರ್ಕಾರಿ ಶಾಲೆಗಳಲ್ಲೂ ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡಬೇಕಾದ ಅಗತ್ಯತೆ ಇದೆ. ಶಿಕ್ಷಣದ ಮಹತ್ವ ಅರಿತಿರುವ ಕಲಿಸು ಫೌಂಡೇಷನ್ ನಿರ್ಮಿಸಿರುವ 100ನೇ ಗ್ರಂಥಾಲಯ ಇದಾಗಿದ್ದು, ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು. ನಂತರ ಯದುವೀರ್ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಈ ವೇಳೆ ವಿದ್ಯಾರ್ಥಿಗಳು ಕುತೂಹಲದಿಂದ ಸಂಸದರಿಗೆ ಹಲವು ಪ್ರಶ್ನೆಗಳನ್ನು ಕೇಳಿದರು.

ಪ್ರಶ್ನೆ : ನಿಮ್ಮ ನೆಚ್ಚಿನ ಶಿಕ್ಷಕರು ಯಾರು?

ಯದುವೀರ್ : ನಾನು ಓದಿದ್ದು, ಬೆಂಗಳೂರಿನ ವಿದ್ಯಾನಿಕೇತನ ಶಾಲೆಯಲ್ಲಿ. ನನ್ನ ಬಾಲ್ಯ ನಿಮ್ಮಂತೆಯೇ ಇತ್ತು ಸರ್ಕಾರಿ ಬಸ್‌ನಲ್ಲಿ ಶಾಲೆಗೆ ಹೋಗುತ್ತಿದ್ದೆ. ಕ್ರೀಡೆಗಳಲ್ಲಿ ಹೆಚ್ಚು ಭಾಗವಹಿಸುತ್ತಿದ್ದೆ. ಪಿಟಿ ತರಗತಿ ಎಂದರೆ ಅಚ್ಚು ಮೆಚ್ಚು ನನಗೆ ಬೋಧಿಸಿದ ಎಲ್ಲರೂ ಉತ್ತಮ ಶಿಕ್ಷಕರಾಗಿದ್ದಾರೆ.

ಪ್ರಶ್ನೆ : ಗುಣಮಟ್ಟದ ಶಿಕ್ಷಣ ಕುರಿತು ನಿಮ್ಮ ಅಭಿಪ್ರಾಯ ಏನು?

ಯದುವೀರ್ : ಖಾಸಗಿ ಶಾಲೆಯಂತೆಯೇ ಉತ್ತಮ ಸೌಲಭ್ಯ, ಕಲಿಕೆಯ ವಾತಾವರಣ, ಉನ್ನತ ತಂತ್ರಜ್ಞಾನ ಸರ್ಕಾರಿ ಶಾಲಾ ಮಕ್ಕಳಿಗೂ ಸಿಗಬೇಕು. ಸಮಗ್ರ ಶಿಕ್ಷಣದ ಜತೆಗೆ ಕೌಶಲ್ಯತೆ ದೊರಕಬೇಕು. ಕೌಶಲ್ಯಾಭಿವೃದ್ಧಿಯಾದರೆ ದೇಶವೂ ಅಭಿವೃದ್ಧಿಯಾಗುತ್ತದೆ.

ಪ್ರಶ್ನೆ : ವಿದ್ಯಾರ್ಥಿಗಳಿಗೆ ನಿಮ್ಮ ಕಿವಿ ಮಾತೇನು?

ಯದುವೀರ್ : ಕಿವಿಮಾತು ಹೇಳುವಂತಹ ಸಾಧನೆಯನ್ನೇನೂ ನಾನು ಇನ್ನೂ ಮಾಡಿಲ್ಲ. ಓದುವ ಸಮಯದಲ್ಲಿ ಓದಿ. ಶ್ರೇಷ್ಠ ಭಾರತಕ್ಕಾಗಿ ಶ್ರಮಿಸಿ. ನಿಮ್ಮ ಆಸಕ್ತಿಗೆ ಅನುಗುಣವಾಗಿ ಗುರಿಸಾಧನೆಯೆಡೆಗೆ ಮುನ್ನಡೆಯಿರಿ.

ಪ್ರಶ್ನೆ : ಸಮಾಜ ಸೇವೆ ಕುರಿತು ನಿಮ್ಮ ಅಭಿಪ್ರಾಯ. ರಾಜಕೀಯಕ್ಕೆ ನೀವು ಬಂದಿದ್ದು ಆಕಸ್ಮಿಕವೇ?

ಯದುವೀರ್ : ಮನೆಯಲ್ಲೇ ಸಮಾಜ ಸೇವೆ ಶುರುವಾಗಬೇಕು. ತಂದೆ ತಾಯಿಯ ಸೇವೆ ಮಾಡಿ ನಂತರ ಸಮಾಜದ ಸೇವೆ ಮಾಡಬೇಕು. ನಾನು ಆಕಸ್ಮಿಕವಾಗಿ ಬಂದಿಲ್ಲ. ರಾಜಕೀಯಕ್ಕೆ ಬಂದು, ಪದವಿ ಪಡೆದು ಸೇವೆ ಮಾಡಬೇಕೆಂದಿಲ್ಲ. ಸಮಾಜದ ಪ್ರತಿಯೊಬ್ಬರೂ ಸೇವೆ ಮಾಡಬಹುದು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು, ಡಿಡಿಪಿಐ ಜವರೇಗೌಡ, ಬಿಇಒ ಎಸ್.ರೇವಣ್ಣ, ಕಲಿಸು ಫೌಂಡೇಷನ್ ಸಿಇಒ ಎಂ.ಎಂ.ನಿಖಿಲೇಶ್ ಮತ್ತಿತರರು ಉಪಸ್ಥಿತರಿದ್ದರು.

ಚಾಮುಂಡಿಬೆಟ್ಟದ ಸ್ಥಿರ, ಚರಾಸ್ತಿಗಳ ಯಥಾಸ್ಥಿತಿ ಕಾಪಾಡುವಂತೆ ನ್ಯಾಯಾಲಯ ಆದೇಶ ನೀಡಿದ್ದು, ಅದನ್ನು ಸರ್ಕಾರ ಪಾಲಿಸಬೇಕು.

-ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದ



ಕಲಿಸು ಫೌಂಡೇಷನ್ ವತಿಯಿಂದ ಕುಂಬಾರ ಕೊಪ್ಪಲಿನ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಿರ್ಮಿಸಿರುವ 100ನೇ ಗ್ರಂಥಾಲಯವನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿದರು.

ನಾಳೆ, ನಾಡಿದ್ದು, ಮೈಸೂರಲ್ಲಿ ಫ್ಯಾಷನ್ ಪ್ರದರ್ಶನ ಹೈ ಲೈಫ್ ಬ್ರೈಡ್ಸ್

ಮೈಸೂರು, ಸೆ.9– ಹೈ ಲೈಫ್ ಬ್ರೈಡ್ಸ್ ವತಿಯಿಂದ ನಗರದ ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ಸೆ.11ರಿಂದ ಎರಡು ದಿನಗಳ ಹೈ ಬ್ರೈಡಲ್ ಕೌಚರ್, ಆಭರಣಗಳು ಪರಿಕರಗಳು ಮತ್ತು ವಿವಿಧ ಬಗೆಯ ವಿನ್ಯಾಸ ಮತ್ತು ಕರಕುಶಲತೆಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಆಯೋಜಿಸಲಾಗಿದೆ. ಮೇಳದಲ್ಲಿ ಕರಕುಶಲತೆಗಳ ಗ್ಲಿಟ್ಜ್, ಟ್ಯಾಂಟಲೈಸಿಂಗ್ ಟ್ಯೂನಿಕ್ಸ್, ಚಿಕ್ ಕೇಪ್‌ಗಳು, ಸಿಜ್ಲಿಂಗ್ ಸಿಲ್ಕ್‌ನಲ್ಲಿ ಸೆಲೆಬ್ರೆಟಿ ಸ್ಟೈಲ್ ಜಾಕೆಟ್ ಮತ್ತು ಡ್ರೇಪ್‌ಗಳು, ಮೋಡಿ ಮಾಡುವ ಕಸೂತಿಯೊಂದಿಗಿನ ವಧುವಿನ ಉಡುಗೆಗಳು ಸೇರಿದಂತೆ ಅನೇಕ ಆಭರಣ ಮತ್ತು ಪರಿಕರಗಳು ಲಭ್ಯವಿದ್ದು, ಬೆಳಿಗ್ಗೆ 9ರಿಂದ ರಾತ್ರಿ 10 ಗಂಟೆವರೆಗೆ ಉಚಿತ ಪ್ರವೇಶವಿರಲಿದೆ ಎಂದು ಶೋಮಿಕಾ ಎಸ್.ರಾವ್, ಶ್ರೀಕಾಂತ್ ತಿಳಿಸಿದ್ದಾರೆ.



ದೀಪಾವಳಿಯೊಳಗೆ ಕಾಂಗ್ರೆಸ್ ಸರ್ಕಾರ ಢಮಾರ್



ಹುಬ್ಬಳ್ಳಿ: ದೀಪಾವಳಿ ಒಳಗಡೆ ಕಾಂಗ್ರೆಸ್ ಸರ್ಕಾರ ಢಮಾರ್ ಆಗೋದು ಪಕ್ಕಾ ಎಂದು ವಿಧಾನ ಪರಿಷತ್ ಸದಸ್ಯ ಸಿಟಿ ರವಿ ಭವಿಷ್ಯ ನುಡಿದಿದ್ದಾರೆ. ಸಿದ್ದರಾಮಯ್ಯ ಅವರ ಪಾಪದ ಕೊಡ ತುಂಬಿದೆ. ಕಾಂಗ್ರೆಸ್ ಈಗ ಟೈಮ್ ಬಾಂಬ್ ಫಿಕ್ಸ್ ಮಾಡಿದೆ. ಸಿದ್ದರಾಮಯ್ಯ ಜೊತೆಗೆ ಬಂಡೆಯಂತೆ ಜೊತೆಗಿರುತ್ತೇನೆ ಎನ್ನುತ್ತಿರುವವರೇ ಡೇಂಜರ್. ಡಿಕೆ ಶಿವಕುಮಾರ್ ಒಂದು ಬಾಂಬ್, ಪ್ರಿಯಾಂಕ್ ಖರ್ಗೆ, ಎಂಬಿ ಪಾಟೀಲ್ ಯಾವ ಯಾವ ಬಾಂಬ್ ಇಟ್ಟಿದ್ದಾರೆ ಅವರಿಗೆ ಕೇಳಬೇಕು ಎಂದರು. ಕಾಂಗ್ರೆಸ್ ಪಕ್ಷದ ಶಾಸಕರು, ಸಚಿವರು ಮತ್ತು ಮುಖಂಡರು ಸಿದ್ದರಾಮಯ್ಯ ರಾಜೀನಾಮೆಗೆ ಸಿದ್ಧತೆ ನಡೆಸಿದ್ದಾರೆ. ರಾಜೀನಾಮೆಗೆ ಸಮಯವನ್ನೂ ನಿಗದಿಪಡಿಸಿದ್ದಾರೆ. ಅದಕ್ಕೆ ಪೂರಕವಾಗಿ ಕೆಲವು ಸಚಿವರು ತಾವು ಸಹ ಮುಖ್ಯಮಂತ್ರಿ ಆಕಾಂಕ್ಷಿ ಎಂದು ಹೇಳಿಕೆ ನೀಡುತ್ತಿದ್ದಾರೆ ಎಂದು ತಿಳಿಸಿದರು. ವಿವಿಧ ಹಗರಣದಗಳು ಸರ್ಕಾರದ ವಿರುದ್ಧ ಕೇಳಿ ಬಂದಿವೆ ಹೀಗಾಗಿ ಬಹಳ ದಿನ ಸಿದ್ದರಾಮಯ್ಯ ಸಿಎಂ ಆಗಿ ಇರುವುದಿಲ್ಲ ಎಂದು ತಿಳಿಸಿದರು.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಮೈಸೂರು ಸಿಟಿ. ಎ ಬ್ಲಾಕ್, 3ನೇ ಸ್ಟೇಜ್, ದಟ್ಟಗಳ್ಳಿ, 3ನೇ ಎ ಮೇನ್, 10ನೇ ಕ್ರಾಸ್ ಇಲ್ಲಿ ವಾಸವಾಗಿರುವ ಶ್ರೀಯುತ. **ಲೇ.ಚನ್ನಪ್ಪ** ರವರ ಮಗನಾದ ಶ್ರೀಯುತ. **ಶಿವಕುಮಾರ್.ಎಂ.ಸಿ.** ರವರು ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಕಸಬಾ ಹೋಬಳಿ. ಸಿಂಧುವಳ್ಳಿ ಗ್ರಾಮದ ಅಂಗಾಯತರ ಬೀದಿಯಲ್ಲಿ ವಾಸವಾಗಿರುವ ಶ್ರೀಯುತ **ಎನ್. ಮಹೇಶ್** ರವರ ಧರ್ಮಪತ್ನಿಯಾದ **ಶ್ರೀಮತಿ. ಚೈತ್ರಾ ಎಂ.** ರವರ ಹಕ್ಕು, ಹಿತಾಶಕ್ತಿ, ಮಾಲೀಕತ್ವ, ಸ್ವಾಧೀನಾನುಭವಕ್ಕೆ ಸೇರಿದ ನಂಜನಗೂಡು ತಾಲ್ಲೂಕು, ದೊಡ್ಡಕೌಲಂದೆ ಹೋಬಳಿ, ತರದಲೆ ಗ್ರಾಮಕ್ಕೆ ಸೇರಿದ ಸರ್ವೆ ನಂ. 21 ರಲ್ಲಿರುವ ವಿಸ್ತೀರ್ಣ 02 ಎಕರೆ 02 ಗುಂಟೆ ಮತ್ತು ಸರ್ವೆ ನಂ. 22 ರಲ್ಲಿರುವ ವಿಸ್ತೀರ್ಣ 02 ಎಕರೆ 04 ಗುಂಟೆ ಜಮೀನು. ಇವುಗಳ ಒಟ್ಟು ವಿಸ್ತೀರ್ಣ 04 ಎಕರೆ 06 ಗುಂಟೆ ಜಮೀನು. ಇದಕ್ಕೆ ಚೆಕ್ಕುಬಂಧಿ: **ಪೂರ್ವಕ್ಕೆ:** ರತ್ನಮ್ಮ ಉ ಶಾರದಮ್ಮ ರವರ ಜಮೀನು, **ಪಶ್ಚಿಮಕ್ಕೆ:** ಸ.ನಂ. 19 ಮತ್ತು 20 ರ ಜಮೀನು, **ಉತ್ತರಕ್ಕೆ:** ನೀರು ಹರಿಯುವ ಹಳ್ಳ, **ದಕ್ಷಿಣಕ್ಕೆ:** ರಸ್ತೆ, ಜಮೀನುಗಳನ್ನು ಕ್ರಯಕ್ಕೆ ಪಡೆಯಲು ಇಚ್ಚಿಸಿದ್ದು, ಒಂದು ಪಕ್ಷ ಸದರಿ ಈ ಜಮೀನುಗಳ ಮೇಲೆ ಬೇರೆ ಯಾವುದೇ ವ್ಯಕ್ತಿಗಳ ಹಕ್ಕು. ಹಿತಾಶಕ್ತಿ, ಮಾಲೀಕತ್ವ, ಸ್ವಾಧೀನಾನುಭವ ಅಥವಾ ಬೇರೆ ರೀತಿಯ ತಕರಾರು ಇದ್ದಲ್ಲಿ ಈ ಪತ್ರಿಕೆ ಪ್ರಕಟಣೆಗೊಂಡ 15 ದಿನಗಳ ಒಳಗಾಗಿ ಖುದ್ದಾಗಿ ತಕರಾರನ್ನು ನಮ್ಮ ಕಕ್ಷಿದಾರರ ವಕೀಲರಾದ ನಮ್ಮ ಕಛೇರಿಯಲ್ಲಿ ಸೂಕ್ತ ದಾಖಲಾತಿಗಳೊಂದಿಗೆ ಸಲ್ಲಿಸಿವುದು, ಆಗೊಂದು ವೇಳೆ ಯಾವುದೇ ತಂಟೆ ತಕರಾರುಗಳು ಸದರಿ ಅವಧಿಯ ಒಳಗಾಗಿ ತಲುಪದಿದ್ದ ಪಕ್ಷದಲ್ಲಿ ಮೇಲೆ ಹೇಳಿದ ಸ್ವತ್ತುಗಳನ್ನು ನಮ್ಮ ಕಕ್ಷಿದಾರರು ಶುದ್ಧ ಕ್ರಯ ನೋಂದಣಿ ಮಾಡಿಕೊಳ್ಳುತ್ತಾರೆಂದು ತಿಳಿಸುತ್ತೇನೆ.

ಅರ್ಜಿದಾರರ ಪರ ವಕೀಲರು
ಸತ್ಯನಾರಾಯಣ, ಜಿ.ಎಸ್ಸಿ., ಎಲ್.ಎಲ್.ಬಿ.
ವಕೀಲರು & ನೋಟರಿ
ಕಛೇರಿ :ನಂ.2. ಮೊದಲ ಅಂತಸ್ತು
ಬೆಂಗಳೂರು–ಊಟಿ ರಾಷ್ಟ್ರೀಯ ಹೆದ್ದಾರಿ.
ಗುಂಡ್ಲುಪೇಟೆ ಟೌನ್–571111,
ಚಾಮರಾಜನಗರ ಜಿಲ್ಲೆ.

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಪಿ ಎಂ ಶ್ರೀ ಕೇಂದ್ರೀಯ ವಿದ್ಯಾಲಯ ಮೈಸೂರು
ಜಿ.ಐ.ಟಿ.ಬಿ ಪ್ರೆಸ್ ಕ್ಯಾಂಪಸ್, ಸಿದ್ಧಾರ್ಥನಗರ, ಮೈಸೂರು – ೫೭೦ ೦೧೧
पी एम श्री केन्द्रीय विद्यालय मैसूरु,
जी.आई.टी.बी प्रेस परिसर सिद्धार्थनगर, मैसूरु - ५७००११
(शिक्षा मंत्रालय, भारत सरकार के अधीन एक स्वायत निकाय)
PM SHRI KENDRIYA VIDYALAYA, MYSURU,
GITB, PRESS CAMPUS, SIDDHARTHNAGAR, MYSURU - 570011
(An Autonomous Body Under MOE, Government of India)
0821-2473515, Web site: https://mysore.kvs.ac.in
Email-kvmysore@gmail.com

2024–2025ರ ಅವಧಿಗೆ ಒಪ್ಪಂದದ ಆಧಾರದ ಮೇಲೆ ಸಮಿತಿಯನ್ನು ರಚಿಸಲು ವಿವಿಧ ಹುದ್ದೆಗಳಿಗೆ 13.09.2024 ರಂದು KV ಮೈಸೂರಿನಲ್ಲಿ ಸಂದರ್ಶನ ನಡೆಯುತ್ತದೆ.

ನೋಂದಣಿ ಸಮಯ- 8:30AM to 10:30AM.
ಸಂದರ್ಶನದ ಸಮಯ-11:00 AM Onwards

Date	Post & Subject
13.09.2024	ಪದನಾಮ: TGT- ಸಂಸ್ಕೃತ, ಸಮಾಜ ವಿಜ್ಞಾನ, ಹಿಂದಿ, ಇಂಗ್ಲೀಷ್
	ಪದನಾಮ: ಪ್ರಾಥಮಿಕ ಶಿಕ್ಷಕ
	ಪದನಾಮ: ಕ್ರೀಡಾ ತರಬೇತುದಾರ, ನರ್ಸ್
Note:	1. ಅಭ್ಯರ್ಥಿಗಳು ಸರಿಯಾಗಿ ಭರ್ತಿ ಮಾಡಿದ ಅರ್ಜಿ ನಮೂನೆ, ಅರ್ಹತೆಯ ಮೂಲ ಪ್ರಮಾಣಪತ್ರಗಳೊಂದಿಗೆ ಒಂದು ಸೆಟ್ ಪ್ರಮಾಣಪತ್ರದ ಸ್ವಯಂ–ದೃಢೀಕರಿಸಿದ ಪ್ರತಿಗಳು ಮತ್ತು 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳನ್ನು ನೋಂದಣಿಗಾಗಿ ವರದಿ ಮಾಡಬೇಕು. 2. ಸಂದರ್ಶನಕ್ಕೆ ಯಾವುದೇ ಟಿಎ/ಡಿಎ ನೀಡಲಾಗುವುದಿಲ್ಲ. 3. ಅರ್ಜಿ ನಮೂನೆಯ ಅರ್ಹತಾ ಮಾನದಂಡಗಳು, ಕನಿಷ್ಠ ವಿದ್ಯಾರ್ಹತೆ, ವೇತನ ಇತ್ಯಾದಿಗಳನ್ನು ಡೌನ್‌ಲೋಡ್ ಮಾಡಲು ದಯವಿಟ್ಟು ವೆಬ್‌ಸೈಟ್‌ಗೆ ಭೇಟಿ ನೀಡಿ: https://mysore.kvs.ac.in/

ಸಹಿ/–ಪ್ರಾಂಶುಪಾಲರು

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ
ಕುದೇರು ಗ್ರಾಮ ಮತ್ತು ಅಂಚೆ, ಸಂತೇಮರಹಳ್ಳಿ ಹೋಬಳಿ, ಚಾಮರಾಜನಗರ - 571 316
ದೂರವಾಣಿ :08226-234848 E-mail: purchamul@gmail.com

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ)

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಕುದೇರು ಇವರ ಪರವಾಗಿ ವಿವಿಧ ಸರಕು/ಸೇವೆಗಳನ್ನು ಪಡೆಯುವ ಸಂಬಂಧ ನಿಗದಿ ಪಡಿಸಲಾದ ಷರತ್ತುಗಳನೊಳಗೊಂಡ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖೇನ ಟೆಂಡರ್‌ನ್ನು ವ್ಯವಸ್ಥಾಪಕ ನಿರ್ದೇಶಕರು ಇವರ ಪರವಾಗಿ ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರ್‌ಮೆಂಟ್ ಪ್ಲಾಟ್ ಫಾರಂ **www.kppp.karnataka.gov.in** ಈ ವೆಬ್‌ಸೈಟ್‌ನಲ್ಲಿ ಪಡೆದು ಕೆಳಗಿನ ವಿವರದಂತೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರ.ಸಂ	ಸರಕು / ಸೇವೆಗಳವಿವರ	ಟೆಂಡರ್/ಐ.ಎಫ್.ಟಿ ಸಂಖ್ಯೆ
01	Providing Transportation services to supply sachet milk in insulated vehicle from Chamul to different destinations within Chamarajanagara district on Biennial rate contract basis.	KMF/2024-25/SE2460
02	Distribution vehicle tender to supply WMP under Ksheera Bhagya Scheme on Biennial rate contract basis	KMF/2024-25/SE2461
03	Providing transportation Services to Supply Milk & Milk Products from CHAMUL Dairy to Different Places Of Kerala District.	KMF/2024-25/SE2462
04	Providing transportation Services to Supply Milk & Milk Products from CHAMUL Dairy to Tirupur District.	KMF/2024-25/SE2463

ಅ	ಇ–ಟೆಂಡರ್ ದಾಖಲೆಗಳು ಲಭಿಸುವ ದಿನಾಂಕ ಮತ್ತು ಸಮಯ	10.09.2024 ರಿಂದ 09.10.2024 ಸಂಜೆ 05:00 ಗಂಟೆವರೆಗೆ
ಆ	ಪ್ರೀ–ಬಿಡ್ ಮೀಟಿಂಗ್ ಮತ್ತು ಟೆಂಡರ್ ಬಗ್ಗೆ ಸ್ಪಷ್ಟನೆ ದಿನಾಂಕ ಮತ್ತು ಸಮಯ	03.10.2024 ಬೆಳಗ್ಗೆ 11:00 ಗಂಟೆಗೆ
ಇ	ಟೆಂಡರ್ ಸಲ್ಲಿಸುವ/ನಮೂದಿಸುವ ಕೊನೆಯ ದಿನಾಂಕ ಮತ್ತು ಸಮಯ	09.10.2024 ಸಂಜೆ 05:00ಗಂಟೆವರೆಗೆ
ಈ	ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	10.10.2024 ಸಂಜೆ 05:05 ಗಂಟೆಗೆ
ಉ	ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	ತಿಳಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ವ್ಯವಸ್ಥಾಪಕರು (ಮಾರುಕಟ್ಟೆ–ಮೊ.ಸಂ 9606700123)ರವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/–
ವ್ಯವಸ್ಥಾಪಕ ನಿರ್ದೇಶಕರು

Ph: 0821-2423094
ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಸಂಘ ನಿ., ಮೈಸೂರು

ನಂ. 126, ಹೊಸ ಸಂತೇಪೇಟೆ, ಬಂಬೂ ಬಜಾರ್, ಮೈಸೂರು–570 021
GSTIN: 29AAJAM2503Q1Z4

ಎಂ.ಸಿ.ಡಿ.ಸಿ.ಸಿ. ಡಬ್ಲ್ಯು. ಸ್ಟೋರ್ಸ್
ಕ್ರ.ಸಂ. 114/2024–25 ದಿನಾಂಕ: 4–9–2024

ಪತ್ರಿಕಾ ಪ್ರಕಟಣೆಗಾಗಿ

ಮೈಸೂರು ಮತು ಚಾಮರಾಜನಗರ ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಸಂಘ ನಿ, ಮೈಸೂರು ಇದರ 2023–24ನೇ ಸಾಲಿನ 60ನೇ ವಾರ್ಷಿಕ ಸರ್ವ ಸದಸ್ಯರ ಮಹಾ ಸಭೆಯನ್ನು ದಿನಾಂಕ 15–09–2024ರ ಭಾನುವಾರದಂದು ಬೆಳಿಗ್ಗೆ 11–30 ಘಂಟೆಗೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಸಂಘ ನಿ, ಮೈಸೂರು ನಂ. 66 ಹೊಸ ಸಂತೇಪೇಟೆ, ಬಂಬೂ ಬಜಾರ್, ಮೈಸೂರು ಇಲ್ಲಿನ ಆವರಣದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಗುಲಾಂ ರಬ್ಬಾನಿರವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಲಾಗಿದೆ. ಸದಸ್ಯರೆಲ್ಲರೂ ಸಕಾಲಕ್ಕೆ ಆಗಮಿಸಬೇಕಾಗಿ ಕೋರಿದೆ. ಹೆಚ್ಚಿನ ವಿವರಗಳಿಗೆ ಕೇಂದ್ರ ಕಛೇರಿಯ ವೇಳೆಯಲ್ಲಿ ಸಂಘದ ಕೇಂದ್ರ ಕಛೇರಿಯನ್ನು ಸಂಪರ್ಕಿಸುವುದು.

ಕಾರ್ಯಕಾರಿ ಮಂಡಳಿಯ ಅಪ್ಪಣೆಯ ಮೇರೆಗೆ
ಸಹಿ/– (ಮನೋಜ್ ಕುಮಾರ್ ಎಸ್.ಹೆಚ್), ವ್ಯವಸ್ಥಾಪಕ ನಿರ್ದೇಶಕರು(ಪ್ರ) ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಎಂ.ಸಿ.ಡಿ.ಸಿ.ಸಿ.ಡಬ್ಲ್ಯೂ ಎಸ್. ನಿ. ಮೈಸೂರು